# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 19 ಬುಧವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 94 | ಪುಟಗಳು: 10
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com




## ಇಂದು ಮೈಸೂರಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ

ಮೈಸೂರು, ಜು. 18 (ಆರ್‌ಕೆ)– ಮೈಸೂರು ಮಹಾನಗರಪಾಲಿಕೆ ವತಿಯಿಂದ ನಾಳೆ (ಜು.19) ಮೈಸೂರಿನಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಲಿದೆ.

ಅರಮನೆ ಸುತ್ತ ಸಯ್ಯಾಜಿರಾವ್ ರಸ್ತೆ, ಓಲ್ಡ್ ಬ್ಯಾಂಕ್ ರಸ್ತೆ, ಮಂಡಿ ಮೊಹಲ್ಲಾ, ಗಾಂಧಿ ಸ್ಕ್ವೇರ್, ಮಕ್ಕಾಜಿ ಚೌಕ, ಶಿವರಾಂಪೇಟೆ ರಸ್ತೆ, ಡಿ.ದೇವರಾಜ ಅರಸು ರಸ್ತೆ ಸೇರಿದಂತೆ ಮೈಸೂರು ನಗರದಾದ್ಯಂತ ಪಾದಚಾರಿಗಳು ಓಡಾಡಲೆಂದು ಇರುವ ಫುಟ್‌ಪಾತ್ ಅನ್ನು ಅಂಗಡಿಯವರು ಒತ್ತುವರಿ ಮಾಡಿದ್ದು, ಎಲ್ಲೆಂದರಲ್ಲಿ ಪೆಟ್ಟಿಗೆ ಅಂಗಡಿಗಳು ನಾಯಿಕೊಡೆಯಂತೆ ತಲೆ ಎತ್ತಿರುವ ಕಾರಣ, ಸಾರ್ವಜನಿಕರು ಫುಟ್‌ಪಾತ್ ಬಿಟ್ಟು ರಸ್ತೆಗಿಳಿಯುತ್ತಿರುವುದು ಅಪಘಾತಕ್ಕೆ ಕಾರಣವಾಗುತ್ತಿದೆ ಎಂಬ ಕಾರಣಕ್ಕೆ ಅಂತಹ ಅಂಗಡಿ–ಮುಂಗಟ್ಟುಗಳನ್ನು ತೆರವುಗೊಳಿಸಲು ಕಳೆದ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ನಿಗದಿಯಾಗಿದ್ದಂತೆ ಮೇಯರ್ ಶಿವಕುಮಾರ್, ಉಪಮೇಯರ್ ಡಾ. ರೂಪಾ ಅವರು ಸೋಮವಾರ (ಜು.17) ಸಂಜೆ 4 ಗಂಟೆಗೆ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಹಿರಿಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್ ಹಾಗೂ ಇತರ ಅಧಿಕಾರಿಗಳೊಂದಿಗೆ ನಗರ ಪ್ರದಕ್ಷಿಣೆ ಮಾಡಿ ಫುಟ್‌ಪಾತ್ ಅತಿಕ್ರಮಣ ಮಾಡಿಕೊಂಡಿರುವ ಸ್ಥಳ ಪರಿಶೀಲನೆ ನಡೆಸಿದ್ದರು.

ಅದೇ ವೇಳೆ ಇಂದಿನಿಂದ (ಜು.18) ತೆರವು ಕಾರ್ಯಾಚರಣೆ ಮಾಡುವುದಾಗಿಯೂ ಘೋಷಿಸಿದ್ದ ಮೇಯರ್, ಪೂರ್ಣ ಪ್ರಮಾಣದಲ್ಲಿ ಸಿದ್ಧತೆ ಮಾಡಿಕೊಂಡು ನಾಳೆ (ಜು.19)ಯಿಂದ ಫುಟ್‌ಪಾತ್ ತೆರವು ಕಾರ್ಯಾಚರಣೆ ನಡೆಸುತ್ತೇವೆ ಎಂದು ಅಧಿಕಾರಿಗಳು ಹೇಳಿದ್ದಾರೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಾರ್ವಜನಿಕರ ಹಿತದೃಷ್ಟಿಯಿಂದ ಫುಟ್‌ಪಾತ್ ಒತ್ತುವರಿ ತೆರವು ಮಾಡುವುದು ಅನಿವಾರ್ಯವಾಗಿದ್ದು, ಅದಕ್ಕೆ ಜನಪ್ರತಿನಿಧಿಗಳ ಬೆಂಬಲವೂ ಇದೆ. ಅದಕ್ಕಾಗಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸಿದ್ಧರಾಗಿದ್ದಾರೆ ಎಂದು ಶಿವಕುಮಾರ್ ತಿಳಿಸಿದರು.

## ಮೈಸೂರಿನ ಟಾಂಗಾವಾಲಾಗಳ ಪರಿಸ್ಥಿತಿ ಶೋಚನೀಯ

# ನಿಲ್ದಾಣಗಳ ಅವ್ಯವಸ್ಥೆಯಿಂದ ಹತ್ತಾರು ಕುದುರೆ ಸಾವು

ಮೈಸೂರು, ಜು.18(ಬಿಎಲ್‌ಯು)– ಮೈಸೂರಿನ ಪಾರಂಪರಿಕತೆಯಲ್ಲಿ ಟಾಂಗಾ ಕೂಡ ವಿಶೇಷ ಸ್ಥಾನ ಪಡೆದಿದೆ. ರಾಜ ಮಹಾರಾಜರ ಕಾಲದಿಂದಲೂ ಪ್ರಯಾಣಕ್ಕೆ ಪ್ರಾಮುಖ್ಯತೆ ಪಡೆದಿರುವ ಮೈಸೂರು ಟಾಂಗಾ, ಪ್ರವಾಸಿಗರಿಗೆ ಈಗಲೂ ಅಚ್ಚುಮೆಚ್ಚು. ಆದರೆ ಮೈಸೂರಿನ ಟಾಂಗಾ ನಿಲ್ದಾಣಗಳ ಪರಿಸ್ಥಿತಿ ಶೋಚನೀಯವಾಗಿದೆ. ನಗರ ಪಾಲಿಕೆಯ ಬೇಜವಾಬ್ದಾರಿತನದಿಂದ ಹತ್ತಾರು ಕುದುರೆಗಳು ಸಾವಿನ ದವಡೆಗೆ ಸಿಲುಕುತ್ತಿವೆ.

ಮೈಸೂರಿಗೆ ಬರುವ ದೇಶ–ವಿದೇಶಿ ಪ್ರವಾಸಿಗರು ಟಾಂಗಾ ಸವಾರಿಗೆ ಆಸಕ್ತಿ ತೋರುತ್ತಾರೆ. ಟಾಂಗಾ ಹತ್ತಿ ಮೈಸೂರು ಅರಮನೆ ಪ್ರದಕ್ಷಿಣೆ ಹಾಕದಿದ್ದರೆ ಮೈಸೂರು ಪ್ರವಾಸವೇ ಪೂರ್ಣಗೊಳ್ಳದು ಎಂಬ ಭಾವನೆ ಇದೆ. ಹಾಗಾಗಿ ಮೈಸೂರಿಗೆ ಬರುವ ಬಹಳಷ್ಟು ಪ್ರವಾಸಿಗರು ಟಾಂಗಾ ಸವಾರಿ ಮಾಡುತ್ತಾರೆ.

ಆದರೆ ಪ್ರವಾಸಿಗರಿಗೆ ವಿಶಿಷ್ಟ ಅನುಭವ ನೀಡುವ ಟಾಂಗಾವಾಲಾಗಳ ಪರಿಸ್ಥಿತಿ ಹೇಳತೀರದಾಗಿದೆ. ಕಳೆದ 13 ವರ್ಷದ ಹಿಂದೆ ಸರ್ಕಾರ ನರ್ಮ್ ಯೋಜನೆಯಡಿ ಸಾಲದ ರೂಪದಲ್ಲಿ 11 ಸಾರೋಟ್‌ಗಳನ್ನು ನೀಡಿತ್ತು. ಇನ್ನು 9 ಸಾರೋಟ್‌ಗಳನ್ನು ನೀಡಬೇಕಿದೆ. ಆದರೆ 13 ವರ್ಷವಾದರೂ ನಗರ ಪಾಲಿಕೆ ಸಾರೋಟ್ ಕೊಟ್ಟಿಲ್ಲ. ನಗರ ಪಾಲಿಕೆಗೆ ಅಲೆ ಅಲೆದು ಟಾಂಗಾವಾಲಾಗಳ ಚಪ್ಪಲಿ ಸವೆದಿದೆಯೇ ಹೊರತು ಈ ತನಕ ಸಾರೋಟ್ ದಕ್ಕಿಲ್ಲ.

ಆದರೂ ತಮ್ಮದೆ ಬಂಡವಾಳದಲ್ಲಿ ಹಲವರು ಸಾರೋಟ್ ಹಾಗೂ ಟಾಂಗಾಗಳನ್ನು ಖರೀದಿ ಮಾಡಿದ್ದಾರೆ. ಮೈಸೂರಿನಲ್ಲಿ 25 ಸಾರೋಟ್ ಹಾಗೂ 125 ಟಾಂಗಾಗಳಿವೆ. ಬಿಜಾಪುರದಿಂದ ಕಾಟೇವಾಡಿ ತಳಿಯ ಕುದುರೆಯನ್ನು ಖರೀದಿ ಮಾಡಿದ್ದಾರೆ. ಸಾರೋಟ್‌ಗೆ 5.5 ಲಕ್ಷ, ಟಾಂಗಾಗೆ 1.5 ಲಕ್ಷ ರೂ. ಬೆಲೆ ಇದೆ. ಸಾಲ–ಸೋಲ ಮಾಡಿ ಬಂಡವಾಳ ಹೂಡಿ ಟಾಂಗಾ ಓಡಿಸುತ್ತಿರುವ ತಮಗೆ ಸೂಕ್ತ ಟಾಂಗಾ ನಿಲ್ದಾಣವಿಲ್ಲ ಎಂಬುದು ಟಾಂಗಾವಾಲಾಗಳ ಅಳಲು.





> "ಕುದುರೆಗಳು ನೀರು ಕುಡಿಯಲು ತೊಟ್ಟಿ ವ್ಯವಸ್ಥೆ ಇಲ್ಲ. ದೂರದ ನಲ್ಲಿಗಳಿಂದ ಬಕೆಟ್‌ಗಳಲ್ಲಿ ನೀರು ತಂದು ಕುದುರೆಗಳಿಗೆ ನೀರು ಕುಡಿಸಬೇಕು. ಈಗ ಇರುವ 150 ಟಾಂಗಾಗಳನ್ನು ನಿಲ್ಲಿಸಲು ಸ್ಥಳಾವಕಾಶ ಕೂಡ ಇಲ್ಲ. ನಮ್ಮ ಸಮಸ್ಯೆಗಳನ್ನು ಪರಿಹರಿಸುವಂತೆ ಸಚಿವರು, ಶಾಸಕರು, ಅಧಿಕಾರಿಗಳಿಗೆ ಎಷ್ಟೇ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ.
> –ಫಯಾಜ್ ಅಹಮ್ಮದ್, ಟಾಂಗಾವಾಲಾಗಳ ಸಂಘದ ಅಧ್ಯಕ್ಷ

ಮೈಸೂರಿನ ಅಗ್ರಹಾರ, ಕುಕ್ಕರಹಳ್ಳಿ ಕೆರೆ, ಗ್ರಾಮಾಂತರ ಬಸ್ ನಿಲ್ದಾಣ ಹಾಗೂ ಆರ್‌ಎಂಸಿ ಬಸ್ ನಿಲ್ದಾಣದ ಬಳಿ ಟಾಂಗಾ ನಿಲ್ದಾಣಗಳಿವೆ. ಬಹುತೇಕ ನಿಲ್ದಾಣದಲ್ಲಿ ನೆಲಕ್ಕೆ ಹಾಕಿರುವ ಚಪ್ಪಡಿ ಕಲ್ಲುಗಳು ಮೇಲೆ ಎದ್ದಿವೆ. ಇದರಿಂದ ಬಹಳಷ್ಟು ಕುದುರೆಗಳು ಎಡವಿ, ಕಾಲು ಮುರಿದುಕೊಂಡಿವೆ. ಇಂತಹ ಕುದುರೆಗಳನ್ನು ಪಿಂಜರಾಪೋಲ್‌ಗೆ ನೀಡಿದ್ದೇವೆ. ಇಲ್ಲಿವರೆಗೆ ಹತ್ತಾರು ಕುದುರೆಗಳು ಸಾವನ್ನಪ್ಪಿವೆ ಎಂದು ಟಾಂಗಾವಾಲಾಗಳು ತಮ್ಮ ನೋವು ತೋಡಿಕೊಂಡರು.

ಟಾಂಗಾ ನಿಲ್ದಾಣಗಳನ್ನು ನಾವೇ ರಿಪೇರಿ ಮಾಡಿಸಿಕೊಳ್ಳೋಣ ಅಂದರೆ ನಮಗೆ ಬರುವ ಆದಾಯ ಅಷ್ಟಕಷ್ಟೆ. ಒಂದು ದಿನ ಸಂಪಾದನೆ ಆದರೆ ಮೂರು ದಿನ ನಡೆಯುವುದಿಲ್ಲ. ಒಂದು ದಿನಕ್ಕೆ ಸಾವಿರ ರೂ. ದುಡಿಮೆ ಮಾಡಿದರೆ, ಅದರಲ್ಲಿ 450 ರೂಪಾಯಿಗಳನ್ನು ಕುದುರೆಯ ಹುಲ್ಲು ಹಾಗೂ ತಿಂಡಿಗೆ ಖರ್ಚು ಮಾಡಬೇಕು. ಜೊತೆಗೆ ಕುದುರೆಗಳು ಅನಾರೋಗ್ಯಕ್ಕೀಡಾದರೆ ಅವುಗಳ ಔಷಧೋಪಚಾರಗಳಿಗೆ ಹಣ ಭರಿಸಬೇಕು. ಹೀಗಿರುವಾಗ ಟಾಂಗಾ ನಿಲ್ದಾಣಗಳನ್ನು ನಾವು ಹೇಗೆ ರಿಪೇರಿ ಮಾಡಿಸಿಕೊಳ್ಳಲು ಸಾಧ್ಯ ಹೇಳಿ ಎಂದು ಟಾಂಗಾವಾಲಾಗಳ ಸಂಘದ ಅಧ್ಯಕ್ಷ ಫಯಾಜ್ ಅಹಮ್ಮದ್ ಪ್ರಶ್ನಿಸಿದರು.

ಟಾಂಗಾವನ್ನೆ ನಂಬಿ ಸುಮಾರು 250 ಜನರು ಜೀವನ ಸಾಗಿಸುತ್ತಿದ್ದೇವೆ. ಮೈಸೂರಿನ ಪಾರಂಪರಿಕತೆಯ ಪ್ರತೀಕವಾದ ಟಾಂಗಾಗಳನ್ನು ಉಳಿಸಲು ಈಗಲಾದರೂ ಸರ್ಕಾರ ಟಾಂಗಾ ನಿಲ್ದಾಣಗಳನ್ನು ರಿಪೇರಿ ಮಾಡಿಸಬೇಕು. ಜೊತೆಗೆ ಹೊಸ ಟಾಂಗಾ ನಿಲ್ದಾಣಗಳನ್ನು ನಿರ್ಮಾಣ ಮಾಡುವಂತೆಯೂ ಸರ್ಕಾರಕ್ಕೆ ಮನವಿ ಮಾಡಿದರು.

## ಮೈಸೂರಲ್ಲಿ ಮುಂದುವರೆದ ಪ್ಲಾಸ್ಟಿಕ್ ವಿರುದ್ಧ ಕಾರ್ಯಾಚರಣೆ

### ಒಂದೇ ಗೋಡೌನ್‌ನಲ್ಲಿ 804 ಕೆಜಿ ಪ್ಲಾಸ್ಟಿಕ್ ಬ್ಯಾಗ್ ವಶ



ಮೈಸೂರು,ಜು.18(ಆರ್‌ಕೆ)– ಮೈಸೂರಿನ ಬಸವೇಶ್ವರ ರಸ್ತೆ ಗೋದಾಮಿನಲ್ಲಿ ಸಂಗ್ರಹಿಸಿಟ್ಟಿದ್ದ 804 ಕೆಜಿ ಪ್ಲಾಸ್ಟಿಕ್ ಬ್ಯಾಗ್ ಅನ್ನು ಮೈಸೂರು ಮಹಾ ನಗರಪಾಲಿಕೆ ಆರೋಗ್ಯ ಶಾಖೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಅಂಗಡಿಯಲ್ಲಿ ಮಾರಾಟ ಮಾಡಲೆಂದು ದಾಸ್ತಾನು ಮಾಡಲಾಗಿದೆ ಎಂಬ ಮಾಹಿತಿ ಆಧರಿಸಿ ಬೆಳಗ್ಗೆ 8.15 ಗಂಟೆಗೆ ದಾಳಿ ಮಾಡಿದ ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜ್ ನೇತೃತ್ವದ ತಂಡವು ತಪಾಸಣೆ ನಡೆಸಿದಾಗ 804 ಕೆಜಿ ಪ್ಲಾಸ್ಟಿಕ್ ಪತ್ತೆಯಾಯಿತು. ಪ್ಲಾಸ್ಟಿಕ್ ಬಳಕೆ, ಮಾರಾಟವನ್ನು ನಿಷೇಧಿಸಿದ್ದರೂ, ಅಕ್ರಮವಾಗಿ ದಾಸ್ತಾನಿರಿಸಿದ್ದ ಅಂಗಡಿ ಮತ್ತು ಗೋದಾಮು ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿ ಮಾಲನ್ನು ವಶಪಡಿಸಿಕೊಳ್ಳಲಾಯಿತು. ಪಾಲಿಕೆ ಪರಿಸರ ಇಂಜಿನಿಯರ್‌ಗಳಾದ ಜ್ಯೋತಿ, ಶೋಭಾ, ಹೆಲ್ತ್ ಇನ್ಸ್‌ಪೆಕ್ಟರ್ ಶಿವಪ್ರಸಾದ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಮೂರು ದಿನಗಳ ಹಿಂದೆಯೂ ಸಿವಿ ರಸ್ತೆ, ಸಂತೆಪೇಟೆಯಲ್ಲೂ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳು ಸುಮಾರು ಒಂದು ಟನ್‌ನಷ್ಟು ಪ್ಲಾಸ್ಟಿಕ್ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದರು.

## ಪೌರಕಾರ್ಮಿಕರ ಮಕ್ಕಳಿಗೆ ಪುಸ್ತಕ ವಿತರಣೆ



ಮೈಸೂರು,ಜು.18–ಚಾಮುಂಡಿಪುರಂ ವೃತ್ತದಲ್ಲಿರುವ ತಗಡೂರು ರಾಮಚಂದ್ರರಾವ್ ಉದ್ಯಾನವನದಲ್ಲಿ ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧಿಕಾರಿ, ನೌಕರ ವರ್ಗ, ಚಾಮುಂಡೇಶ್ವರಿ ಕಾರು ಮಾಲೀಕರ ಮತ್ತು ಚಾಲಕರ ಸಂಘ ಹಾಗೂ ರವಿ ಸ್ನೇಹ ಬಳಗ ವತಿಯಿಂದ ಪೌರಕಾರ್ಮಿಕರ ಮಕ್ಕಳಿಗೆ ಪುಸ್ತಕ ವಿತರಿಸಲಾಯಿತು.

ಈ ವೇಳೆ ನಗರಪಾಲಿಕೆ ಸದಸ್ಯ ಮಾ.ವಿ. ರಾಮಪ್ರಸಾದ್ ಮಾತನಾಡಿ, ಮಳೆ ಗಾಳಿಯನ್ನು ಲೆಕ್ಕಿಸದೆ ನಗರದ ಸ್ವಚ್ಛತೆ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುತ್ತಿರುವ ಪೌರಕಾರ್ಮಿಕರ ಕರ್ತವ್ಯ ನಿಷ್ಠೆ ಶ್ಲಾಘನೀಯ. ನಗರದ ಸ್ವಚ್ಛತೆ ಕಾಪಾಡಲು ಶ್ರಮಿಸುತ್ತಿರುವ ಪೌರಕಾರ್ಮಿಕರು ತಾವು ವಾಸಿಸುವ ಪರಿಸರದ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದರೊಂದಿಗೆ ತಮ್ಮ ವೈಯಕ್ತಿಕ ಶುಚಿತ್ವದ ಬಗ್ಗೆಯೂ ಗಮನ ಹರಿಸಬೇಕು. ಪೌರಕಾರ್ಮಿಕರು ತಮ್ಮ ಮಕ್ಕಳನ್ನು ಪೌರ ಸೇವೆ ನೌಕರಿಗಷ್ಟೇ ಸೀಮಿತಗೊಳಿಸದೆ ಅವರಿಗೆ ಉತ್ತಮ ಶಿಕ್ಷಣ ನೀಡಿ ಉನ್ನತ ಹುದ್ದೆಗಳನ್ನು ಪಡೆದುಕೊಳ್ಳುವಂತೆ ಪ್ರೇರೇಪಿಸಬೇಕು. ಸರ್ಕಾರ ಮತ್ತು ಪಾಲಿಕೆಯಿಂದ ದೊರೆಯುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ತಮ್ಮ ಬದುಕನ್ನು ಹಸನಾಗಿಸಿಕೊಳ್ಳಬೇಕೆಂದು ಹೇಳಿದರು. ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ನಿವೃತ್ತ ಶಿಕ್ಷಕರಾದ ಮಹದೇವ್ ಸ್ವಾಮಿ, ಅಪೂರ್ವ ಸುರೇಶ್, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ ಕಶ್ಯಪ್, ಕಾಂಗ್ರೆಸ್ ಯುವ ಮುಖಂಡ ರವಿಚಂದ್ರ, ಪದಾಧಿಕಾರಿಗಳಾದ ರವಿ, ಸುಬ್ರಮಣ್ಯ, ದೀಪಕ್ ಇನ್ನಿತರರು ಭಾಗವಹಿಸಿದ್ದರು.



ಅಖಿಲ ಕರ್ನಾಟಕ ಸಿದ್ದರಾಮಯ್ಯನವರ ಅಭಿಮಾನಿಗಳ ಬ್ರಿಗೇಡ್‌ನ ರಾಜ್ಯಾಧ್ಯಕ್ಷ ಹಿನಕಲ್ ಉದಯ್ ತಮ್ಮ ಹುಟ್ಟುಹಬ್ಬವನ್ನು ಹೊಸಲು ಮಾರಮ್ಮನ ಸನ್ನಿಧಿಯಲ್ಲಿ ಹಿನಕಲ್ ಮುಖಂಡರ ಜೊತೆ ಆಚರಿಸಿಕೊಂಡರು. ಈ ವೇಳೆ ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ, ಮುಖಂಡರಾದ ಮಿಲ್ ದೇವಣ್ಣ, ಗ್ರಾಪಂ ಮಾಜಿ ಸದಸ್ಯ ಹೊನ್ನಪ್ಪ, ತಾಪಂ ಮಾಜಿ ಸದಸ್ಯ ಚಂದ್ರು, ಕಂಟ್ರಾಕ್ಟರ್ ಕರಿಯಪ್ಪ, ಕಾಡುಮಂಚ ಕರಿಯಪ್ಪ, ಪೈ. ಕುಮಾರ್, ಉಮಾಶಂಕರ್, ಬಾಬು, ಹಿನಕಲ್ ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

## ಸರ್ಕಾರದ ಸೇವೆಗಳನ್ನು ಪಡೆಯಲು ಆಧಾರ್ ಲಿಂಕ್ ಕಡ್ಡಾಯ

ಮೈಸೂರು,ಜು.18–ಸರ್ಕಾರದಿಂದ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ವಿಧವಾ ವಿವಾಹ, ಅಂಗವಿಕಲ ವೇತನ ಸೇರಿದಂತೆ ಸಾಮಾಜಿಕ ಸುರಕ್ಷಾ ಯೋಜನೆಯಡಿ ಮಾಸಿಕ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು ತಕ್ಷಣ ತಮ್ಮ ಉಳಿತಾಯ ಖಾತೆಗೆ ಆಧಾರ್ ಲಿಂಕ್ ಮಾಡಿಸಬೇಕು. ಇಲ್ಲದಿದ್ದರೆ ಮಾಸಿಕ ಪಿಂಚಣಿಯನ್ನು ಸರ್ಕಾರ ಉಳಿತಾಯ ಖಾತೆಗಳಿಗೆ ಜಮೆ ಮಾಡುವುದಿಲ್ಲ. ಹಾಗಾಗಿ ಫಲಾನುಭವಿಗಳು ತಮ್ಮ ಸಮೀಪದ ಅಂಚೆ ಕಚೇರಿಗೆ ಹೋಗಿ ತಮ್ಮ ಉಳಿತಾಯ ಖಾತೆಯ ಜೊತೆಗೆ ಆಧಾರ್ ಲಿಂಕ್ ಮಾಡಿಸಬೇಕೆಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಬ್ಬರು ಮಹಿಳೆಯರ ಅಂಗಾಂಗ ದಾನ: 10 ಮಂದಿ ಬದುಕಿಗೆ ಆಸರೆ



ಗಂಗಾಂಬಿಕೆ



ಸುಧಾ

ಮೈಸೂರು,ಜು.18(ಎಂಕೆ)– ಮೆದುಳು ನಿಷ್ಕ್ರೀಯವಾಗಿದ್ದ ಇಬ್ಬರು ಮಹಿಳೆಯರು ಅಂಗಾಂಗ ದಾನ ಮಾಡುವ ಮೂಲಕ 10 ಮಂದಿಗೆ ನೆರವಾಗಿದ್ದಾರೆ.

ಮೈಸೂರಿನ ಬೆಲವತ್ತ ಬಳಿ ಜು.15ರಂದು ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಶ್ರೀಮತಿ ಸುಧಾ(48) ಎಂಬುವರನ್ನು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೆದುಳು ನಿಷ್ಕ್ರಿಯಗೊಂಡಿದೆ ಎಂದು ಆಸ್ಪತ್ರೆ ವೈದ್ಯರು ಘೋಷಿಸಿದ ಬಳಿಕ ಅಂಗಾಂಗ ದಾನಕ್ಕೆ ಕುಟುಂಬಸ್ಥರು ಸಮ್ಮತಿ ನೀಡಿದ ಹಿನ್ನೆಲೆಯಲ್ಲಿ ಯಕೃತ್ತು, ಎಡ ಮೂತ್ರಪಿಂಡವನ್ನು ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳಿಗೆ ಯಶಸ್ವಿಯಾಗಿ ಕಸಿ ಮಾಡಲಾಗಿದೆ.

ಮತ್ತೊಂದು ಮೂತ್ರಪಿಂಡವನ್ನು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ, ಹೃದಯ ಕವಾಟವನ್ನು ಬೆಂಗಳೂರಿನ ನಾರಾಯಣ ಹೃದಯಾಲಯಕ್ಕೆ, ಕಣ್ಣಿನ ಕಾರ್ನಿಯಾವನ್ನು ಕೆ.ಆರ್.ಆಸ್ಪತ್ರೆ ಹಾಗೂ ಶ್ವಾಸಕೋಶವನ್ನು ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಗೆ ರವಾನಿಸಲಾಗಿದೆ. ಈ ಮೂಲಕ ಸುಧಾ 6 ಜನರ ಬದುಕಿಗೆ ಬೆಳಕಾಗಿದ್ದಾರೆ.

ಹಾಗೆಯೇ ಪ್ರಜ್ಞಾಹೀನ ಸ್ಥಿತಿಯಲ್ಲಿ ಜು.10ರಂದು ಆಸ್ಪತ್ರೆಗೆ ದಾಖಲಾಗಿದ್ದ ಶ್ರೀಮತಿ ಗಂಗಾಂಬಿಕೆ(73) ಅವರು ಅಂಗಾಂಗ ದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಮೂರು ದಿನಗಳ ಕಾಲ ಐಸಿಯು ಘಟಕದಲ್ಲಿದ್ದ ಅವರ ಮೆದುಳು ನಿಷ್ಕ್ರಿಯಗೊಂಡ ಹಿನ್ನಲೆಯಲ್ಲಿ ಸಂಬಂಧಿಕರ ಅನುಮತಿಯೊಂದಿಗೆ ಯಕೃತ್ತು ಹಾಗೂ 2 ಮೂತ್ರಪಿಂಡಗಳನ್ನು ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಕಸಿ ಮಾಡಿದ್ದು, ಕಣ್ಣಿನ ಕಾರ್ನಿಯಾವನ್ನು ಕೆ.ಆರ್.ಆಸ್ಪತ್ರೆಗೆ ರವಾನಿಸಲಾಗಿದ್ದು, 4 ಮಂದಿ ಬದುಕಿಗೆ ಆಸರೆಯಾಗಿದ್ದಾರೆ. ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯೂ ಬಹು ಅಂಗಾಂಗ ಕಸಿ ಮಾಡುವ ಪರವಾನಗಿ ಪಡೆದಿದ್ದು, ರಾಜ್ಯ ಅಂಗ ಹಾಗೂ ಅಂಗಾಂಶ ಕಸಿ ಸಂಸ್ಥೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಮೈಸೂರು ಅಪೋಲೋ ಬಿಜಿಎಸ್ ಆಸ್ಪತ್ರೆ ಮುಖ್ಯಸ್ಥ ಹಾಗೂ ಉಪಾಧ್ಯಕ್ಷ ಎನ್.ಜಿ. ಭರತೀಶರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೃಷ್ಣರಾಜ ಯುವ ಬಳಗದಿಂದ ಜಯಚಾಮರಾಜ ಒಡೆಯರ್ 104ನೇ ಜಯಂತಿ ಆಚರಣೆ



ಮೈಸೂರು, ಜು.18–ಕೃಷ್ಣರಾಜ ಯುವ ಬಳಗ ವತಿಯಿಂದ ಜಯಚಾಮರಾಜ ಒಡೆಯರ್ ಅವರ 104ನೇ ಜಯಂತಿ ಅಂಗವಾಗಿ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಆನಂತರ ಸಿಹಿ ವಿತರಿಸುವ ಮೂಲಕ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ನಗರಪಾಲಿಕೆ ಸದಸ್ಯ ಅಯೂಬ್ ಖಾನ್, ಜಯಚಾಮರಾಜ ಒಡೆಯರ್ ಜನಮುಖಿ ಆಡಳಿತಗಾರರು ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವವನ್ನು ಒಪ್ಪಿ, ಅರಮನೆಯ ಸಿಂಹಾಸನದಿಂದ ಇಳಿದು ನಿಜ ಅರ್ಥದಲ್ಲಿ ಮಹಾರಾಜರೆನಿಸಿಕೊಂಡವರು ಜಯಚಾಮರಾಜ ಒಡೆಯರ್‌ರವರು. ಸದಾ ಪ್ರಜಾಪ್ರಭುತ್ವದ ಮಾದರಿಯಲ್ಲಿ ತಮ್ಮ ಸಂಸ್ಥಾನದ ಅಭಿವೃದ್ಧಿ ಆದ್ಯತೆಗಳನ್ನು ಗುರುತಿಸಿ ಜನಮುಖಿ ಆಡಳಿತಗಾರ ಎನ್ನುವ ರೀತಿ ಜನಮಾನಸದಲ್ಲಿ ಉಳಿದುಕೊಂಡರು. ಇದಕ್ಕೆ ಪ್ರಮುಖ ಕಾರಣ ಅವರು ತಮ್ಮ ಶಿಕ್ಷಣವನ್ನು ಜನಸಾಮಾನ್ಯರೊಂದಿಗೆ ಕುಳಿತು ಪಡೆದಿದ್ದು, ಮುಂದೆ ಜನಪರವಾಗಿ ಆಲೋಚಿಸಲು ಹೆಚ್ಚು ಸಹಾಯಕವಾಯಿತು. ಜನರ ಕಷ್ಟ–ಸುಖಗಳ ಪರಿಚಯವಾಗಿ ಸಂಸ್ಥಾನದ ಮಹಾರಾಜರಾಗುವ ಸಂದರ್ಭಕ್ಕೆ ಅವರು ಪ್ರಜಾರಾಜರಾಗಿ ರೂಪುಗೊಂಡರು ಎಂದರು.


ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಮಾತನಾಡಿ, ಜಯಚಾಮರಾಜ ಒಡೆಯರ್ ಅವರು ಕೃಷಿ ಮತ್ತು ರೈತರ ಬಗ್ಗೆ ಕೂಡ ವಿಶೇಷ ಆಸಕ್ತಿ ವಹಿಸಿ, ಕಾರ್ಯಕ್ರಮಗಳನ್ನು ಜಾರಿಗೆ ತಂದವರು ಸಂಸ್ಥಾನದಲ್ಲೇ ತಮ್ಮ ದೊಡ್ಡಪ್ಪ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಮಾದರಿಯನ್ನು ಮುಂದುವರೆಸಿಕೊಂಡು ನಾಲ್ವಡಿಯವರ ಸಮರ್ಥ ವಾರಸುದಾರರಾಗಿದ್ದರು. ಇವತ್ತು ಕೂಡ ಅವರ ಆಳ್ವಿಕೆ ಜನಮುಖಿ ಆಲೋಚನೆಗಳು ತುಂಬ ಹೆಮ್ಮೆಯ ಸಂಗತಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ವರುಣ ಮಹದೇವ್, ಜಿ ರಾಘವೇಂದ್ರ, ಎಸ್.ಎನ್.ರಾಜೇಶ್, ಲೋಕೇಶ್, ಕೇಶವಯ್ಯ, ಚಿನ್ನ ಬೆಳ್ಳಿ ನೌಕರರ ಸಂಘದ ಅಧ್ಯಕ್ಷರಾದ ಸುರೇಶ್ ಗೋಲ್ಡ್, ರವಿಚಂದ್ರ, ರವಿ, ಅರಸು ಮಂಡಳಿ ಸಂಘದ ಅಧ್ಯಕ್ಷರಾದ ಲಿಂಗರಾಜ ಅರಸ್, ಎಚ್.ಡಿ.ನವೀನ್ ರಾಜ್ ಅರಸ್, ಎಂ.ಬಿ. ಶರತ್, ಕಾರ್ಯದರ್ಶಿ ಸುಮಾ ಅರಸ್, ಪ್ರತಿಭಾ ಅರಸ್, ಮಾಜಿ ಅಧ್ಯಕ್ಷರು ಎಚ್.ಡಿ.ನಂಜರಾಜ ಅರಸ್, ಅಂಬಾ ಅರಸ್, ಎಂ.ಎನ್.ರಾಜೇಂದ್ರ ಪ್ರಸಾದ್, ರಾಕೇಶ್ ಇನ್ನಿತರರು ಹಾಜರಿದ್ದರು.




ಮೈಸೂರಿನ ಆಸ್ತಾನ–ಎ–ಸಲ್ಮಾನಿಯಾ ದರ್ಗಾ ಕಮಿಟಿ, ಅಜ್ಜೀಜ್ಜಿಯ ಎಜುಕೇಷನಲ್ ಟ್ರಸ್ಟ್ ಟ್ರಸ್ಟಿಗಳು, ದಾರುಲ್ ಉಲೂಮ್ ಅಜ್ಜೀಜ್ಜಿಯ ಅರೇಬಿಕ್ ಕಾಲೇಜು, ಮಾಂಬಳ್ಳಿ ಮತ್ತು ಭಕ್ತಾದಿಗಳು ಗಂಧದ ಉರುಸ್–ಸಲ್ಮಾನಿಯಾ ಆಚರಿಸಿದರು. ಈ ವೇಳೆ ಹಜ್ಹರತ್ ಮೌಲಾನಾ ಸೂಫಿ ಮೊಹಮ್ಮದ್ ಅನ್ವರ್ ಅಹಮದ್ ನಿಜ್ಹಾಮಿ ಸಾಹೆಬ್, ಹಜ್ಹರತ್ ಮೌಲಾನಾ ಸೈಯದ್ ಇನಾಯತ್ ಉಲಲಾ ರಜ್ವಿ, ಹಜ್ಹರತ್ ಮೌಲಾನಾ ಮೊಹಮ್ಮದ್ ಅಹಮದ್ ನಕಶ್‌ಬಂದಿ ಜುನೇದಿ ಸಾಹೆಬ್, ಜಾಮಿಯ ನಿಜ್ಹಾಮಿಯ, ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಸಮಾಜ ಸೇವಕ ಮಿರ್ಜಾ ಜಂಷೀದ್ ಬೇಗ್ ಅಶ್ರಫಿ, ರಹಮಾನ್ ಷರೀಫ್ ಹಾಜರಿದ್ದರು.

## ಕೇರಳದ ಮಾಜಿ ಸಿಎಂ ಉಮ್ಮನ್ ಚಾಂಡಿ ನಿಧನ



ತಿರುವನಂತಪುರಂ, ಜು.18– ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಕಾಂಗ್ರೆಸ್ ನಾಯಕ ಉಮ್ಮನ್ ಚಾಂಡಿ ಮಂಗಳವಾರ ಮುಂಜಾನೆ ಬೆಂಗಳೂರಿನ ಚಿನ್ಮಯ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಅವರಿಗೆ 79 ವರ್ಷ ವಯಸ್ಸಾಗಿತ್ತು. ಅವರು ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿದ್ದರು. ಉಮ್ಮನ್ ಚಾಂಡಿ ಅವರು ಕಳೆದ 50 ವರ್ಷಗಳಿಗೂ ಹೆಚ್ಚು ಕಾಲ ಕೊಟ್ಟಾಯಂ ಜಿಲ್ಲೆಯ ಪುತ್ತುಪಲ್ಲಿ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಅವರು ಸದ್ಯ ಪುತ್ತುಪಲ್ಲಿ ಶಾಸಕರಾಗಿದ್ದರು. ಚಾಂಡಿ ಅವರು 1970ರಲ್ಲಿ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಪುತ್ತುಪಲ್ಲಿಯನ್ನು ಮೊದಲ ಬಾರಿಗೆ ಪ್ರತಿನಿಧಿಸಿದ್ದರು. 1977ರಲ್ಲಿ ಕೆ.ಕರುಣಾಕರನ್ ಸಂಪುಟದಲ್ಲಿ ಮೊದಲ ಬಾರಿಗೆ ಸಚಿವರಾಗಿದ್ದರು. 2 ಬಾರಿ ಸಿಎಂ ಆಗಿ ನೇಮಕಗೊಂಡಿದ್ದರು. ಅಲ್ಲದೆ, ರಾಜ್ಯದಲ್ಲಿ ಹ ' ಣ ಕ ಾ ಸ ' ು ಖಾತೆಯನ್ನು ನಿಭಾಯಿಸಿದ್ದರು ಮತ್ತು ವಿರೋಧ' ಪಕ್ಷದ ನಾಯಕರೂ ಆಗಿದ್ದರು. ಚಾಂಡಿ ಜನರೊಂದಿಗೆ ಉತ್ತಮ ಸಂಪರ್ಕ ಸಾಧಿಸುತ್ತಿದ್ದರು. ಅವರು ಮುಖ್ಯಮಂತ್ರಿಯಾಗಿದ್ದಾಗ ಜನರ ಅಹವಾಲು ಆಲಿಸಲು ಆರಂಭಿಸಿದ 'ಜನಸಂಪರ್ಕ ಪರಿಪಡಿ' ಜನಪ್ರಿಯವಾಗಿತ್ತು. ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಅಮೆರಿಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ಬೆಂಗಳೂರಿಗೆ ಅವರನ್ನು ವರ್ಗಾಯಿಸಲಾಗಿತ್ತು. ಉಮ್ಮನ್ ಚಾಂಡಿ ಅವರು ಪತ್ನಿ ಮರಿಯಮ್ಮ ಮತ್ತು ಮಕ್ಕಳಾದ ಮರಿಯಾ ಉಮ್ಮನ್, ಚಾಂಡಿ ಉಮ್ಮನ್ ಮತ್ತು ಅಚ್ಚು ಉಮ್ಮನ್ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

19.7.2023 ಬುಧವಾರ, ಮಳೆ ನಕ್ಷತ್ರ: ಭರಣಿ 06.07.2023 ರಿಂದ 19.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು:** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ: ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ.ಆರ್.ಇಂದಿರಾ, ಮುಖ್ಯ ಅತಿಥಿಗಳು: ಅಪರ ಜಿಲ್ಲಾಧಿಕಾರಿ ಶ್ರೀಮತಿ ಗೀತಾ ಹುಡೇದ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ಶಾರದ, ಉಪ ಪ್ರಾಂಶುಪಾಲ ಡಾ.ಜಿ.ಪ್ರಸಾದಮೂರ್ತಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು :** ಸಾಹಿತ್ಯಕ, ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಆರ್.ಮೂಗೇಶಪ್ಪ, ಸಮಾರೋಪ ಭಾಷಣ: ಮುಕ್ತ ವಿವಿ ಪ್ರಾಧ್ಯಾಪಕಿ ಪ್ರೊ.ಕವಿತಾ ರೈ, ಮುಖ್ಯ ಅತಿಥಿಗಳು: ಅಂತಾರಾಷ್ಟ್ರೀಯ ಕ್ರೀಡಾಪಟು ಎಂ.ಯೋಗೇಂದ್ರ, ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮಾ, ಡೀನ್ ಡಾ. ರೇಚಣ್ಣ, ಸ್ಥಳ: ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಸಂಘ :** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಪ್ರೊ. ಮೈಸೂರು ಕೃಷ್ಣಮೂರ್ತಿ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು :** ಸಾಂಸ್ಕೃತಿಕ ಚಟುವಟಿಕೆ, ರಾಸೇಯೋ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಆಕಾಶವಾಣಿ ಕಲಾವಿದ ಡಾ. ಮೈಸೂರು ಗುರುರಾಜ್, ಮುಖ್ಯ ಅತಿಥಿಗಳು : ಲಲಿತಕಲೆಗಳ ಕಾಲೇಜು ಪ್ರಾಂಶುಪಾಲರಾದ ಪ್ರೊ. ಅನಿಟಾ ವಿಮಲಾ ಬ್ರ್ಯಾಗ್ಸ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ಎಚ್. ಸೋಮಶೇಖರಪ್ಪ, ಉಪಸ್ಥಿತರು : ಪಠ್ಯೇತರ ಚಟುವಟಿಕೆ ಸಮಿತಿ ಸಂಚಾಲಕ ಡಾ. ನಿಂಗರಾಜು ಹಳೇಬೀಡು, ಸ್ಥಳ: ಕೊಠಡಿ ಸಂಖ್ಯೆ 21, ವಿ.ವಿ. ಸಂಜೆ ಕಾಲೇಜು, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ಮೈಸೂರು ಭೇಟಿ, ಸಂಧ್ಯಾರತಿ ನಂತರ ಸ್ವಾಮೀಜಿಯವರಿಗೆ ಪ್ರಣಾಮ ಸಲ್ಲಿಕೆ, ಸ್ಥಳ: ಆಶ್ರಮದ ಆವರಣ, ಯಾದವಗಿರಿ, ಸಂಜೆ 7.30ಕ್ಕೆ.

### ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಸಂಗಮೇಶ್ ಸವದತ್ತಿ ಮಠ್, 7.15 ಭಾವಗೀತೆ– ಉಪಾಸನಾ ಮೋಹನ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ವೃತ್ತಿ ಮಾರ್ಗದರ್ಶನ, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ, ಸಿದ್ದೇಶ್ವರಿ ದೇವಿ–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ಅಂಜನಾ ಡಿ. ಕುಂಬ್ಳೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಕಲಾ ಭಟ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ, ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು– ಅಂಧ ಗಾಯಕಿಯರಾದ ಮಂಜಯ್ಯ ಮತ್ತು ರತ್ನಮ್ಮ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಮಾಧವಿ ಭಂಡಾ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ, ಸಾವಯವ ಸಂಪದ–ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ. ಸಾವಯವ ಕೃಷಿಗೆ ಅಗತ್ಯ ಸಂಪನ್ಮೂಲಗಳ ಪರಿಕಲ್ಪನೆ ಹಾಗೂ ನಿರ್ಮಾಣ–ಎನ್.ಕೇಶವಮೂರ್ತಿ, 9.30 ಹಿಂದೂಸ್ಥಾನಿ ಸಂಗೀತ–ಉಸ್ತಾದ್ ಅಮೀರ್ ಖಾನ್–ಗಾಯನ, 10.00 ಜನಪದ ಸಂಗೀತ, 10.30 ಸವಿನೆನಪು

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 19 ಬುಧವಾರ 2023

ಸಂಪುಟ: 44 | ಸಂಚಿಕೆ: 94 | ಪುಟಗಳು: 10

₹4





ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


# ಎನ್‌ಡಿಎ Vs ಇಂಡಿಯಾ

(NDA - ನ್ಯೂ ಇಂಡಿಯಾ ಡೆವಲಪ್‌ಮೆಂಟ್ ಆಸ್ಪಿರೇಷನ್)

## ದೇಶದ ಜನರ ಅಭಿವೃದ್ಧಿಯೇ ನಮ್ಮ ವಿಚಾರಧಾರೆ: ಮೋದಿ

- ನವದೆಹಲಿಯ ಅಶೋಕ ಹೋಟೆಲ್‌ನಲ್ಲಿ ಎನ್‌ಡಿಎ 38 ಮಿತ್ರಪಕ್ಷಗಳ ನಾಯಕರ ಸಭೆ
- ದೇಶ, ದೇಶದ ಜನರ ಹಿತ ಸಾಧನೆಯೇ ಎನ್‌ಡಿಎ ಮೈತ್ರಿಕೂಟದ ಮೂಲ ಮಂತ್ರ
- ನಾವು ಜನಾದೇಶಕ್ಕೆ ಎಂದೂ ಅವಮಾನ ಮಾಡಿಲ್ಲ; ದೇಶದ ಅಭಿವೃದ್ಧಿಗೆ ಅಡ್ಡಿಪಡಿಸಿಲ್ಲ



**ನವದೆಹಲಿ, ಜು.18– ಎನ್‌ಡಿಎ ಮೈತ್ರಿಕೂಟವು ದೇಶದ ಎಲ್ಲಾ ಜನರ ವಿಶ್ವಾಸ ಗಳಿಸಿದೆ. ಇಡೀ ವಿಶ್ವವೇ ಭಾರತವನ್ನು ಅಭಿವೃದ್ಧಿ ದೃಷ್ಟಿಕೋನದಿಂದ ನೋಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.**

ದೆಹಲಿಯಲ್ಲಿ ನಡೆದ ಎನ್‌ಡಿಎ ಮಿತ್ರಪಕ್ಷಗಳ ಸಭೆಯಲ್ಲಿ ಮಾತನಾಡಿದ ಅವರು, ಎನ್‌ಡಿಎ ಅಂದರೆ **ನ್ಯೂ ಇಂಡಿಯಾ ಡೆವಲಪ್‌ಮೆಂಟ್ ಆಸ್ಪಿರೇಷನ್**. ಈ ಮೈತ್ರಿಕೂಟ ಯಾರನ್ನೂ ಅಧಿಕಾರದಿಂದ ಹೊರಗಿಡಲು ಮಾಡಿದ್ದಲ್ಲ. ದೇಶದಲ್ಲಿ ಸ್ಥಿರವಾದ ಸರ್ಕಾರವಿದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು. ನಾವು ಯಾವತ್ತೂ ನಕಾರಾತ್ಮಕ ರಾಜಕಾರಣ ಮಾಡಿಲ್ಲ. ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ನಾವು ಪ್ರಯತ್ನ ಮಾಡಿದ್ದೇವೆ. ನಾವೆಲ್ಲರೂ ಒಂದು ಗುರಿ ಸಾಧಿಸಲು ಮುನ್ನುಗ್ಗುತ್ತಿದ್ದೇವೆ. ಆದರೆ, ಅಭಿವೃದ್ಧಿ ವಿಚಾರದಲ್ಲೂ ವಿಪಕ್ಷಗಳು ರಾಜಕಾರಣ ಮಾಡುತ್ತಿವೆ ಎಂದು ಮೋದಿ ಟೀಕಿಸಿದರು. ಎನ್‌ಡಿಎಯ 25 ವರ್ಷಗಳ ಈ ಪಯಣಕ್ಕೆ ಮತ್ತೊಂದು ಕಾಕತಾಳೀಯ ಸಂಗತಿಯೊಂದಿದೆ. ಮುಂಬರುವ 25 ವರ್ಷಗಳಲ್ಲಿ ನಮ್ಮ ದೇಶವು ದೊಡ್ಡ ಗುರಿಯನ್ನು ಸಾಧಿಸಲು ದೊಡ್ಡ ಹೆಜ್ಜೆಗಳನ್ನು ಇಡುತ್ತಿರುವ ಸಮಯ ಇದು. ಈ ಗುರಿಯು ಅಭಿವೃದ್ಧಿ ಹೊಂದಿದ ಭಾರತ, ಸ್ವಾವಲಂಬಿ ಭಾರತವಾಗಿದೆ ▶ 8ನೇ ಪುಟಕ್ಕೆ

### ಒಂದೇ ಸೂರಿನಡಿ 26 ಭ್ರಷ್ಟರು! ವಿಪಕ್ಷ ಅಲಯನ್ಸ್‌ಗೆ ಮೋದಿ ವ್ಯಂಗ್ಯ


ಪೋರ್ಟ್‌ಬ್ಲೇರ್, ಜು.18– ಭ್ರಷ್ಟಾಚಾರದ ಮೂಲಕ ದೇಶವನ್ನು ಅಧೋಗತಿಗೆ ದೂಡಿದವರು ಮತ್ತೆ ತಮ್ಮ ಅಂಗಡಿಗಳನ್ನು ತೆರೆದು ಕೂತಿದ್ದಾರೆ. ಜಾತೀಯತೆ, ಭ್ರಷ್ಟಾಚಾರವೇ ಅಲ್ಲಿನ ಮಾರಾಟದ ಸರಕಾಗಿದೆ. ಸದ್ಯ ಆ ಸಂಚಾರಿ ಅಂಗಡಿಯು ಬೆಂಗಳೂರಿಗೆ ಹೋಗಿದೆ...!

ಬೆಂಗಳೂರಿನಲ್ಲಿ ನಡೆದ 26 ಪ್ರತಿಪಕ್ಷಗಳ ಸಭೆಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಹರಿಹಾಯ್ದಿದ್ದಾರೆ. ಪೋರ್ಟ್‌ಬ್ಲೇರ್ ವೀರ ಸಾವರ್ಕರ್ ವಿಮಾನ ನಿಲ್ದಾಣದಲ್ಲಿ ನಿರ್ಮಿಸಿರುವ ಹೊಸ ಟರ್ಮಿನಲ್ ಅನ್ನು ಮಂಗಳವಾರ ವರ್ಚುವಲ್ ಮೂಲಕ ಉದ್ಘಾಟಿಸಿದ ಅವರು, ಪ್ರತಿಪಕ್ಷಗಳ ಸಭೆಯ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ದೇಶದಲ್ಲಿ ಈ ಪ್ರತಿಪಕ್ಷಗಳು ಎಸಗಿರುವ ಹಗರಣಗಳ ಮೊತ್ತ ರೂ. 20 ಲಕ್ಷ ಕೋಟಿ ದಾಟುತ್ತದೆ. ಭ್ರಷ್ಟಾಚಾರದ ಮೂಲಕ ▶ 8ನೇ ಪುಟಕ್ಕೆ

(INDIA - ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲಯನ್ಸ್)

## ಮೋದಿ ಮಣಿಸುವುದೇ ಒಗ್ಗಟ್ಟಿನ ಹೋರಾಟದ ಉದ್ದೇಶ: ಖರ್ಗೆ

- ಬೆಂಗಳೂರಿನ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಕಾಂಗ್ರೆಸ್ ನೇತೃತ್ವದ ಎನ್‌ಡಿಎ ವಿರೋಧಿ 26 ಪಕ್ಷಗಳ ನಾಯಕರ ಸಭೆ
- ಅಧಿಕಾರ, ಪ್ರಧಾನಿ ಹುದ್ದೆಯ ಆಸಕ್ತಿ ನಮಗಿಲ್ಲ; ಎನ್‌ಡಿಎ ಸೋಲಿಸುವುದು, ದೇಶದಲ್ಲಿ ಪ್ರಜಾಪ್ರಭುತ್ವ ಉಳಿಸುವುದು ನಮ್ಮ ಉದ್ದೇಶ



**ಬೆಂಗಳೂರು, ಜು.18(ಕೆಎಂಶಿ)– ಅಧಿಕಾರ ಅಥವಾ ಪ್ರಧಾನಿ ಹುದ್ದೆಯ ಮೇಲೆ ನಮಗೆ ಆಸಕ್ತಿ ಇಲ್ಲ ಎಂದು ಕಾಂಗ್ರೆಸ್ ಇಂದಿಲ್ಲಿ ಸ್ಪಷ್ಟಪಡಿಸುವ ಮೂಲಕ ಬಿಜೆಪಿ ವಿರೋಧಿಗಳನ್ನು ಒಗ್ಗೂಡಿಸಲು ಮೊದಲ ಹೆಜ್ಜೆ ಇಟ್ಟಿದೆ.**

ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ವಿರುದ್ಧವಾಗಿ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ಮುಂಚೂಣಿಯಲ್ಲಿರುವ ಕಾಂಗ್ರೆಸ್ ಅಧಿಕಾರ ತ್ಯಾಗಕ್ಕೂ ಸಿದ್ಧ ಎಂದಿದೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೋರಾಟ ನಡೆಸಲು ತೀರ್ಮಾನ ಕೈಗೊಂಡಿರುವ ಪ್ರತಿಪಕ್ಷಗಳು ಅಧಿಕಾರಕ್ಕೆ ಬಂದರೆ ನಾಯಕ ಯಾರೆಂಬುದರ ಬಗ್ಗೆ ಅಂತಿಮ ತೀರ್ಮಾನ ಮಾಡಿಲ್ಲ. ಕಾಂಗ್ರೆಸ್ ಆತಿಥ್ಯ ವಹಿಸಿರುವ ಬಿಜೆಪಿ ವಿರುದ್ಧದ 26 ಪಕ್ಷಗಳ ಮುಖಂಡರು, ಕಳೆದ ಎರಡು ದಿನಗಳಿಂದ ಸಭೆ ನಡೆಸಿ ಒಗ್ಗಟ್ಟಿನ ಮಂತ್ರ ಜಪಿಸಿವೆ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ 545 ಕ್ಷೇತ್ರಗಳಲ್ಲೂ ಮಿತ್ರಪಕ್ಷಗಳು ಚುನಾವಣಾ ಹೊಂದಾಣಿಕೆ ಮಾಡಿಕೊಂಡು ಕಣಕ್ಕಿಳಿಯಲು ನಿರ್ಧರಿಸಿವೆ.

**ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲಿಯನ್ಸ್** (INDIA) ಎಂಬ ಒಕ್ಕೂಟದಡಿ ಮಿತ್ರಪಕ್ಷಗಳು ಸ್ಪರ್ಧಿಸಲಿವೆ. ▶ 8ನೇ ಪುಟಕ್ಕೆ

### ಸಂವಿಧಾನ, ಪ್ರಜಾಪ್ರಭುತ್ವ ಉಳಿಸಲು ಒಗ್ಗಟ್ಟಿನ ಹೋರಾಟ

ಬೆಂಗಳೂರು, ಜು.18(ಕೆಎಂಶಿ)–ರಾಷ್ಟ್ರ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಲು ಬಿಜೆಪಿ ವಿರೋಧಿ ಪಕ್ಷಗಳು ಒಗ್ಗಟ್ಟಿನಿಂದ ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸಲು ನಿರ್ಧರಿಸಿರುವುದಾಗಿ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ಘೋಷಿಸಿದರು. ಇಪ್ಪತ್ತಾರು ಪಕ್ಷಗಳ ಎರಡು ದಿನಗಳ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಖರ್ಗೆ ಅವರು, ದೇಶ ಉಳಿಸಲು ನಾವು ಒಗ್ಗಟ್ಟಿನಿಂದ ಬಿಜೆಪಿ ವಿರುದ್ಧ ಹೋರಾಡುವ ತೀರ್ಮಾನ ಕೈಗೊಂಡಿದ್ದೇವೆ. ವಿರೋಧ ಪಕ್ಷಗಳ ಹೊಸ ಒಕ್ಕೂಟಕ್ಕೆ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲಯನ್ಸ್ (ಐಎನ್‌ಡಿಐಎ –ಇಂಡಿಯಾ) ಎಂದು ನಾಮಕರಣ ಮಾಡಿದ್ದೇವೆ. ಒಕ್ಕೂಟದ ಕೇಂದ್ರ ಕಚೇರಿ ದೆಹಲಿಯಲ್ಲಿ ▶ 8ನೇ ಪುಟಕ್ಕೆ

## ಟ್ರ್ಯಾಕ್ಟರ್ ಟ್ರಾಲಿಗೆ ಕಾರು ಡಿಕ್ಕಿ: ಮೂವರ ಸಾವು



ಮುಜಾಹಿದ್ ಶರೀಫ್



ಮುದಾಸಿರ್



ಅಹಮದ್ ಪಾಷಾ

### ಪಿರಿಯಾಪಟ್ಟಣ ಬಳಿ ದುರಂತ; ಮತ್ತೋರ್ವನಿಗೆ ಗಾಯ



ಪಿರಿಯಾಪಟ್ಟಣ, ಜು.18– ರಸ್ತೆ ಬದಿ ನಿಂತಿದ್ದ ಸೌದೆ ತುಂಬಿದ್ದ ಟ್ರ್ಯಾಕ್ಟರ್ ಟ್ರ್ಯಾಲಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವನ್ನಪ್ಪಿ, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕಂಪಲಾಪುರ ಬಳಿ ಮುಖ್ಯರಸ್ತೆಯಲ್ಲಿ ಮಂಗಳವಾರ ಮುಂಜಾನೆ ಸಂಭವಿಸಿದೆ.

ಪಿರಿಯಾಪಟ್ಟಣದ ಕುಂಬಾರರ ಬೀದಿಯ ನಿವಾಸಿ ಅಹಮದ್ ಪಾಷಾ ಅಲಿಯಾಸ್ ಬಾಜಿ (50), ಟ್ಯಾಂಕ್ ಬಡಾವಣೆಯ ಸಹೋದರರಾದ ಮುದಾಸಿರ್ (35) ಹಾಗೂ ಮುಜಾಹಿದ್ ಶರೀಫ್ ಅಲಿಯಾಸ್ ರಾಹುಲ್ (25) ದುರಂತದಲ್ಲಿ ಬಲಿಯಾದವರಾಗಿದ್ದಾರೆ. ಘಟನೆಯಲ್ಲಿ ▶ 8ನೇ ಪುಟಕ್ಕೆ



## ಮೈಸೂರು ದಸರಾ ವಸ್ತುಪ್ರದರ್ಶನ ಮೇಲ್ದರ್ಜೆಗೇರಿಸುವ ಕಾಮಗಾರಿ ವರ್ಷಾಂತ್ಯಕ್ಕೆ ಆರಂಭ


- ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ ಯೋಜನೆಯಡಿ ಅಭಿವೃದ್ಧಿ
- 80 ಕೋಟಿ ರೂಪಾಯಿ ಯೋಜನೆ
- ವರ್ಷಪೂರ್ತಿ ದಸರಾ ವಸ್ತುಪ್ರದರ್ಶನ
- 13 ಎಕರೆಯಲ್ಲಿ ಸಾಂಸ್ಕೃತಿಕ ಕೇಂದ್ರ
- ಮದುವೆ, ಸಭೆ–ಸಮಾರಂಭಗಳಿಗೂ ವ್ಯವಸ್ಥೆ
- ಮೈಸೂರಿನ ಹೆಸರಾಂತ ವಸ್ತುಗಳ ಮಾರಾಟ



ಮೈಸೂರು, ಜು.18(ಬಿಎಲ್‌ಯು)– ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಸ್ವದೇಶಿ ದರ್ಶನ ಯೋಜನೆಯಡಿ ಮೈಸೂರು ದಸರಾ ವಸ್ತುಪ್ರದರ್ಶನವನ್ನು ಮೇಲ್ದರ್ಜೆಗೇರಿಸುವ ಅಭಿವೃದ್ಧಿ ಕಾಮಗಾರಿ ಈ ವರ್ಷಾಂತ್ಯಕ್ಕೆ ಆರಂಭವಾಗಲಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದ್ದಾರೆ. ಮೈಸೂರು ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿಯಲ್ಲಿ ಮಂಗಳವಾರ ಸ್ವದೇಶಿ ದರ್ಶನ ಯೋಜನೆಯಡಿ ದಸರಾ ವಸ್ತುಪ್ರದರ್ಶನದಲ್ಲಿ ಕೈಗೊಳ್ಳುತ್ತಿರುವ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಅಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಅವರು ಈ ಮಾಹಿತಿ ನೀಡಿದರು. ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ ಯೋಜನೆಗೆ ಕರ್ನಾಟಕದಲ್ಲಿ ಹಂಪಿ ಬಿಟ್ಟರೆ ಮೈಸೂರನ್ನು ಆಯ್ಕೆ ಮಾಡಲಾಗಿದೆ. ಮೈಸೂರಿನ ದಸರಾ ವಸ್ತುಪ್ರದರ್ಶನವನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ 80 ಕೋಟಿ ರೂಪಾಯಿಗಳನ್ನು ನೀಡಿದೆ. ಡಿಪಿಆರ್ ಸಿದ್ಧಪಡಿಸುವ ಮೊದಲ ಹಂತದ ಕಾರ್ಯ ಈ ತಿಂಗಳಾಂತ್ಯಕ್ಕೆ ಪೂರ್ಣಗೊಳ್ಳಲಿದೆ. ತರುವಾಯ ಇನ್ನೆರಡು ತಿಂಗಳಲ್ಲಿ ಪೂರ್ಣ ಪ್ರಮಾಣದ ಡಿಪಿಆರ್ ಸಿದ್ಧ ಮಾಡಲಾಗುವುದು ಎಂದು ಪ್ರತಾಪ್‌ಸಿಂಹ ಹೇಳಿದರು. ಅಂತಿಮಗೊಂಡ ▶ 6ನೇ ಪುಟಕ್ಕೆ

### ಚಾಮುಂಡಿಬೆಟ್ಟದ ಮೂಲ ನಿವಾಸಿಗಳನ್ನು ಹೊರತುಪಡಿಸಿ ಹೊರಗಿನವರ ಆಸ್ತಿಯನ್ನ ಸರ್ಕಾರವೇ ಖರೀದಿಸಲಿ

- ಸಂಸದ ಪ್ರತಾಪ್ ಸಿಂಹ ಆಗ್ರಹ
- ಪಾರಂಪರಿಕತೆ ಕಾಪಾಡಲು ದಿಟ್ಟ ಕ್ರಮ ಕೈಗೊಳ್ಳಲಿ



ಮೈಸೂರು, ಜು.18(ಬಿಎಲ್‌ಯು)–ಮೈಸೂರಿನ ಚಾಮುಂಡಿಬೆಟ್ಟದ ಮೂಲ ನಿವಾಸಿಗಳನ್ನು ಹೊರತುಪಡಿಸಿ ಹೊರಗಡೆಯಿಂದ ಬಂದವರಿಗೆ ಬೆಟ್ಟದಲ್ಲಿ ನೆಲೆಗೊಳ್ಳಲು ಅವಕಾಶ ನೀಡಬಾರದು. ಈ ನಿಟ್ಟಿನಲ್ಲಿ ಹೊರಗಡೆಯವರ ಆಸ್ತಿಯನ್ನು ಸರ್ಕಾರವೇ ಖರೀದಿ ಮಾಡಬೇಕು ಎಂದು ಸಂಸದ ಪ್ರತಾಪ್‌ಸಿಂಹ, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ. ಮೈಸೂರಿನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಬೆಂಗಳೂರು ಸೇರಿದಂತೆ ಇತರೆಡೆಯಿಂದ ಬಂದ ಬಹಳಷ್ಟು ಜನರು ಚಾಮುಂಡಿಬೆಟ್ಟದಲ್ಲಿ ನೆಲೆಗೊಳ್ಳುತ್ತಿದ್ದಾರೆ. ಮೂಲ ನಿವಾಸಿಗಳ ಆಸ್ತಿ ಖರೀದಿಸಿ ಅಲ್ಲಿ ಹೊಸದಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಿ, ಬೆಟ್ಟದ ಪಾರಂಪರಿಕ ಸೌಂದರ್ಯಕ್ಕೆ ಧಕ್ಕೆ ತರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬಾರದು ಎಂದರು. ಜೊತೆಗೆ ಸ್ಥಳೀಯರನ್ನು ಹೊರತುಪಡಿಸಿ ಹೊರಗಡೆಯಿಂದ ಬಂದವರು ಅಲ್ಲಿ ನೆಲೆಗೊಳ್ಳಲು ಅವಕಾಶ ಕೊಡಬಾರದು ಎಂದು ಒತ್ತಾಯಿಸಿದರು. ಬೆಂಗಳೂರು ಸೇರಿದಂತೆ ಇತರೆಡೆಯಿಂದ ಬಂದವರು ಅಲ್ಲಿ ಖರೀದಿಸಿರುವ ಆಸ್ತಿಗಳನ್ನು ಸರ್ಕಾರವೇ ಖರೀದಿ ಮಾಡಬೇಕು. ಈ ಮೂಲಕ ಹೊಸ ಕಟ್ಟಡ ಹಾಗೂ ನವೀಕರಣಕ್ಕೆ ಅವಕಾಶ ನೀಡದೆ ಚಾಮುಂಡಿಬೆಟ್ಟದ ಪಾವಿತ್ರ್ಯತೆ ಹಾಗೂ ಪಾರಂಪರಿಕತೆಯನ್ನು ▶ 6ನೇ ಪುಟಕ್ಕೆ

### ನಮ್ಮ ಓದುಗರಿಗಾಗಿ

ನಮ್ಮ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂದರ್ಭದಲ್ಲೇ ಅತ್ಯಂತ ನಿರ್ಣಾಯಕವಾದ 2024ರ ಲೋಕಸಭಾ ಚುನಾವಣೆ ಎದುರಾಗುತ್ತಿದೆ. ಈಗಾಗಲೇ ಯುಪಿಎ ಮತ್ತು ಎನ್‌ಡಿಎ ಮೈತ್ರಿಕೂಟಗಳು ಚುನಾವಣಾ ರಣಕಹಳೆ ಮೊಳಗಿಸಿವೆ. ಯುಪಿಎ ಮೈತ್ರಿಕೂಟ ಬೆಂಗಳೂರಿನಲ್ಲಿ ಸಭೆ ನಡೆಸುತ್ತಿರುವಾಗಲೇ ಅತ್ತ ನವದೆಹಲಿಯಲ್ಲಿ ಎನ್‌ಡಿಎ ಕೂಡ ಸಭೆ ನಡೆಸಿವೆ.

ಇಂತಹ ರಾಜಕೀಯ ಸನ್ನಿವೇಶದಲ್ಲಿ 'ಯುಪಿಎ ಇಲ್ಲವೇ ಎನ್‌ಡಿಎ ಗೆದ್ದರೆ ಭಾರತದ ಭವಿಷ್ಯಕ್ಕಾಗಿ ಏನನ್ನು ನಿರೀಕ್ಷಿಸುತ್ತೀರಿ?' ಈ ಸಂಬಂಧ ಸುಮಾರು 1,200 ಪದಗಳ ಮಿತಿಯಲ್ಲಿ ಓದುಗರಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಗಸ್ಟ್ 15ರೊಳಗೆ news@ mysurumithra.comಗೆ ಲೇಖನಗಳನ್ನು ಇ–ಮೇಲ್ ಮಾಡುವುದು.

ಉತ್ತಮ ಬರಹಗಳನ್ನು 'ಮೈಸೂರು ಮಿತ್ರ'ನಲ್ಲಿ ಪ್ರಕಟಿಸಲಾಗುವುದು. ಅಲ್ಲದೆ, ಅವುಗಳಿಗೆ 2 ಸಾವಿರ ರೂ. ನಗದು ಬಹುಮಾನ ಸಹ ನೀಡಲಾಗುವುದು. ಈ ಸಂಬಂಧ ಸಂಪಾದಕರ ತೀರ್ಮಾನವೇ ಅಂತಿಮವಾಗಿರುತ್ತದೆ. –ಸಂಪಾದಕರು

## ನಕ್ಕರೆ ಅದೇ ಸ್ವರ್ಗ

ರಾಮು : ಇವತ್ತು ನನ್ನ ಗರ್ಲ್ ಫ್ರೆಂಡ್ ಬರ್ತ್‌ಡೇ. ಅವಳಿಗೆ ಏನು ಕೊಡ್ಲಿ?

ಶಾಮು : ನೋಡೋಕೆ ಹೇಗಿದ್ದಾಳೆ?

ರಾಮು : ತುಂಬಾ ಚೆನ್ನಾಗಿದ್ದಾಳೆ!!

ಶಾಮು : ಹಾಗಿದ್ರೆ ನನ್ ನಂಬರ್ ಕೊಡು!!!

ಮೈಸೂರು ಮಿತ್ರ

ಬುಧವಾರ, 19 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತವಾಹಿನಿ..........

ಜೀವನದಲ್ಲಿ ದೊಡ್ಡ ಕೆಲಸ, ಕಾರ್ಯವೆಂಬುದು ಇಲ್ಲವೇ ಇಲ್ಲ. ದೊಡ್ಡ ಪ್ರೀತಿಯಿಂದ ಮಾಡಿದ ಎಷ್ಟೇ ಸಣ್ಣ ಕೆಲಸವಾದರೂ ಅದು ದೊಡ್ಡ ಕೆಲಸ, ಕಾರ್ಯವೇ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನುಜನಾಗಿ ಹುಟ್ಟಿ ಪಶುವಿನಂತೆ ಬದುಕಿದಂತೆ!

## ನಿಮ್ಮ ಪತ್ರಗಳು

### ■ಐಎಎಸ್ ಅಧಿಕಾರಿ ಜಯರಾಮ್: ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕರು

ಮಾನ್ಯರೆ,

'ಸ್ಟಾರ್ ಆಫ್ ಮೈಸೂರ್'ನ 27.5.2023ರ ಸಂಚಿಕೆಯ ಕೆ.ಬಿ.ಗಣಪತಿ ಅವರ ಅಬ್ರಕಾದಬ್ರ ಅಂಕಣದಲ್ಲಿ 'ವೇಕ್ ಅಪ್ ಮೈಸೂರು ; ಆಸ್ಕ್ ಸಿದ್ದರಾಮಯ್ಯ ಟು ಲೀವ್ ಬಿಯೈಂಡ್ ಎ ಲೆಗಸಿ ಫಾರ್ ಮೈಸೂರು (ಎದ್ದೇಳು ಮೈಸೂರು ; ಮೈಸೂರಿಗೆ ಒಂದು ಪರಂಪರೆಯನ್ನು ಬಿಟ್ಟುಕೊಡಲು ಸಿದ್ದರಾಮಯ್ಯರನ್ನು ಕೇಳಿ)' ಶೀರ್ಷಿಕೆಯಡಿ ಪ್ರಕಟಗೊಂಡ ಲೇಖನ ಸಮಯೋಚಿತವಾಗಿದೆ. ಪ್ರಸ್ತುತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾರ್ಯದರ್ಶಿಯಾಗಿ ಎನ್.ಜಯರಾಂ ಅವರನ್ನು ನೇಮಿಸಿರುವ ಕುರಿತು ಇಲ್ಲಿ ಉಲ್ಲೇಖಿಸಲಾಗಿದೆ.

ಮೈಸೂರಿನಲ್ಲಿ ಅವರು (ಜಯರಾಮ್) ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಹಾಗೂ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾಗಿದ್ದಾಗ, ಅವರೊಂದಿಗೆ ನಾನು ಉತ್ತಮ ಸಂಪರ್ಕ ಹೊಂದಿದ್ದೆ. ಇದರಿಂದ ಅವರು ಅತ್ಯಂತ ಪ್ರಾಮಾಣಿಕ ಹಾಗೂ ದಕ್ಷ ಅಧಿಕಾರಿ ಎಂಬುದನ್ನು ಕಂಡುಕೊಂಡೆ.

ವಿವಿ ಪುರಂ ಪೊಲೀಸ್ ಠಾಣೆ ಬಳಿ ದೊಡ್ಡ ವೃತ್ತ ನಿರ್ಮಿಸಿದ್ದಾಗ, ಇದರಿಂದ ಸಂಚಾರ ದಟ್ಟಣೆ ಉಂಟಾಗುವ ಮೂಲಕ ಸುಗಮ ಸಂಚಾರ ಕಷ್ಟಸಾಧ್ಯವಾಗಲಿದೆ ಎಂದು ನಾಗರಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ನಮ್ಮ ಮನವಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ ಅವರು, ಒಂದು ವಾರದಲ್ಲಿ ನಿರ್ಮಾಣಗೊಂಡಿದ್ದ ಸದರಿ ವೃತ್ತವನ್ನು ತೆರವುಗೊಳಿಸಲು ಕ್ರಮ ವಹಿಸಿದರು.

ಅವರಿಂದ ನನಗೆ ಮತ್ತೊಂದು ಉಪಯುಕ್ತ ಕಾರ್ಯವೂ ಆಗಿತ್ತು. ಬೆಂಗಳೂರಿನಲ್ಲಿರುವ ನನ್ನ ಷಡ್ಕ, ತಮ್ಮ ನೆರೆಯ ಮನೆಯವರೊಂದಿಗೆ ಒತ್ತುವರಿ ವಿಚಾರಕ್ಕೆ ಮನಸ್ತಾಪ ಹೊಂದಿದ್ದರು. ಅವರ ನೆರೆ ಮನೆಯವರು ಐದು ಅಡಿಗಳಷ್ಟು ಅತಿಕ್ರಮಿಸಿ, ಕಾಂಪೌಂಡ್ ನಿರ್ಮಿಸಿದ್ದರು. ಬೆಂಗಳೂರಿನ ಅವರ ಮನೆಗೆ ನಾನು ಭೇಟಿ ನೀಡಿದಾಗ, ಅವರು ನನ್ನ ಬಳಿ ಈ ವಿಷಯ ಪ್ರಸ್ತಾಪಿಸಿದ್ದರು. ಆಗ ಜಯರಾಮ್ ಅವರು ಬೆಂಗಳೂರಿನಲ್ಲೇ ಸೇವೆ ಸಲ್ಲಿಸುತ್ತಿದ್ದರು. ನಾನು ಅವರನ್ನು ಸಂಪರ್ಕಿಸಿ, ಈ ಸಮಸ್ಯೆ ವಿವರಿಸಿದೆ. ಕೂಡಲೇ ಸ್ಥಳಕ್ಕೆ ಭೇಟಿ ನೀಡಿದ ಅವರು, ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿದರು.

– **ಹೆಚ್.ಆರ್.ಬಾಪು ಸತ್ಯನಾರಾಯಣ, ಸರಸ್ವತಿಪುರಂ.**

**ಟಿಪ್ಪಣಿ:** ಈಗಲೂ ನಾವು ಇಂತಹ ಕೆಲ ಅಸಹಜ ದೊಡ್ಡ ವೃತ್ತಗಳನ್ನು ಹೊಂದಿದ್ದು, ಇಂತಹವು ಅಪಘಾತ ಹಾಗೂ ಸಂಚಾರ ದಟ್ಟಣೆಗೆ ಕಾರಣವಾಗುತ್ತಿವೆ. ಆದರೆ ಈಗ ನಮ್ಮಲ್ಲಿರುವ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ಅತ್ತ ಗಮನಹರಿಸುತ್ತಲೇ ಇಲ್ಲ. ಸಂಚಾರ ನಿಯಂತ್ರಿಸಲು ಅದರಲ್ಲೂ ಪ್ರಮುಖ ಸಮಯದಲ್ಲಿ ಸಂಚಾರ ಪೊಲೀಸರು ಹರಸಾಹಸಪಡುವಂತಾಗಿದೆ. **–ಸಂಪಾದಕ**

### ■ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧ ಸ್ವಾಗತಾರ್ಹ

ಮಾನ್ಯರೆ,

ಮನುಷ್ಯನಿಗೆ ನೆಮ್ಮದಿಯ ವಾತಾವರಣವನ್ನು ನಿರ್ಮಿಸುವ ಕೆಲವೇ ಸ್ಥಳಗಳಲ್ಲಿ ದೇವಸ್ಥಾನವು ಒಂದಾಗಿದೆ. ನಮ್ಮ ಹಿರಿಯರು ವಿಶಾಲ ಆವರಣ, ಹೂವಿಗಾಗಿ ಮರ ಗಿಡಗಳನ್ನು, ಶುಚಿತ್ವ ಕಾಪಾಡಲು ಪುಷ್ಕರಣಿಗಳನ್ನು ನಿರ್ಮಿಸುವ ಉದ್ದೇಶ, ದೇವಾಲಯಗಳಿಗೆ ಭೇಟಿ ಕೊಡುವ ಭಕ್ತರುಗಳಿಗೆ ಧನಾತ್ಮಕ ಚಿಂತನೆಗಳು ಮೂಡುವಂತಹ ವಾತಾವರಣವನ್ನು ನಿರ್ಮಾಣವಾಗುವಂತೆ ದೇವಾಲಯಗಳನ್ನು ನಿರ್ಮಿಸುತ್ತಿದ್ದರು.

ಪ್ರಸ್ತುತ ಯುವ ಜನಾಂಗಕ್ಕೆ ದೇವರಾಗಲೀ, ದೇವಸ್ಥಾನಗಳ ಬಗ್ಗೆ ಯಾವುದೇ ವಿಶೇಷ ಗೌರವವಾಗಲೀ ಭಕ್ತಿಯಾಗಲೀ ಇಲ್ಲವಾಗಿದ್ದು, ಮೊಬೈಲ್ ಫೋನ್‌ಗಳೇ ಇಂದಿನ ಯುವಜನಾಂಗಕ್ಕೆ ದೇವರಾಗಿದೆ. ಮೊಬೈಲ್‌ನಲ್ಲಿ ವಾಟ್ಸಾಪ್, ಇನ್ಸ್ಟಾಗ್ರಾಮ್‌ಗಳಿಗೆ ಫೋಟೋ, ವೀಡಿಯೋ ಮಾಡುವುದೇ ವೃತ್ತಿಯಾಗಿ ಬದಲಾಗಿದ್ದು, ದೇವಸ್ಥಾನಗಳಲ್ಲಿ ಯುವಜನಾಂಗದ ವರ್ತನೆ ಹಿರಿಯರಿಗೂ ಮುಜುಗರ ಉಂಟು ಮಾಡುವಂತಾಗಿದೆ. ಇದನ್ನು ತಪ್ಪಿಸುವ ಸಲುವಾಗಿ ರಾಜ್ಯ ಸರ್ಕಾರ ದೇವಾಲಯಗಳಲ್ಲಿ ಮೊಬೈಲ್ ಬಳಕೆಯನ್ನು ನಿಷೇಧ ಮಾಡುವ ಆದೇಶ ಹೊರಡಿಸಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಸರ್ಕಾರದ ಈ ಆದೇಶ ರಾಜ್ಯದ ಮುಜರಾಯಿ ಇಲಾಖೆಯ ಅಧೀನದ 30000 ದೇವಸ್ಥಾನಗಳಿಗೆ ಅನ್ವಯವಾಗಲಿದ್ದು, ರಾಜ್ಯ ಸರ್ಕಾರದ ಈ ಆದೇಶ ಭಕ್ತರುಗಳಿಗೆ ದೇವಸ್ಥಾನಗಳಲ್ಲಿ ನೆಮ್ಮದಿಯ ವಾತಾವರಣ ನಿರ್ಮಾಣ ಮಾಡುವುದು ಸಾಧ್ಯವಾಗುತ್ತದೆ. ರಾಜ್ಯ ಸರ್ಕಾರದ ಈ ಕ್ರಮ ಸೂಕ್ತವಾಗಿದ್ದು, ರಾಜ್ಯದ ಎಲ್ಲಾ ಆಸ್ತಿಕರ ಪರವಾಗಿ ರಾಜ್ಯ ಸರ್ಕಾರಕ್ಕೆ ಧನ್ಯವಾದಗಳು.

**–ರಾಸುಮ ಭಟ್, ಚಿಕ್ಕಮಗಳೂರು.**

### ■ಪ್ರಾರ್ಥನಾ ಮಂದಿರದಲ್ಲಿ ಮೊಬೈಲ್ ನಿಷೇಧ ಎಷ್ಟು ಸರಿ

ಮಾನ್ಯರೆ,

ನಮ್ಮ ರಾಜ್ಯ ಸರ್ಕಾರ ಅಧಿಕೃತವಾಗಿ ಘೋಷಣೆ ಮಾಡಿದಂತೆ ಧಾರ್ಮಿಕ ದತ್ತಿ ಇಲಾಖೆ ದೇವಸ್ಥಾನಗಳಲ್ಲಿ ಮೊಬೈಲ್ ನಿಷೇಧ ಕಾನೂನನ್ನು ಜಾರಿಗೆ ತಂದಿದೆ. ಇದನ್ನು ಕೇವಲ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸುವವರಿಗಲ್ಲದೆ ಭಕ್ತರಿಗೂ ಸಹ ಅನ್ವಯಿಸುವಂತೆ ಕಾನೂನು ರೂಪಿಸಲಾಗಿದೆ. ಇದಕ್ಕೆ ನನ್ನ ಪ್ರಶ್ನೆ ಸಂಬಂಧಪಟ್ಟ ಸಚಿವರು ಅಥವಾ ಅಧಿಕಾರಿಗೆ ಏನೆಂದರೆ, ಇದರಿಂದ ಭಕ್ತಾದಿಗಳಿಗೆ ಅನಾನುಕೂಲವೇ ಹೊರತು ಅನುಕೂಲವಲ್ಲ. ಇದಕ್ಕಿಂತ ಮುಖ್ಯವಾಗಿ ಸರ್ಕಾರಿ ಹಾಗೂ ಖಾಸಗಿ ಶಾಲಾ ಕಾಲೇಜು ಹಾಗೂ ಸರ್ಕಾರಿ ಕಚೇರಿಗಳು, ಆಸ್ಪತ್ರೆಗಳು ಇಂತಹ ಸ್ಥಳಗಳಲ್ಲಿ ಕಟ್ಟುನಿಟ್ಟಾಗಿ ಮೊಬೈಲ್ ಬಳಕೆಗೆ ನಿಷೇಧ ಹೇರಿದ್ದರೂ ಅಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಕಾನೂನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಯೋಚಿಸಬೇಕು.

ಅದರಲ್ಲೂ ಮುಖ್ಯವಾಗಿ ಶಾಲಾ–ಕಾಲೇಜುಗಳಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸದಾಕಾಲ ಅಸಭ್ಯ ರೀಲ್ಸ್ ಹಾಗೂ ಇನ್ನಿತರ ವಿಡಿಯೋ ಮಾಡಿ ಜಾಲತಾಣಗಳಲ್ಲಿ ಹಂಚಿಕೊಳ್ಳುವುದರಲ್ಲಿ ಬಿಜಿಯಾಗಿರುತ್ತಾರೆ. ಆದ್ದರಿಂದ ಇಂತಹ ಸ್ಥಳದಲ್ಲಿ ಮೊದಲು ಕಟ್ಟುನಿಟ್ಟು ಜಾರಿಯಾಗಬೇಕು. ದಯವಿಟ್ಟು ಸಂಬಂಧಪಟ್ಟವರು ಮೊದಲು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿ ವಿನಂತಿ.

**–ರಾಘವೇಂದ್ರ ಸಾಮಾಜಿಕ ಕಾರ್ಯಕರ್ತ, ಕುವೆಂಪುನಗರ**

### ■ ಹಸುಗಳ ಉಪಟಳದಿಂದ ಕಾಪಾಡಿ

ಮಾನ್ಯರೆ,

ಮೈಸೂರಿನ ವಿ.ವಿ. ಮೊಹಲ್ಲಾ 2ನೇ ಮುಖ್ಯ ರಸ್ತೆ ನಿರ್ಮಲಾ ಕಾನ್ವೆಂಟ್ ಬಳಿ ಹಸುಗಳ ಉಪಟಳ ಹೆಚ್ಚಾಗಿದೆ. ಚಿಕ್ಕ ಚಿಕ್ಕ ಶಾಲಾ ಮಕ್ಕಳ ಮೇಲೆ ಹಸುಗಳು ಎರಗಿ ಗಾಯಗೊಳಿಸಿರುವುದು ಉಂಟು. ಶಾಲಾ ಮಕ್ಕಳನ್ನು ಕರೆದೊಯ್ಯುವ, ಕರೆದುಕೊಂಡು ಬರುವ ಮಕ್ಕಳ ಪೋಷಕರ ದ್ವಿಚಕ್ರ ವಾಹನ ಚಾಲನೆಗೆ, ವ್ಯಾನ್ ಚಾಲಕರಿಗೆ ಇದರಿಂದ ತುಂಬಾ ತೊಂದರೆಯಾಗಿದೆ. ಕವ್ ಸ್ಕ್ವಾಡ್‌ನವರು ಈ ಬಗ್ಗೆ ಕೂಡಲೇ ಗಮನಹರಿಸಿ ಮುಂದಾಗಬಹುದಾದ ಅನಾಹುತ ತಪ್ಪಿಸಬೇಕೆಂದು ಮನವಿ.

**–ನೊಂದ ಪೋಷಕರು, ಮೈಸೂರು.**



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

# ವೈದ್ಯೋ ನಾರಾಯಣೋ ಹರಿ ಅಲ್ಲವೇ...



ಇಂದು ಶಿಕ್ಷಣ, ಸಮಾಜ ಸೇವೆ, ಆರೋಗ್ಯ ಕ್ಷೇತ್ರ ಇತ್ಯಾದಿ ಎಲ್ಲವೂ ವಾಣಿಜ್ಯ ರೂಪವನ್ನು ಪಡೆದಿವೆ. ಇನ್ನು ರಾಜಕೀಯದ ಬಗೆಗೆ ಹೇಳಬೇಕಾದುದೇನೂ ಇಲ್ಲ. ಎಲ್‌ಕೆಜಿಗೆ ಮಗುವನ್ನು ಸೇರಿಸುವಾಗ ಲಕ್ಷಗಳನ್ನು ತೆಗೆದುಕೊಂಡು ಹೋಗಬೇಕು. ಆಸ್ಪತ್ರೆಗೆ ಹೋದವನು ಹೆಣವಾಗಿ ಹಿಂದಿರುಗಿದರೂ ಲಕ್ಷಗಟ್ಟಲೆ ಬಿಲ್ ಕೊಡಬೇಕು. ವೈದ್ಯಕೀಯ ಶಿಕ್ಷಣವನ್ನು ಪಡೆಯಲು ಲಕ್ಷಗಳು ಸಾಲವು, ಕೋಟಿಗಳೇ ಬೇಕು. ಈ ವಿಷವರ್ತುಲದಿಂದ ಹೊರಗೆ ಬರುವುದು ಅತ್ಯಂತ ಕಷ್ಟ. ಕೋಟಿಗಟ್ಟಲೆ ಖರ್ಚು ಮಾಡಿ ಡಾಕ್ಟರ್ ಆದವರು ಆ ಬಂಡವಾಳದ ಮೇಲೆ ಬಡ್ಡಿ ಸಹಿತವಾಗಿ ಪ್ರತಿಫಲವನ್ನು ಪಡೆದು ಶ್ರೀಮಂತರಾಗಲು ಅಪೇಕ್ಷಿಸುವಾಗ ಅವರಲ್ಲಿ ಮಾನವೀಯತೆ ಉಳಿದುಕೊಳ್ಳುವುದಾದರೂ ಹೇಗೆ? ಹಾಗೆ ನಿರೀಕ್ಷಿಸುವುದೂ ತಪ್ಪು ಎನಿಸುವಂತಾಗಿದೆ ಇಂದಿನ ಸಾಮಾಜಿಕ ವ್ಯವಸ್ಥೆ.

ಇಂತಹ ದಿನಗಳಲ್ಲೂ ಮಾನವೀಯತೆಯ ಸಾಕಾರಮೂರ್ತಿಯಾಗಿ, ಪರೋಪಕಾರಿಯಾಗಿ, ಬಡವರ ಬಂಧುವಾಗಿ, ರೋಗಿಗಳ ಪಾಲಿನ ದೇವರಾಗಿ ನಮ್ಮೆದುರಿನಲ್ಲಿ ಇರುವವರು ಡಾ.ವಿ. ಲಕ್ಷ್ಮೀನಾರಾಯಣ್. ಎಂಬತ್ತರ ಸಮೀಪದ ವಯಸ್ಸಿನಲ್ಲೂ ಅವರು ಉತ್ಸಾಹದ ಚಿಲುಮೆಯಾಗಿ ಒಂದೊಂದು ಕ್ಷಣದಲ್ಲೂ ರೋಗಿಗಳ ಯೋಗಕ್ಷೇಮವನ್ನು ವಿಚಾರಿಸುತ್ತಿರುವುದನ್ನು, ಸೂಕ್ತ ಸಲಹೆಗಳನ್ನು ಕೊಡುತ್ತಿರುವುದನ್ನು ನೋಡಿದರೆ ಯುವಕರೂ ನಾಚಿಕೊಳ್ಳಬೇಕು. ಕೋಟ್ಯಾಧೀಶನನ್ನು ನೋಡಿಕೊಳ್ಳುವಷ್ಟು ಜತನದಿಂದ ಬಿಡಿಗಾಸಿಲ್ಲದ ಬಡವನನ್ನೂ ರೋಗದ ಸಂಕೋಲೆಯಿಂದ ಬಿಡಿಸಲು ಇವರು ಪ್ರಯತ್ನಶೀಲರಾಗಿರುವುದನ್ನು ನಾವೇ ಕಂಡಿದ್ದೇವೆ. ಇವರು ಮೈಸೂರಿನಲ್ಲಿರುವುದು ನನ್ನಂತಹ ನೂರಾರು ಜನರ ಭಾಗ್ಯ.

ಡಾ. ಲಕ್ಷ್ಮೀನಾರಾಯಣ್ ವೈದ್ಯರಾಗಲು ಬಯಸಿದ್ದು ದೊಡ್ಡ ಶ್ರೀಮಂತರಾಗಬೇಕೆಂಬ ಬಯಕೆಯಿಂದಲ್ಲ. ರೋಗದಿಂದ ನರಳುತ್ತಿದ್ದ, ಚಿಕಿತ್ಸೆಯಿಲ್ಲದೆ ಬಳಲುತ್ತಿದ್ದ ದುರ್ಬಲರಿಗೆ ನೆರವು ನೀಡಬೇಕೆಂಬ ಹಂಬಲದಿಂದ ಬೆಂಗಳೂರಿನ ಮೆಡಿಕಲ್ ಕಾಲೇಜಿನಲ್ಲಿ ಅವರಿಗೆ ಅಧ್ಯಾಪಕ ವೃತ್ತಿ ದೊರಕಿತ್ತು. ಇಷ್ಟ ಪಟ್ಟಿದ್ದರೆ ಅವರು ರಾಜಧಾನಿಯಲ್ಲಿ ಸುಖಮಯ ಜೀವನವನ್ನು ನಡೆಸಬಹುದಾಗಿತ್ತು. ಪ್ರಾಧ್ಯಾಪಕ, ಪ್ರಿನ್ಸಿಪಾಲ್, ನಿರ್ದೇಶಕ ಮುಂತಾದ ಉನ್ನತ ಹುದ್ದೆಗಳನ್ನು ಅಲಂಕರಿಸಬಹುದಾಗಿತ್ತು. ಆದರೆ ಸೇವಾಭಾವನೆಯಿಂದ ಅವರು ಹಳ್ಳಿಗಳಿಗೆ, ಸಣ್ಣ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆಯ ತುರ್ತು ಅವಶ್ಯಕತೆ ಇದ್ದವರಿಗೆ, ಅದನ್ನು ಹಣದಿಂದ ಕೊಳ್ಳಲು ಶಕ್ತಿ ಇಲ್ಲದವರಿಗೆ ತಮ್ಮ ಸೇವೆಯನ್ನು ಒದಗಿಸಿದರು.

ಅವರ ಹಿನ್ನೆಲೆಯನ್ನು ನೋಡಿದರೆ ಅವರು ಇಷ್ಟು ದೊಡ್ಡ ವೈದ್ಯರಾಗಿ ರೂಪುಗೊಂಡದ್ದು ಒಂದು ಅದ್ಭುತವೇ ಸರಿ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಒಂದು ಸಣ್ಣ ಹಳ್ಳಿಯಲ್ಲಿ ಬಡಕುಟುಂಬದಲ್ಲಿ ಹುಟ್ಟಿದ ಲಕ್ಷ್ಮೀನಾರಾಯಣ್‌ಗೆ ಹೈಸ್ಕೂಲಿನಲ್ಲಿ ಇಂಗ್ಲಿಷ್ ಮೀಡಿಯಂಗೆ ಪ್ರವೇಶ ದೊರಕಲಿಲ್ಲ. ಕನ್ನಡ ಮಾಧ್ಯಮದಲ್ಲಿ ಓದಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಇಂಗ್ಲೀಷ್‌ನಲ್ಲಿ ಇಡೀ ಶಾಲೆಗೆ ಪ್ರಥಮ ಸ್ಥಾನವನ್ನು ಪಡೆದ ವಿದ್ಯಾರ್ಥಿ ಎಂದರೆ ಅವರ ಪ್ರತಿಭೆಯನ್ನೂ ಪರಿಶ್ರಮವನ್ನೂ ಅರಿಯಬಹುದು. ಅನಂತರ ಮೈಸೂರಿಗೆ ಬಂದು ಕಷ್ಟ ಕೋಟಲೆಗಳ ಮಧ್ಯದಲ್ಲೇ ಪಿಯುಸಿ ಪರೀಕ್ಷೆಯನ್ನು ಎದುರಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಮೈಸೂರು ಮೆಡಿಕಲ್ ಕಾಲೇಜನ್ನು ಪ್ರವೇಶಿಸಿದುದು ಒಂದು ಸಾಹಸಗಾಥೆ. ಅನುಕೂಲತೆಗಳು, ಸಾಧನಗಳು ಇಲ್ಲದಿದ್ದರೂ **'ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ'** ಎಂಬ ಸೂಕ್ತಿಗೆ ಉದಾಹರಣೆಯಾಗಿ ಅವರು ಸಿದ್ಧಿಯನ್ನು ಪಡೆದವರು. ವೈದ್ಯ ವೃತ್ತಿಯಲ್ಲಿ ಯಾರ ಮುಲಾಜಿಗೂ ಮಣಿಯದೆ, ಯಾರ ಒತ್ತಡಕ್ಕೂ ಬಗ್ಗದೆ ನೂರಕ್ಕೆ ನೂರರಷ್ಟು ಪ್ರಾಮಾಣಿಕತೆಯಿಂದ ದುಡಿದ ವ್ಯಕ್ತಿ ಅವರು. ಅಂತಹವರು ಈ ಕಾಲದಲ್ಲಿ ವಿರಳಾತಿವಿರಳ. ಅವರಿಗಿಂತ ಧೀಮಂತರು, ಶ್ರೀಮಂತರು ಹಲವರು ಇರಬಹುದು. ಆದರೆ ಅವರಷ್ಟು ಒಳ್ಳೆಯವರನ್ನು ನಾನು ಕಂಡಿಲ್ಲ.

ವೈದ್ಯಶಾಸ್ತ್ರದ ಹಲವು ಮುಖಗಳಲ್ಲಿ ಅವರಿಗೆ ಪ್ರವೇಶವಿದ್ದರೂ ಅವರು ಮುಖ್ಯವಾಗಿ ಮಧುಮೇಹ ಚಿಕಿತ್ಸೆಯಲ್ಲಿ ವಿಶೇಷ ಪರಿಣತಿಯನ್ನು ಪಡೆದವರು. ಈ ಬಗೆಗೆ ಅವರು ಆಸ್ಟ್ರೇಲಿಯಾ ದೇಶದಲ್ಲೂ ಅಧ್ಯಯನವನ್ನು ಸಂಶೋಧನೆಯನ್ನೂ ಮಾಡಿ ಪದವಿಯನ್ನು ಗಳಿಸಿದವರು. ಅದರ ಸಂಪೂರ್ಣ ಲಾಭ ನಮ್ಮ ದೇಶಕ್ಕೆ ಸಿಕ್ಕಿರುವುದು ನಮ್ಮ ಅದೃಷ್ಟ. ಅವರ ಶ್ರೀಹರಿ ಕ್ಲಿನಿಕ್ ದೇವಾಲಯಕ್ಕೆ ಸಮಾನ. ಅಷ್ಟೇ ಪವಿತ್ರ. ಡಾಕ್ಟರ್ ಮಾತ್ರವಲ್ಲ, ಅವರ ಸಿಬ್ಬಂದಿಗಳೂ ಅಷ್ಟೇ ವಿನಯಶಾಲಿಗಳು. ಅವರ ನಗುಮುಖವೇ ನಮ್ಮ ಕಾಯಿಲೆಯನ್ನು ಅರ್ಧ ಗುಣಪಡಿಸಿಬಿಡುತ್ತದೆ.

ಡಾ. ಲಕ್ಷ್ಮೀನಾರಾಯಣರ ಮುಗ್ಧ ಮುಕ್ತ ಮನಸ್ಸು ಎಲ್ಲರನ್ನೂ ಆಕರ್ಷಿಸುತ್ತದೆ. ಯಾವುದಾದರೂ ವಿನೋದದ ಪ್ರಸಂಗವನ್ನು ಕೇಳಿದರೆ ಅವರು ಜೋರಾಗಿ ನಕ್ಕು ಬಿಡುತ್ತಾರೆ. ರೋಗಿಯ ವಿವರಣೆಗಳನ್ನೆಲ್ಲ ನಿಸ್ಸಂಕೋಚವಾಗಿ ಕೇಳಿ ತಿಳಿದುಕೊಳ್ಳುತ್ತಾರೆ. ರೋಗಿಯಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತಾರೆ. ಒಂದು ದೃಷ್ಟಿಯಿಂದ ನೋಡಿದರೆ ಅವರು ಕಲಿಯುಗದಲ್ಲಿ ಬದುಕುತ್ತಿರುವ ಕೃತಯುಗದ ಋಷಿಸದೃಶ ಮಾನವ. ಪತ್ರಿಕಾಕಾರ ದಿವಂಗತ ರಾಜಶೇಖರ ಕೋಟಿ ಡಾ. ಲಕ್ಷ್ಮೀನಾರಾಯಣರನ್ನು Common Man's Doctors ಎಂದು ಕರೆದಿದ್ದರಂತೆ. ಹಾಗೆಂದರೆ ಜನಸಾಮಾನ್ಯರ ವೈದ್ಯ. ಇಂದಿನ ಕಾಲದಲ್ಲಿ ಅಂತಹ ಜನಸಾಮಾನ್ಯರಿಗೆ ಚಿಕಿತ್ಸೆ ಅವಶ್ಯಕವಾಗಿದೆ. ಅವರಿಗೆ ಮಿತ್ರನಂತೆ ನೆಂಟನಂತೆ ಗುರುವಿನಂತೆ ನೆರವನ್ನೂ ಬಲವನ್ನೂ ಜೀವನೋಪದೇಶವನ್ನೂ ಕೊಡುವ ಈ ಡಾಕ್ಟರ್ ಸ್ನೇಹಕ್ಕೂ ಪ್ರೀತಿಗೂ ಗೌರವಕ್ಕೂ ಪಾತ್ರರಾಗಿರುವುದು ಸಹಜವಾಗಿದೆ.

ಸಾಮಾನ್ಯ ಮಾನವನ ಡಾಕ್ಟರ್ ಎಂದ ಮಾತ್ರಕ್ಕೆ ಮಾನ್ಯರೂ, ಅಸಾಮಾನ್ಯರೂ ಇವರಿಗೆ ದೂರ ಎಂದುಕೊಳ್ಳಬಾರದು. ರಾಷ್ಟ್ರಕವಿ ಕುವೆಂಪು ಅವರಿಗೆ ಡಾ.ಲಕ್ಷ್ಮೀನಾರಾಯಣ್ ಆಪ್ತ ವೈದ್ಯರಾಗಿದ್ದರು. ಕನ್ನಡದಲ್ಲಿ ಬರೆದರೂ ಅಖಿಲ ಭಾರತದ ಓದುಗರಿಗೆ ಪ್ರಿಯರಾದ ಡಾ. ಎಸ್.ಎಲ್.ಭೈರಪ್ಪನವರ ಆರೋಗ್ಯವನ್ನು ಕಾಪಾಡಿ ಕನ್ನಡ ಮಾತೆಗೆ ಸೇವೆಯನ್ನು ಸಲ್ಲಿಸುತ್ತಿರುವವರೂ ಡಾ. ಲಕ್ಷ್ಮೀನಾರಾಯಣ್ ಅವರೇ. ಅನುವಾದ ಕ್ಷೇತ್ರದಲ್ಲಿ ಹಿಮಾಲಯೋನ್ನತಿಯನ್ನು ಸಾಧಿಸಿರುವ ಡಾ. ಪ್ರಧಾನ್ ಗುರುದತ್ತ ಅವರೂ ಆರೋಗ್ಯದ ಸುಸ್ಥಿತಿಗಾಗಿ ಡಾ.ಲಕ್ಷ್ಮೀನಾರಾಯಣ್ ಅವರನ್ನೇ ಅವಲಂಬಿಸುತ್ತಾರೆ.

ಲೇಖಕರಾಗಿ ಡಾ. ಲಕ್ಷ್ಮೀನಾರಾಯಣ್ ಮಧುಮೇಹದ ಬಗೆಗೆ ಬರೆದಿರುವ ಗ್ರಂಥಗಳು ಹಲವು ಮುದ್ರಣಗಳನ್ನು ಕಂಡು ಕನ್ನಡ ನಾಡಿನ ಮನೆ ಮನೆಯ ಗ್ರಂಥಾಲಯಗಳಲ್ಲಿ ಸ್ಥಾನವನ್ನು ಪಡೆದಿದೆ. ಅವರ ಸುಪುತ್ರ ಅಮೇರಿಕಾ ನಿವಾಸಿ ಡಾ.ಸೂರಜ್ ತೇಜಸ್ವಿಯೊಡನೆ ಅವರು ರಚಿಸಿರುವ The world's invisible enemy Diabetes ಎಂಬುದು ಆರ್ಟ್ ಆಫ್ ಲಿವಿಂಗ್‌ನಿಂದ ಪ್ರಕಟಿತವಾಗಿ ಜಗತ್ಪ್ರಸಿದ್ಧವಾಗಿದೆ. ಭಾರತ ದೇಶದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಪ್ರಶಂಸೆಗೂ ಇದು ಪಾತ್ರವಾಗಿದೆ ಎಂದು ಹೇಳಿದರೆ ಸಾಕು, ಇದರ ಮಹತ್ತ್ವ ವೇದ್ಯವಾಗುತ್ತದೆ.

ಡಾ.ಲಕ್ಷ್ಮೀನಾರಾಯಣ್ ಕೋಲಾರ ಜಿಲ್ಲೆಯಲ್ಲಿ ಹುಟ್ಟಿದವರು. ಅಲ್ಲಿ ಎಲ್ಲರೂ ಕನ್ನಡವನ್ನೂ ತೆಲುಗನ್ನೂ ಮಾತನಾಡುತ್ತಾರೆ. ಓದು, ಬರಹ ಕನ್ನಡದಲ್ಲೇ. ಅವರಿಗೆ ಎರಡು ಭಾಷೆಗಳಲ್ಲೂ ಪ್ರೀತಿ. ಪುರಂದರದಾಸರ ದೇವರ ನಾಮಗಳಲ್ಲಿ ಎಷ್ಟು ಆಸಕ್ತಿಯೋ, ತ್ಯಾಗರಾಜರ ಕೀರ್ತನೆಗಳಲ್ಲೂ ಅಷ್ಟೇ ಅನುರಾಗ. ಡಾ.ರಾಜಕುಮಾರ್ ಕುರಿತು ಎಷ್ಟು ಅಭಿಮಾನವೋ ಎ.ನಾಗೇಶ್ವರ ರಾವ್‌ನಲ್ಲೂ ಅಷ್ಟು ಆದರ. ಈಗಲೂ ಡಾ. ಲಕ್ಷ್ಮೀನಾರಾಯಣ್ ಅನಾರ್ಕಲಿ ಸಿನಿಮಾದ 'ರಾಜಶೇಖರಾ ನೀ ಪೈ ಮೋಜು ತೀರಲೇದುರಾ' ಎಂಬ ಹಾಡನ್ನು ಕೇಳುತ್ತಾ ಮೈ ಮರೆಯುತ್ತಾರೆ. ತಮ್ಮ ಮಾತುಗಳಲ್ಲಿ ಅವರು ಸರ್ವಜ್ಞನ ವಚನಗಳನ್ನು ಉದಾಹರಿಸುವಂತೆ ವೇಮನನ ಪದ್ಯಗಳನ್ನು ಹೇಳುತ್ತಾರೆ. ಆಧುನಿಕ ಕನ್ನಡ ಸಾಹಿತಿಗಳಲ್ಲಿ ಅವರು ಅಗ್ರ ಪೂಜೆಗೆ ಆರಿಸುವುದು ಕುವೆಂಪು ಅವರನ್ನೇ. ಕುವೆಂಪು ಸಾಹಿತ್ಯದ ವೈಶಾಲ್ಯವನ್ನೂ ಗಾಂಭೀರ್ಯವನ್ನೂ ಸೌಂದರ್ಯವನ್ನು ಅವರು ಮನಸಾರೆ ಮೆಚ್ಚಿಕೊಂಡಿದ್ದಾರೆ.

ಡಾ.ಲಕ್ಷ್ಮೀನಾರಾಯಣ್ ಅವರ ಸಾಧನೆ, ಸಿದ್ಧಿ, ಸಾಫಲ್ಯ–ಇವುಗಳಲ್ಲಿ ಅವರ ಧರ್ಮಪತ್ನಿ ಪ್ರೊ. ಲಕ್ಷ್ಮೀದೇವಿ ಅವರು ಮುಖ್ಯ ಪಾತ್ರವನ್ನು ವಹಿಸಿದ್ದಾರೆ. ಅವರಿಬ್ಬರ ಸಂತೃಪ್ತ ದಾಂಪತ್ಯದ ಫಲವಾಗಿರುವ ಮೂವರು ಸುಪುತ್ರರು ಉನ್ನತ ಸ್ಥಾನಗಳಲ್ಲಿ ದೇದೀಪ್ಯಮಾನರಾಗಿ ಬೆಳಗುತ್ತಿದ್ದಾರೆ. ಮೊಮ್ಮಕ್ಕಳೊಡನೆ ಡಾ.ಲಕ್ಷ್ಮೀನಾರಾಯಣ್ ಮಾತನಾಡುವುದನ್ನು ಕೇಳಿದಾಗ ಅಮೃತದ ಹೊಳೆಯಲ್ಲಿ ಮಿಂದ ಅನುಭವ ಉಂಟಾಗುತ್ತದೆ. ಪತ್ನಿಯಲ್ಲಿ ಅವರಿಗಿರುವ ಆದರವು ಕೆಳಗಿನ ಶ್ಲೋಕದಲ್ಲಿ ವ್ಯಕ್ತವಾಗಿದೆ –

**ಸಂಸಾರೇsಸ್ಮಿನ್ ಸುರುಚಿರಸತೀಭಾವನಾ**
**ಭಾವಿತಾನಾಮ್**
**ಆಯುರ್ವೇದೇ ಸಹಕೃತವತೀ**
**ನಿತ್ಯಮತ್ಯಂತಹಾರ್ದಾತ್।**
**ತಸ್ಮೈ ಲಕ್ಷ್ಮ್ಯೈ ಶುಭದನಿಲಯಃ**
**ಪ್ರೀತಿ ಕಾರ್ತಜ್ಞ್ಯಭಾವಾದ್**
**ದತ್ತೋ, ಭೂಯಾದಿಹ ಚ ಸತತಂ**
**ದೇವತಾನಾಂ ಪ್ರಸಾದಃ॥**

(ಸುಂದರ ಸತಿಯ ಭಾವನೆಯನ್ನು ತುಂಬಿಕೊಂಡು ನನ್ನ ವೈದ್ಯ ವೃತ್ತಿಯಲ್ಲಿ ಯಾವಾಗಲೂ ಅತ್ಯಂತ ಸ್ನೇಹದಿಂದ ಪ್ರತಿನಿತ್ಯವೂ ಸಹಕಾರವನ್ನು ನೀಡುತ್ತಿರುವ ಲಕ್ಷ್ಮೀಗೆ ಈ ನಿಲಯವನ್ನು ಅರ್ಪಿಸುತ್ತಿದ್ದೇನೆ. ಇಲ್ಲಿ ಎಲ್ಲ ದೇವತೆಗಳ ಅನುಗ್ರಹವು ಸದಾ ಇರಲಿ)

ಈ ಶ್ಲೋಕವು ಅವರ ನಿಲಯದಲ್ಲಿ ರಾರಾಜಿಸುತ್ತಿದೆ. ಇದೇ ರೀತಿಯಲ್ಲಿ ಡಾ. ಲಕ್ಷ್ಮೀನಾರಾಯಣ್ ಅವರ ಗುರುಭಕ್ತಿಯನ್ನು ಅಭಿವ್ಯಂಜಿಸುವ ಇನ್ನೊಂದು ಸಂಸ್ಕೃತಪದ್ಯವೂ ಅವರ ಆಸ್ಪತ್ರೆಯ ಗೋಡೆಯ ಮೇಲೆ ಶೋಭಿಸುತ್ತಿದೆ–

**ಭಕ್ತ್ಯಾ ನಮಾಮಿ**
**ಗುರುವರ್ಯಮಮೋಘವಿದ್ಯಂ**
**ಯೋ ವೈದ್ಯಶಾಸ್ತ್ರಮಮಲಂ**
**ಪ್ರದಿದೇಶ ಮಹ್ಯಮ್।**
**ಪ್ರೋತ್ಸಾಹಕಾನಪಿ ಪುನಃ**
**ಸಹಕಾರದಾತ್ಯನ್**
**ಪ್ರೇಷ್ಠಾನ್ ನಮಾಮಿ**
**ಭಗವಂತಮಹೀನಸತ್ತ್ವಮ್॥**

(ನನಗೆ ನಿರ್ದೋಷವಾದ ವೈದ್ಯಶಾಸ್ತ್ರವನ್ನು ಕಲಿಸಿದ, ಅಮೋಘ ವಿದ್ಯೆಯನ್ನು ಪಡೆದಿದ್ದ ಗುರುವರ್ಯನನ್ನು ನಾನು ಭಕ್ತಿಯಿಂದ ವಂದಿಸುತ್ತೇನೆ. ನನಗೆ ಪ್ರೋತ್ಸಾಹವನ್ನು ಕೊಟ್ಟವರನ್ನೂ ಸಹಕಾರ ನೀಡಿದವರನ್ನೂ ಅಪಾರ ಶಕ್ತಿಯ ನಿಧಿಯಾದ ಭಗವಂತನನ್ನೂ ತಲೆಬಾಗಿ ನಮಿಸುತ್ತೇನೆ).

ಇದು ಗುರು ಡಾ. ಗೋವಿಂದಪ್ಪನವರನ್ನು ಅವರು ಸದಾ ಸ್ಮರಿಸುವ ರೀತಿ, ಭಗವಂತನನ್ನು ಮರೆಯದ ನೀತಿ. ಹಾಗೆಂದು ಸ್ವಪ್ರಯತ್ನವನ್ನು ಮಾಡದೆ ದೇವರ ಮೇಲೆ ಭಾರವನ್ನು ಹಾಕಿ ಕುಳಿತುಕೊಳ್ಳುವುದನ್ನು ಅವರು ಒಪ್ಪುವುದಿಲ್ಲ. ಸಂಪೂರ್ಣ ಪ್ರಯತ್ನವನ್ನು ಮಾಡಿ ಫಲವನ್ನು ಭಗವಂತನ ಇಚ್ಛೆಗೆ ಬಿಡೋಣ ಎನ್ನುವುದು ಅವರ ಪಾಲಿಸಿ.

ಇನ್ನೊಂದು ವಿಶೇಷ ಎಂದರೆ ಡಾ. ಲಕ್ಷ್ಮೀನಾರಾಯಣ್ ಅವರ ಉದಾರತೆ. ಬಡ ರೋಗಿಗಳಿಗೆ ಅವರೇ ಮುಫತ್ತಾಗಿ ಔಷಧಗಳನ್ನು ಕೊಡುವುದನ್ನು ನೋಡಿದ್ದೇನೆ. ಮಿತ್ರರ ಬಗೆಗಂತೂ ಅವರೊಂದು ಕಲ್ಪವೃಕ್ಷ. ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗೆ ಅವರು ಮುಕ್ತ ಹಸ್ತದಿಂದ ಧನ ಸಹಾಯ ಮಾಡಿರುವುದೂ ನನಗೆ ಗೊತ್ತು.

ಇಂತಹ ಆದರ್ಶ ವ್ಯಕ್ತಿಗೆ, ಅಪೂರ್ವ ವೈದ್ಯರಿಗೆ, ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿರುವ ಆಧುನಿಕ ಧನ್ವಂತರಿಗೆ ಅವರ ಅಭಿಮಾನಿಗಳೂ ಮಿತ್ರರೂ **ನಾರಾಯಣ ನಮನ** ಎಂಬ ಗೌರವ ಗ್ರಂಥವನ್ನು ಅರ್ಪಿಸಿ ಧನ್ಯರಾಗುತ್ತಿರುವುದು ಸಂತೋಷದ ಸಂಗತಿ. ಡಾ.ಲಕ್ಷ್ಮೀನಾರಾಯಣ್ ಅವರಿಗೆ ನಾವು ಹೇಳುವುದಿಷ್ಟೇ.

**'ಶತಂ ಜೀವ ಶರದೋ ವರ್ಧಮಾನಃ'** (ನೂರು ವರುಷ ನೀವು ಹರ್ಷದಿಂದ ಬಾಳಿರಿ).

## ಅಡುಗೆ ಎಣ್ಣೆ, ತುಪ್ಪದ ದರ ಇಳಿಕೆ

### ನಿಟ್ಟುಸಿರು ಬಿಟ್ಟ ಬಳಕೆದಾರರು



ಮೈಸೂರು, ಜು.18 (ಎಂಕೆ)– ಕೊರೊನಾ ಲಾಕ್‌ಡೌನ್ ಹಾಗೂ ರಷ್ಯಾ–ಉಕ್ರೇನ್ ಯುದ್ಧದ ಆರಂಭದ ಸಂದರ್ಭದಲ್ಲಿ ಇನ್ನೂರರ ಸನಿಹ ತಲುಪಿದ್ದ ಅಡುಗೆ ಎಣ್ಣೆ ಗಣನೀಯವಾಗಿ ಇಳಿಕೆಯಾಗಿದ್ದು, ಗ್ರಾಹಕರು ನಿಟ್ಟುಸಿರು ಬಿಡುವಂತಾಗಿದೆ....

ದಿನಬಳಕೆ ಆಹಾರ ಪದಾರ್ಥಗಳಲ್ಲಿ ಅತೀ ಮುಖ್ಯವಾದ ಅಡುಗೆ ಎಣ್ಣೆ ಬೆಲೆಯಲ್ಲಿ ಬರೋಬ್ಬರಿ 75–80 ರೂ. ಇಳಿಕೆಯಾಗಿದ್ದು, ಮಹಾಮಾರಿ ಕೊರೊನಾ ಲಾಕ್‌ಡೌನ್‌ಗೂ ಮುನ್ನ ಇದ್ದಂತಹ ಬೆಲೆಗೆ ಬಂದು ನಿಂತಿದೆ. ಸೋಯಾಬೀನ್, ರೈಸ್ ಬ್ರಾನ್, ಸೂರ್ಯಕಾಂತಿ ಮತ್ತು ಕಡಲೆಕಾಯಿ ಎಣ್ಣೆ ಸೇರಿದಂತೆ ಖಾದ್ಯ ತೈಲಗಳ ದರ ಇಳಿಕೆಯಾಗಿದ್ದು, ಇದು ಮುಂಬರುವ ಲೋಕಸಭಾ ಚುನಾವಣೆಯ ಎಫೆಕ್ಟ್ ಇರಬಹುದು ಎನ್ನಲಾಗುತ್ತಿದೆ.

ಅಡುಗೆ ಎಣ್ಣೆಯ ಪ್ರಮುಖ ಬ್ರಾಂಡ್‌ಗಳಾದ ಸನ್‌ಪ್ಯೂರ್ ಲೀಟರ್‌ಗೆ 190 ರಿಂದ 110 ರೂ.ಗೆ ಇಳಿಕೆಯಾದರೆ, ಫಾರ್ಚೂನ್ 180ರಿಂದ 110 ರೂ., ಗೋಲ್ಡ್‌ವಿನ್ನರ್ 175ರಿಂದ 113 ರೂ., ಪಾಮ್ ಆಯಿಲ್ 130ರಿಂದ 90 ರೂ., ರುಚಿ ಗೋಲ್ಡ್ 120ರಿಂದ 95 ರೂ., ಕೊಬ್ಬರಿ ಎಣ್ಣೆ ಲೀಟರ್‌ಗೆ 200 ರಿಂದ 180 ರೂ.ಗಳಿಗೆ ಇಳಿಕೆಯಾಗಿದೆ. ರೈಸ್‌ಬ್ರಾನ್ ಆಯಿಲ್‌ಗಳು (ಸನ್‌ಪ್ಯೂರ್ ಮತ್ತು ಫ್ರೀಡಂ) ಲೀಟರ್‌ಗೆ 115 ರೂ.ಗಳಾಗಿದೆ.

ಹಾಗೆಯೇ ತುಪ್ಪಗಳಲ್ಲಿ ವನಸ್ಪತಿ ತುಪ್ಪ ಕೆ.ಜಿಗೆ 130ರಿಂದ 110 ರೂ. ಗಳಿಗೆ ಇಳಿಕೆಯಾದರೆ, ಬಹು ಬೇಡಿಕೆಯ ಆರ್‌ಜಿ ತುಪ್ಪ ಕೆಜಿಗೆ 180 ರೂ.ನಿಂದ 135 ರೂ.ಗಳಿಗೆ ಕಡಿಮೆಯಾಗಿದೆ. ರುಚಿ ನಂ.1 ತುಪ್ಪ 160 ರೂ.ಗಳಿಂದ 100 ರೂ.ಗೆ ಇಳಿಕೆಯಾಗಿದ್ದು, ಬಹುತೇಕ ಎಲ್ಲಾ ಬಗೆಯ ಬ್ರಾಂಡ್‌ಗಳ ಅಡುಗೆ ಎಣ್ಣೆ ಹಾಗೂ ತುಪ್ಪದ ಬೆಲೆಗಳಲ್ಲಿಯೂ ಇಳಿಕೆಯಾಗಿದೆ.

**ಒಂದಷ್ಟು ನಿರಾಳ:** ಅಡುಗೆ ಎಣ್ಣೆ ಬೆಲೆ ಇಳಿಕೆಯಾಗಿರುವುದರಿಂದ ಒಂದಷ್ಟು ನಿರಾಳವಾಗಿದೆ. ಬೆಲೆ ಏರಿಕೆಯಿಂದ ಗ್ರಾಹಕರ ಹತ್ತಾರು ಪ್ರಶ್ನೆಗಳಿಗೆ ಉತ್ತರಿಸಿಯೇ ಸಾಗುತ್ತಿತ್ತು. ಸದ್ಯಕ್ಕೆ ಅಡುಗೆ ಎಣ್ಣೆ ಬೆಲೆ ಕಡಿಮೆಯಾಗಿದ್ದು, ಗ್ರಾಹಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಕೊರೊನಾ ಲಾಕ್‌ಡೌನ್ ಹಾಗೂ ರಷ್ಯಾ–ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಲೀಟರ್ ಅಡುಗೆ ಎಣ್ಣೆ 200 ರೂ. ಹತ್ತಿರ ಇತ್ತು ಎಂದು ದೇವರಾಜ ಮಾರುಕಟ್ಟೆಯಲ್ಲಿರುವ ಶ್ರೀ ವೆಂಕಟೇಶ್ವರ ಆಯಿಲ್ ಟ್ರೇಡರ್ಸ್‌ನ ಮಾಲೀಕರಾದ ಶಾಲಿನಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

**ಶಾಪಿಂಗ್ ಮಾಲ್‌ಗಳಲ್ಲಿ ಕೊಂಚ ವ್ಯತ್ಯಾಸ:** ಮೋರ್, ರಿಲಾಯನ್ಸ್ ಮಾರ್ಟ್ ಸೇರಿದಂತೆ ಇನ್ನಿತರೆ ಶಾಪಿಂಗ್ ಮಾಲ್‌ಗಳಲ್ಲಿ ಅಡುಗೆ ಎಣ್ಣೆ ಲೀಟರ್‌ಗೆ ಕೊಂಚ ವ್ಯತ್ಯಾಸವಿದ್ದು, ವಿವಿಧ ಬಗೆಯ ಬ್ರಾಂಡ್‌ಗಳ ಅಡುಗೆ ಎಣ್ಣೆ ಲೀಟರ್‌ಗೆ 115ರಿಂದ 130 ರೂ.ಗಳವರೆಗೆ ಮಾರಾಟ ಮಾಡಲಾಗುತ್ತಿದೆ.

## ಮೈಸೂರಲ್ಲಿ ವಾಡಿಕೆ ಮಳೆ ಪ್ರಮಾಣದಲ್ಲಿ ಕುಸಿತ



ಮೈಸೂರು, ಜು.18(ಎಂಕೆ)– ರಾಜ್ಯದ ಕೆಲವೆಡೆ ಅಬ್ಬರದ ಮಳೆಯಾಗುತ್ತಿದ್ದರೆ, ಹಳೇ ಮೈಸೂರು ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಮಳೆಯಾಗಿದೆ.

ಮೈಸೂರು ಜಿಲ್ಲೆಯಲ್ಲಿ ವಾಡಿಕೆ ಮಳೆಗಿಂತ ಶೇ.13ರಷ್ಟು ಕೊರತೆಯಾದರೆ (ಜನವರಿಯಿಂದ ಜು.18ರವರೆಗೆ), ಮಂಡ್ಯ ಶೇ.5ರಷ್ಟು, ಹಾಸನ ಶೇ.33 ರಷ್ಟು, ಚಾಮರಾಜನಗರ ಶೇ.1ರಷ್ಟು, ಕೊಡಗು ಜಿಲ್ಲೆಯಲ್ಲಿ ಶೇ.54ರಷ್ಟು ಮಳೆ ಕೊರತೆಯಾಗಿದೆ.

ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನಲ್ಲಿ ಮಾತ್ರವೇ ವಾಡಿಕೆಗಿಂತ ಶೇ.7ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಮಳೆಯಾಗಿದ್ದು, ಉಳಿದ ಎಲ್ಲಾ ತಾಲೂಕುಗಳಲ್ಲಿಯೂ ವಾಡಿಕೆಗಿಂತ ಕಡಿಮೆ ಪ್ರಮಾಣದಲ್ಲಿ ಮಳೆ ಬಿದ್ದಿದೆ. ಪಿರಿಯಾಪಟ್ಟಣ ತಾಲೂಕಿನಲ್ಲಿ ಶೇ.30ರಷ್ಟು, ಸರಗೂರು ಮತ್ತು ಹುಣಸೂರು ತಾಲೂಕಿನಲ್ಲಿ ಶೇ.17ರಷ್ಟು, ಮೈಸೂರು ತಾಲೂಕು ಶೇ.12 ರಷ್ಟು, ಕೆ.ಆರ್.ನಗರ ತಾಲೂಕು ಶೇ.11 ರಷ್ಟು ಹಾಗೂ ಟಿ.ನರಸೀಪುರ ತಾಲೂಕಿನಲ್ಲಿ ಶೇ.9ರಷ್ಟು ಮಳೆ ಕೊರತೆಯಾಗಿದೆ. ಹೆಚ್.ಡಿ.ಕೋಟೆ ತಾಲೂಕಿನಲ್ಲಿಯೂ ವಾಡಿಕೆಯಷ್ಟೇ ಮಳೆಯಾಗಿದೆ.

**ಮಲೆನಾಡು ಪ್ರದೇಶದಲ್ಲಿ ಕೊರತೆ:** ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳುವ ಮಲೆನಾಡು ಪ್ರದೇಶದಲ್ಲಿ ಈ ವರ್ಷ ಇದುವರೆಗೆ ಬಿದ್ದಿರುವ ಮಳೆ ಪ್ರಮಾಣ ವಾಡಿಕೆ ಮಳೆಗಿಂತ ಕಡಿಮೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಶೇ.48ರಷ್ಟು ಮಳೆ ಕೊರತೆಯಾದರೆ, ಹಾಸನ ಶೇ.33ರಷ್ಟು, ಚಿಕ್ಕಮಗಳೂರು ಶೇ.50ರಷ್ಟು ಹಾಗೂ ಕೊಡಗು ಜಿಲ್ಲೆಯಲ್ಲಿ ಶೇ.54ರಷ್ಟು ಮಳೆ ಕಡಿಮೆಯಾಗಿದೆ. ಹಾಗೆಯೇ ಕರಾವಳಿ ಭಾಗದಲ್ಲಿನ ದಕ್ಷಿಣ ಕನ್ನಡದಲ್ಲಿ ಶೇ.33ರಷ್ಟು, ಉಡುಪಿ ಶೇ.26 ರಷ್ಟು ಹಾಗೂ ಉತ್ತರ ಕನ್ನಡದಲ್ಲಿ ಶೇ.27 ರಷ್ಟು ಮಳೆ ಪ್ರಮಾಣ ಕಡಿಮೆಯಾಗಿದೆ.

**'ಹತ್ತಿ' ಬೆಳೆಗಾರರ ಸಂತಸ:** ಪೂರ್ವ ಮುಂಗಾರು ವೇಳೆ ಬಿತ್ತನೆಯಾಗುವ 'ಹತ್ತಿ' ಈ ಬಾರಿ ಉತ್ತಮವಾಗಿ ಬೆಳೆದು ನಿಂತಿದೆ. 'ಹತ್ತಿ' ಬೆಳೆಗೆ ಅಗತ್ಯ ಪ್ರಮಾಣದಷ್ಟು ಮಳೆಯಾಗಿರುವ ಹಿನ್ನೆಲೆಯಲ್ಲಿ ಹತ್ತಿ ಬೆಳೆಗಾರರಲ್ಲಿ ಸಂತಸ ಮೂಡಿದ್ದು, ಉಳಿದ ಬೆಳೆಗಳು ನೀರಿಲ್ಲದೆ ಒಣಗುವಂತಾಗಿದೆ. ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾದರಷ್ಟೇ ಜೋಳ, ಭತ್ತ, ಕಾಳುಗಳನ್ನು ಬೆಳೆಯಲು ಸಾಧ್ಯ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಮೈಸೂರಿನಲ್ಲಿ ಜುಲೈ 21ರಿಂದ ದ ಜ್ಯುವೆಲರಿ ಶೋ ಆರಂಭ

ಮೈಸೂರು, ಜು.18(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಜುಲೈ 21ರಿಂದ ಮೂರು ದಿನಗಳ ಕಾಲ ವಿನೂತನ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳ 'ದಿ ಜ್ಯುವೆಲರಿ ಶೋ' ಆಯೋಜಿಸಲಾಗಿದೆ.



ದೇಶದ 20 ಅಗ್ರ ಶ್ರೇಣಿಯ ಆಭರಣ ತಯಾರಕರು ಭಾಗವಹಿಸುತ್ತಿರುವ ದ ಜ್ಯುವೆಲರಿ ಶೋ ಜುಲೈ 21ರಿಂದ ಮೂರು ದಿನಗಳ ಕಾಲ ನಡೆಯಲಿದೆ.

ಮೈಸೂರಿನ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಜುಲೈ 21ರಂದು ಮಧ್ಯಾಹ್ನ 12.30 ಗಂಟೆಗೆ ಚಿತ್ರನಟಿ ನಿಶ್ವಿಕಾ ನಾಯ್ಡು ಅವರು 'ದ ಜ್ಯುವೆಲರಿ ಶೋ' ಉದ್ಘಾಟನೆ ಮಾಡಲಿದ್ದಾರೆ.

ಪ್ರಶಸ್ತಿ ವಿಜೇತ ಹೆಸರಾಂತ ಆಭರಣ ಮಳಿಗೆಯವರು ಭಾಗವಹಿಸುತ್ತಿರುವ ಈ ಮೇಳವನ್ನು ಕ್ರೇಪರ್ ಸಂಸ್ಥೆಯ ಬಿ.ಎನ್. ಜಗದೀಶ್ ಹಾಗೂ ಹೇಮಲತಾ ಜಗದೀಶ್ ಆಯೋಜಿಸಿದ್ದಾರೆ. ಮೇಳದಲ್ಲಿ ಭಾಗವಹಿಸುವ ಒಬ್ಬ ಅದೃಷ್ಟವಂತರಿಗೆ ಒಂದು ಡೈಮಂಡ್ ರಿಂಗ್ ಅನ್ನು ಬಹುಮಾನವಾಗಿ ನೀಡಲಾಗುವುದು. ಎಲ್ಲಾ ಚಿನ್ನದ ಆಭರಣಗಳು BIS ಹಾಲ್ ಮಾರ್ಕ್ ಹೊಂದಿರುತ್ತದೆ. ವಜ್ರಾಭರಣಗಳು ಅಂತರರಾಷ್ಟ್ರೀಯ ಗುಣಮಟ್ಟದ GIA/IGI ಪ್ರಮಾಣಿತ ಹೊಂದಿರುತ್ತದೆ.

# ಮೂರು ಜ್ಯೋತಿ ಯೋಜನೆಯೂ ಗೃಹಜ್ಯೋತಿಯಲ್ಲಿ ವಿಲೀನ

ಬೆಂಗಳೂರು, ಜು.18(ಕೆಎಂಶಿ)– ರಾಜ್ಯದ ಅರ್ಧ ಕೋಟಿ ಕುಟುಂಬಗಳಿಗೆ ರಾಜ್ಯ ಸರ್ಕಾರ ಭರ್ಜರಿ ಗಿಫ್ಟ್ ನೀಡಿದೆ. ಈ ಹಿಂದೆ ಜಾರಿಯಲ್ಲಿದ್ದ ಮೂರು ಜ್ಯೋತಿ ಯೋಜನೆಗಳನ್ನು ಗೃಹ ಜ್ಯೋತಿ ಯೋಜನೆಯಲ್ಲಿ ವಿಲೀನ ಮಾಡಿದೆ. ಇದರೊಂದಿಗೆ 50 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ಗೃಹಜ್ಯೋತಿಯ ಲಾಭ ದಕ್ಕಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದ ಮೇಲೆ ಕೊಟ್ಟ ಮಾತಿನಂತೆ ಗೃಹಜ್ಯೋತಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಗೃಹಜ್ಯೋತಿ ಯೋಜನೆ ಅಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತ ನೀಡಲಾಗುತ್ತಿದೆ. ಜುಲೈ 1ರಿಂದಲೇ ಈ ಯೋಜನೆ ಜಾರಿಗೆ ಬಂದಿದೆ. ಆದರೆ ಈಗಾಗಲೇ ಜಾರಿಯಲ್ಲಿರುವ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ಅಮೃತ ಜ್ಯೋತಿ ಯೋಜನೆಗಳ ಭವಿಷ್ಯ ವೇನು. ಇದರ ಫಲಾನುಭವಿಗಳಿಗೆ ಏನಾಗುತ್ತೆ ಎನ್ನುವ ಗೊಂದಲಕ್ಕೆ ತೆರೆ ಎಳೆಯಲಾಗಿದೆ. ಇದೀಗ ಇಂಧನ ಸಚಿವ ಕೆ.ಜೆ. ಜಾರ್ಜ್ ವಿಶೇಷ ಕಾಳಜಿ ವಹಿಸಿ ಹೊಸ ಮಾರ್ಗಸೂಚಿಯನ್ನು ಹೊರಡಿಸುವ ಮೂಲಕ ಈ ಎಲ್ಲಾ ಫಲಾನುಭವಿಗಳಿಗೆ ಖುಷಿ ಸುದ್ದಿ ಕೊಟ್ಟಿದ್ದಾರೆ.

## 50 ಲಕ್ಷ ಕುಟುಂಬಕ್ಕೆ ಗೃಹಜ್ಯೋತಿ ಲಾಭ



ಭಾಗ್ಯ ಜ್ಯೋತಿ ಕುಟುಂಬ ಜ್ಯೋತಿಗೆ ಈವರೆಗೆ 40 ಯೂನಿಟ್ ಉಚಿತವಿತ್ತು. ಈಗ ಅದನ್ನು 53 ಯೂನಿಟ್ ಹಾಗೂ ಶೇ.10ರಷ್ಟು ಹೆಚ್ಚುವರಿ ಉಚಿತ ವಿದ್ಯುತ್ ನೀಡುವುದಾಗಿ ಘೋಷಿಸಿದೆ. ಹಾಗೆಯೇ ಅಮೃತ ಜ್ಯೋತಿಗೆ 75 ಯೂನಿಟ್ ಇತ್ತು. ಈಗ ಅದನ್ನು 75 ಯೂನಿಟ್ ಜತೆಗೆ ಶೇ.10 ಹೆಚ್ಚಿಸಿದ್ದಾರೆ. ಈಗ ಎಲ್ಲರೂ ಗೃಹಜ್ಯೋತಿ ವ್ಯಾಪ್ತಿಗೆ ಬರುತ್ತಾರೆ. ಅವರಿಗೆ ಹೆಚ್ಚುವರಿ ಯೂನಿಟ್‌ಗಳನ್ನು ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ಮೂರು ಜ್ಯೋತಿಗಳ ಫಲಾನುಭವಿಗಳಲ್ಲಿ ಇದ್ದಂತಹ ಗೊಂದಲವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ನಿವಾರಿಸುವಲ್ಲಿ ಯಶಸ್ವಿಯಾಗಿದ್ದಾರೆ ಸರ್ಕಾರ ಬಡ ಕುಟುಂಬಗಳ ನೆರವಿಗೆ ನಿಂತಿದೆ. ಸರ್ಕಾರದ ಈ ಹೊಸ ನಿರ್ಧಾರದಿಂದಾಗಿ ರಾಜ್ಯದ ಅರ್ಧ ಕೋಟಿ ಕುಟುಂಬಗಳಿಗೆ ಇದರಿಂದ ನೇರ ಲಾಭ ಸಿಗಲಿದೆ.

# ಜಯಚಾಮರಾಜ ಒಡೆಯರ್ ಜಯಂತಿ



ಮೈಸೂರು,ಜು.18(ಪಿಎಂ)– ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ವತಿಯಿಂದ ಮೈಸೂರು ಸಂಸ್ಥಾನದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರ 104ನೇ ಜಯಂತಿಯನ್ನು ಮಂಗಳವಾರ ಆಚರಿಸಲಾಯಿತು.

ಮೈಸೂರಿನ ಶಿವರಾಂಪೇಟೆಯ ಮಹಾಸಭಾದ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಜಯಚಾಮರಾಜ ಒಡೆಯರ್ ಚಿತ್ರಪಟಕ್ಕೆ ಚಿಂತಕ ಡಾ.ಕೆ.ರಘುರಾಮ್ ವಾಜಪೇಯಿ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಯದುವಂಶದ ಅರಸರಾಗಿದ್ದ ಜಯಚಾಮರಾಜ ಒಡೆಯರ್ ಅತ್ಯಂತ ಶ್ರೇಷ್ಠ ವ್ಯಕ್ತಿತ್ವ ಹೊಂದಿದ್ದರು. ಪ್ರಜೆಗಳ ಯೋಗಕ್ಷೇಮದ ಬಗ್ಗೆ ಅಪಾರ ಕಳಕಳಿ ಹೊಂದಿದ್ದ ಪ್ರಜಾವಾತ್ಸಲ್ಯದ ಮಹಾರಾಜರಾಗಿದ್ದರು. ಕಲೆ, ಸಂಸ್ಕೃತಿ ಮತ್ತು ಶಿಕ್ಷಣ ಪ್ರೇಮಿಗಳಾಗಿದ್ದ ಅವರು ಈ ಕ್ಷೇತ್ರಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಸ್ವಾತಂತ್ರ್ಯ ನಂತರದಲ್ಲಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಆಶಯದಂತೆ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟ ವ್ಯವಸ್ಥೆಗೆ ವಿಲೀನಗೊಳಿಸಿದರು ಎಂದು ಸ್ಮರಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಮಾತನಾಡಿ, ಸ್ವಾತಂತ್ರ್ಯಪೂರ್ವದ ಅಂದಿನ ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣದ ಭಾಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಜಯಚಾಮರಾಜ ಒಡೆಯರ್ ಪಂಚವಾರ್ಷಿಕ ಯೋಜನೆ ಜಾರಿಗೊಳಿಸಿದರು. ಸಂಗೀತ ಪ್ರೇಮಿಯಾಗಿದ್ದ ಅವರು ತಮ್ಮ ಆಸ್ಥಾನದಲ್ಲಿ ಸಂಗೀತ ವಿದ್ವಾಂಸರಿಗೆ ಆಶ್ರಯದಾತರಾಗಿದ್ದರು ಎಂದು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಕೆಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮುಖಂಡರಾದ ಮಾ.ವೆಂಕಟೇಶ್, ಅಜಯ್ ಶಾಸ್ತ್ರಿ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ರಾಮಕೃಷ್ಣ, ಮಹಾಸಭಾದ ಅಧ್ಯಕ್ಷ ಎನ್.ಬೆಟ್ಟೇಗೌಡ, ಗೌರವ ಸಲಹೆಗಾರ ಕೆ.ಬಿ.ಲಿಂಗರಾಜು, ಕೋಶಾಧ್ಯಕ್ಷ ಎಂ.ಎನ್. ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

# ಕಾವಾ, ಜಾಣ, ರತ್ನ ಪರೀಕ್ಷೆಗಳಿಗೆ ಅರ್ಜಿ

ಮೈಸೂರು,ಜು.18– ಕನ್ನಡ ಸಾಹಿತ್ಯ ಪರಿಷತ್ತು 2023–24ನೇ ಸಾಲಿನ ಕನ್ನಡ ಪ್ರವೇಶ, ಕಾವಾ, ಜಾಣ ಹಾಗೂ ರತ್ನ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದ್ದು, ಆಗಸ್ಟ್ 31 ಅರ್ಜಿ ಸಲ್ಲಿಸಲು ಕೊನೆಯ ದಿನ. ಸೆಪ್ಟೆಂಬರ್ 15ರವರೆಗೆ ದಂಡ ಶುಲ್ಕ ರೂ.50 ಅನ್ನು ಹೆಚ್ಚುವರಿಯಾಗಿ ನೀಡಿ ಅರ್ಜಿ ಸಲ್ಲಿಸಬಹುದು. ಪರೀಕ್ಷಾ ಅರ್ಜಿಯನ್ನು 25 ರೂ. ಗಳ ಶುಲ್ಕ ಪಾವತಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾರಾಟ ಮಳಿಗೆಯಲ್ಲಿ (ಬೆಂಗಳೂರು) ಪಡೆಯಬಹುದಾಗಿದ್ದು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ಹೆಸರಿಗೆ ರೂ.30 ಅನ್ನು ಮನಿಯಾರ್ಡರ್ ಮಾಡಿದರೆ ತಾವು ನೀಡಿರುವ ವಿಳಾಸಕ್ಕೆ ಅಂಚೆ ಮೂಲಕ ಅರ್ಜಿ ಕಳುಹಿಸಲಾಗುವುದು. ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕ ಪಡೆಯಬಹುದಾಗಿದ್ದು, ಪರೀಕ್ಷಾ ಶುಲ್ಕದೊಂದಿಗೆ ಅರ್ಜಿ ಶುಲ್ಕ ರೂ 25.ಗಳನ್ನು ಪ್ರತ್ಯೇಕವಾಗಿ ಪಾವತಿಸಬೇಕು. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರಿನ ಚಾಮರಾಜ ಪೇಟೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಅಥವಾ ದೂ.ಸಂ. 080–26612991 ಅನ್ನು ಸಂಪರ್ಕಿಸಬಹುದು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಡಾ.ಪದ್ಮಿನಿ ನಾಗರಾಜು ಪ್ರಕಟಣೆಯಲ್ಲಿ ತಿಳಿಸುತ್ತಾರೆ.

# ಬೈಕ್ ಡಿಕ್ಕಿ: ಸೈಕಲ್ ಸವಾರ ಸಾವು

ಮೈಸೂರು,ಜು.18(ಆರ್‌ಕೆ)– ಬೈಕೊಂದು ಸೈಕಲ್‌ಗೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ವಾಜಮಂಗಲ ಬಳಿ ಬನ್ನೂರು ರಸ್ತೆಯಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದೆ. ಶ್ರೀರಂಗಪಟ್ಟಣ ತಾಲೂಕು, ಉರುಳಿ ಕ್ಯಾತನಹಳ್ಳಿ ಗ್ರಾಮದ ಸಿದ್ದಯ್ಯ(64) ಸಾವನ್ನಪ್ಪಿದವರು. ಕೂಲಿ ಕಾರ್ಮಿಕನಾದ ಅವರು, ಸೈಕಲ್‌ನಲ್ಲಿ ವಾಜಮಂಗಲ ಕಡೆಗೆ ಹೋಗುತ್ತಿದ್ದಾಗ ಬನ್ನೂರು ಕಡೆಯಿಂದ ಬಂದ ಬೈಕ್ ಬೆಳಗ್ಗೆ ಸುಮಾರು 8.30 ಗಂಟೆ ವೇಳೆ ಹಿಂದಿನಿಂದ ಡಿಕ್ಕಿ ಹೊಡೆಯಿತು.

ನೆಲಕ್ಕೆ ಬಿದ್ದ ಪರಿಣಾಮ ತಲೆಗೆ ತೀವ್ರ ಗಾಯಗಳಾಗಿ ಸಿದ್ದಯ್ಯ ಸ್ಥಳದಲ್ಲೇ ಮೃತಪಟ್ಟರು ಎಂದು ಪ್ರಕರಣ ದಾಖಲಿಸಿಕೊಂಡಿರುವ ವರುಣಾ ಠಾಣೆ ಪೊಲೀಸರು ತಿಳಿಸಿದ್ದಾರೆ. ಡಿಕ್ಕಿ ಹೊಡೆದ ಬೈಕ್ ಸವಾರ ಇಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿ ಎಂದು ತಿಳಿದುಬಂದಿದ್ದು, ಆತನಿಗೂ ಗಾಯಗಳಾಗಿ ಮೈಸೂರಿನ ಆಸ್ಪತ್ರೆಯೊಂದರಲ್ಲಿ ದಾಖಲಾಗಿದ್ದಾನೆಂದು ತಿಳಿದುಬಂದಿದೆ ಎಂದು ಸಬ್ ಇನ್ಸ್‌ಪೆಕ್ಟರ್ ಚೇತನ್ ತಿಳಿಸಿದ್ದಾರೆ.

### ಮಂಡ್ಯ ನಗರದಲ್ಲಿ ರೈಲ್ವೆ ಕೆಳಸೇತುವೆ ಕಾಮಗಾರಿ ಹಿನ್ನೆಲೆ

# ಮೈಸೂರು–ಬೆಂಗಳೂರು ಮುಂಜಾನೆ ರೈಲುಗಳು 2 ಗಂಟೆ ತಡವಾಗಿ ಸಂಚಾರ

### ಮಕ್ಕಳು, ವೃದ್ಧರು, ರೋಗಿಗಳಿಗೆ ತೀವ್ರ ತೊಂದರೆ





ಮೈಸೂರು, ಜು. 18(ಆರ್‌ಕೆ)– ಮಂಡ್ಯ ನಗರದ ಮಹಾವೀರ ಸರ್ಕಲ್ ಸಮೀಪದ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್–73 ಬಳಿ ಅಂಡರ್‌ಬ್ರಿಡ್ಜ್ ಕಾಮಗಾರಿ ನಡೆಯುತ್ತಿರುವುದರಿಂದ ಪ್ರಯಾಣಿಕರ ಸುರಕ್ಷತೆಗಾಗಿ ಮೈಸೂರು–ಬೆಂಗಳೂರು ನಡುವಿನ ಮುಂಜಾನೆ ರೈಲುಗಳ ಸಂಚಾರ ಎರಡು ಗಂಟೆ ತಡವಾಯಿತು.

"ಸುರಕ್ಷತೆ ಮೊದಲು–ಸಮಯ ಪಾಲನೆ ನಂತರ" (Safety First-Punctuality Next) ಧ್ಯೇಯ ಹೊಂದಿರುವ ಭಾರತೀಯ ರೈಲ್ವೆ ಮಂಡಳಿಯು, ಮಂಡ್ಯ ನಗರದಲ್ಲಿ ನಡೆಯುತ್ತಿರುವ ರೈಲ್ವೆ ಅಂಡರ್ ಬ್ರಿಡ್ಜ್ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಪ್ರಯಾಣಿಕರ ಸುರಕ್ಷತೆಗಾಗಿ ಎಚ್ಚರಿಕೆಯ ಆದೇಶ ಹೊರಡಿಸಿ ಮಂಗಳವಾರ ಮುಂಜಾನೆಯ ರೈಲುಗಳ ಸಂಚಾರವನ್ನು ಎರಡು ಗಂಟೆ ಸ್ಥಗಿತಗೊಳಿಸಲಾಗಿತ್ತು.

ಮೈಸೂರಿನಿಂದ ಬೆಂಗಳೂರಿಗೆ ಮುಂಜಾನೆ ಹೊರಟಿದ್ದ ಮೂರು ರೈಲುಗಳು ನಾಗನಹಳ್ಳಿ, ಶ್ರೀರಂಗಪಟ್ಟಣ ಹಾಗೂ ಮಂಡ್ಯ ರೈಲು ನಿಲ್ದಾಣದಲ್ಲಿ ಎರಡು ಗಂಟೆ ಕಾಲ ನಿಂತಿದ್ದವು. ಪರಿಣಾಮ ರೈಲುಗಳಲ್ಲಿದ್ದ ಪ್ರಯಾಣಿಕರ ಪೈಕಿ ಮಕ್ಕಳು, ವೃದ್ಧರು ಹಾಗೂ ರೋಗಿಗಳು ಪರದಾಡುವಂತಾಯಿತು. ಸರ್ಕಾರಿ ಕಚೇರಿಗಳು, ಖಾಸಗಿ ಕಂಪನಿಗಳು, ಉದ್ದಿಮೆಗಳು, ಶಾಲಾ–ಕಾಲೇಜುಗಳು, ಆಸ್ಪತ್ರೆಗಳಿಗೆ ಹೋಗುವವರಿಗಂತೂ ರೈಲುಗಳು ಮಾರ್ಗ ಮಧ್ಯೆ ನಿಂತು, ತಡವಾಗಿ ಪ್ರಯಾಣ ಮುಂದುವರಿಸಿದ್ದರಿಂದಾಗಿ ತೀವ್ರ ತೊಂದರೆಯಾಗಿ ರೈಲ್ವೆ ಇಲಾಖೆಗೆ ಹಿಡಿಶಾಪ ಹಾಕುತ್ತಿದ್ದರು.

ಪ್ರಗತಿಯಲ್ಲಿರುವ ಕೆಳಸೇತುವೆ ಕಾಮಗಾರಿಯನ್ನು ಮುಂಜಾನೆ 5.30 ಗಂಟೆಗೆ ಸ್ಥಗಿತಗೊಳಿಸುವಂತೆ ಸೂಚನೆ ನೀಡಲಾಗಿತ್ತಾದರೂ, ಅನಿವಾರ್ಯ ಕಾರಣವಾಗಿ ಮುಂದುವರೆಸಲಾಗಿತ್ತು. ಅದರಿಂದಾಗಿ ಮೈಸೂರಿನಿಂದ ಮುಂಜಾನೆ ಹೊರಟಿದ್ದ ರೈಲುಗಳನ್ನು ಮಾರ್ಗಮಧ್ಯೆ ರೈಲ್ವೆ ಸ್ಟೇಷನ್‌ಗಳಲ್ಲಿ ನಿಲ್ಲುವಂತೆ ಸೂಚನೆ ನೀಡಿದ ಕಾರಣ ನಾಗನಹಳ್ಳಿ, ಶ್ರೀರಂಗಪಟ್ಟಣ ಮತ್ತು ಮಂಡ್ಯ ರೈಲು ನಿಲ್ದಾಣದಲ್ಲಿ ಒಂದೊಂದು ರೈಲು ನಿಂತಿದ್ದವು. ಮೈಸೂರಿನಿಂದ ಮುಂಜಾನೆ 5.30 ಗಂಟೆಗೆ ಹೊರಟಿದ್ದ ವಿಶ್ವಮಾನವ ಎಕ್ಸ್‌ಪ್ರೆಸ್ ಮಂಡ್ಯ ರೈಲು ನಿಲ್ದಾಣದಲ್ಲಿ, ಬೆಳಗ್ಗೆ 6.10 ಗಂಟೆಗೆ ಹೊರಟಿದ್ದ ಪ್ಯಾಸೆಂಜರ್ ರೈಲು ಶ್ರೀರಂಗಪಟ್ಟಣದಲ್ಲಿ ಹಾಗೂ ಬೆಳಗ್ಗೆ 6.45 ಗಂಟೆಗೆ ಹೊರಟಿದ್ದ ಚಾಮುಂಡಿ ಎಕ್ಸ್‌ಪ್ರೆಸ್ ರೈಲು ನಾಗನಹಳ್ಳಿ ರೈಲು ನಿಲ್ದಾಣದಲ್ಲಿ ಗಂಟೆಗಟ್ಟಲೆ ನಿಂತಿದ್ದವು.

ಈ ವೇಳೆ ತಡವಾದ ಕಾರಣ ತುರ್ತು ಕೆಲಸದ ಮೇಲೆ ಬೆಂಗಳೂರಿಗೆ ಹೋಗಬೇಕಾಗಿದ್ದ ಪ್ರಯಾಣಿಕರು ರೈಲ್ವೆ ಇಲಾಖೆ ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದು, ಮಂಡ್ಯ ರೈಲು ನಿಲ್ದಾಣದಲ್ಲಿ ನಿಂತಿದ್ದ ರೈಲಿನಲ್ಲಿ ಕೆಲವರು ಇಳಿದು ಬಸ್ಸುಗಳಲ್ಲಿ ತೆರಳಿದರು. ಅತ್ತ ಚೆನ್ನೈನಿಂದ ಮೈಸೂರಿಗೆ ಬರಬೇಕಿದ್ದ ಕಾವೇರಿ ಎಕ್ಸ್‌ಪ್ರೆಸ್ ರೈಲು ಪಾಂಡವಪುರ ನಿಲ್ದಾಣದಲ್ಲಿ ನಿಲ್ಲುವಂತಾಯಿತು. ಮಂಡ್ಯದಲ್ಲಿ ಕಾಮಗಾರಿ ನಿಲ್ಲಿಸಿದ ಬಳಿಕ ಬೆಳಗ್ಗೆ 9.15 ಗಂಟೆಗೆ ಹಂತ ಹಂತವಾಗಿ ರೈಲುಗಳು ಮುಂದೆ ಸಾಗಿದವು.

ಅದರಿಂದಾಗಿ ಬೆಂಗಳೂರಿನ ಮಾರ್ತಹಳ್ಳಿ ಬಳಿ ಇರುವ ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಬೆಳಗ್ಗೆ 10.15 ಗಂಟೆಗೆ ಚಿಕಿತ್ಸೆ ಪಡೆಯಲು ಸಮಯ ನಿಗದಿಯಾಗಿದ್ದ ಮೈಸೂರಿನ ಎನ್‌ಆರ್ ಮೊಹಲ್ಲಾ ನಿವಾಸಿಗಳಾದ ಎಲಿಜಬೆತ್ ರಾಣಿ ಮತ್ತು ಸಹೋದರ ಹೆನ್ರಿ ಮೋಸೆಸ್ (ಅಕ್ಕ–ತಮ್ಮ ಇಬ್ಬರೂ ಅಂಧರು)ರನ್ನು ಚಿಕಿತ್ಸೆಗೆಂದು ಕರೆದೊಯ್ಯುತ್ತಿದ್ದ ಚಿಕ್ಕಮ್ಮ ಮೇರಿ ಅವರು ನಾಗನಹಳ್ಳಿಯಲ್ಲಿ ರೈಲು ನಿಂತ ಕಾರಣ ತೀವ್ರ ತೊಂದರೆಗೀಡಾದರು. ತಡವಾಗಿ ಆಸ್ಪತ್ರೆಗೆ ತಲುಪಿದ್ದರಿಂದ ಅವರ ಟೋಕನ್ ನಂಬರ್ ಪಾಸಾಗಿತ್ತು. ಕಾರಣ ಹೇಳಿದರಾದರೂ, ಅವರಿಗೆ ಮಧ್ಯಾಹ್ನದ ನಂತರವೇ ತಪಾಸಣೆ ಮತ್ತು ಚಿಕಿತ್ಸೆಗೆ ಅವಕಾಶವಾಗಿ, ಈ ಮೂವರೂ ಮೈಸೂರು ತಲುಪಲು ತಡರಾತ್ರಿಯಾಯಿತು.

ಇದೇ ರೀತಿ ಹಲವು ಪ್ರಯಾಣಿಕರಿಗೆ ಅದರಲ್ಲೂ ಹಿರಿಯ ನಾಗರಿಕರು, ರೋಗಿಗಳು, ಮಕ್ಕಳೊಂದಿಗೆ ಬಂದಿದ್ದವರಿಗೆ ತೀವ್ರ ತೊಂದರೆಯಾಗಿ ಪರದಾಡುವಂತಾಯಿತು. ರೈಲ್ವೆ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಾ ಪ್ರಯಾಣಿಕರು ತಮ್ಮ ತಮ್ಮ ಸ್ಥಳಗಳಿಗೆ ತಲುಪಿದರು.

# ಜು.21, ಜಪಾನ್‌ನಲ್ಲಿ ಪ್ರೊ.ಕೆ.ಎಸ್.ರಂಗಪ್ಪ ಉಪನ್ಯಾಸ



ಮೈಸೂರು,ಜು.18 (ಬಿಎಲ್‌ಯು) –ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಅವರು ಜಪಾನ್‌ನಲ್ಲಿ ಜುಲೈ 21ರಂದು ನಡೆಯುವ ಸೆಮಿನಾರ್‌ನಲ್ಲಿ ಆಲ್ಝೈಮರ್ ಅಥವಾ ಮನುಷ್ಯನ ನೆನಪಿನ ಶಕ್ತಿ ಕುಗ್ಗುವ ಖಾಯಿಲೆ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ಜಪಾನ್‌ನ ಹೊಕ್ಕೈಡೋ ವಿಶ್ವವಿದ್ಯಾನಿಲಯದ ಪಬ್ಲಿಕ್ ಲೆಕ್ಚರ್ಸ್ ಕಮಿಟಿ ಹಾಗೂ ಫ್ಯಾಕಲ್ಟಿ ಹೆಲ್ತ್ ಸೈನ್ಸ್ ವಿಭಾಗ ಆಯೋಜಿಸಿರುವ 2ನೇ ಹೆಲ್ತ್ ಸೈನ್ಸ್ ಸೆಮಿನಾರ್‌ನಲ್ಲಿ ಪ್ರೊ.ರಂಗಪ್ಪ ಅವರು ಆಲ್ಝೈಮರ್ ಖಾಯಿಲೆ ಹಾಗೂ ಕ್ಯಾನ್ಸರ್ ವೃದ್ಧಾಪ್ಯದ ರೋಗಗಳು ಹಾಗೂ ಪರಿಹಾರಗಳ ಕುರಿತು ಉಪನ್ಯಾಸ ನೀಡುವರು.

ಆಲ್ಝೈಮರ್ ಖಾಯಿಲೆ ಹಾಗೂ ಕ್ಯಾನ್ಸರ್ ಔಷಧದ ಬಗ್ಗೆ ಬಹಳಷ್ಟು ಸಂಶೋಧನೆ ನಡೆಸಿರುವ ಪ್ರೊ. ಕೆ.ಎಸ್.ರಂಗಪ್ಪ ಅವರು, ಈ ಖಾಯಿಲೆಯ ಔಷಧ ಸಂಶೋಧನೆಯಲ್ಲಿ ರಸಾಯನಶಾಸ್ತ್ರದ ಪಾತ್ರವನ್ನು ಕೇಂದ್ರೀಕರಿಸಿ ಹಲವು ವಿಚಾರಗಳನ್ನು ಉಪನ್ಯಾಸದಲ್ಲಿ ಮಂಡಿಸಲಿದ್ದಾರೆ. ಜೊತೆಗೆ ವಿದ್ಯಾರ್ಥಿಗಳ ಜೊತೆ ಸಂವಾದ ಕೂಡ ನಡೆಸಲಿದ್ದಾರೆ.

ಇತ್ತೀಚೆಗೆ ಮನುಷ್ಯನಲ್ಲಿ ನೆನಪಿನ ಶಕ್ತಿ ಕುಗ್ಗುತ್ತಿದೆ. ಕಿರಿಯ ವಯಸ್ಸಿನ ಜನರಿಗೆ ಈ ಖಾಯಿಲೆ ಬರುತ್ತಿದೆ. ಇನ್ನು ಕ್ಯಾನ್ಸರ್‌ನಿಂದ ಬಹಳಷ್ಟು ಸಾವು ನೋವುಗಳು ಸಂಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ಖಾಯಿಲೆಯಿಂದ ಪಾರಾಗಲು ಸಂಭವನೀಯ ಚಿಕಿತ್ಸೆ ಸೇರಿದಂತೆ ಹಲವು ವಿಚಾರಗಳ ಬಗ್ಗೆ ಪ್ರೊ. ರಂಗಪ್ಪ ಉಪನ್ಯಾಸ ನೀಡಲಿದ್ದಾರೆ.

### ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಅತಿವೇಗದ ವಾಹನ ಚಾಲಕರ ಮೇಲೆ ದಂಡಾಸ್ತ್ರ ಪ್ರಯೋಗ

# ಮೂರೇ ದಿನದಲ್ಲಿ ಲಕ್ಷ ರೂಪಾಯಿ ದಂಡ ವಸೂಲಿ

ಮೈಸೂರು,ಜು.18(ಬಿಎಲ್‌ಯು)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ವೇಗದ ಮಿತಿ ಉಲ್ಲಂಘಿಸಿ ವಾಹನ ಚಾಲನೆ ಮಾಡಿದ ಚಾಲಕರಿಗೆ ಪೊಲೀಸರು ಈಗ ದಂಡಾಸ್ತ್ರ ಪ್ರಯೋಗ ಮಾಡಿದ್ದಾರೆ. ಕಳೆದ ಮೂರು ದಿನಗಳ ಕಾರ್ಯಾಚರಣೆಯಲ್ಲಿ ಸುಮಾರು ಒಂದು ಲಕ್ಷ ರೂಪಾಯಿ ದಂಡ ವಿಧಿಸಿದ್ದಾರೆ.



ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಬಹಳಷ್ಟು ವಾಹನ ಸವಾರರು ಅತೀ ವೇಗದಲ್ಲಿ ವಾಹನ ಚಾಲನೆ ಮಾಡುತ್ತಿದ್ದಾರೆ. ಕೆಲವರಂತೂ ಸಣ್ಣ ಕಾರುಗಳಲ್ಲೆ 120 ಕಿಲೋ ಮೀಟರ್ ವೇಗದಲ್ಲಿ ಚಾಲನೆ ಮಾಡುತ್ತಿದ್ದಾರೆ. ಈ ಕಾರಣದಿಂದ ಈ ತನಕ ನೂರಾರು ಅಪಘಾತಗಳು ಸಂಭವಿಸಿದ್ದು, 150ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ.

ಈ ಹಿನ್ನೆಲೆ ಎಡಿಜಿಪಿ ಅಲೋಕ್‌ಕುಮಾರ್ ಅವರು ಕಳೆದ ವಾರ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಪರಿಶೀಲನೆ ನಡೆಸಿದರು. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಜಾಗೃತಿ ಹಾಗೂ ದಂಡ ವಿಧಿಸುವ ಕ್ರಮಕ್ಕೆ ಆದೇಶ ನೀಡಿದ್ದರು. ಅದರಂತೆ ಪೊಲೀಸರು ಅಪಘಾತ ತಡೆಗೆ ಸೂಚನಾ ಫಲಕ ಹಾಗೂ ಡಿಜಿಟಲ್ ಬೋರ್ಡ್‌ಗಳ ಮೂಲಕ ಅತಿವೇಗ ಚಾಲನೆ ಮಾಡದಂತೆ ಜಾಗೃತಿ ಮೂಡಿಸಿದ್ದರೂ ಬಹಳಷ್ಟು ವಾಹನ ಸವಾರರು ಅತಿವೇಗದ ಚಾಲನೆ ಮಾಡುತ್ತಿದ್ದು, ಅಪಘಾತಗಳು ಸಂಭವಿಸುತ್ತಿವೆ. ಈ ಹಿನ್ನೆಲೆಯಲ್ಲಿ ಅತೀ ವೇಗದ ವಾಹನ ಚಾಲನೆ ಮಾಡುವವರಿಗೆ ಒಂದು ಸಾವಿರ ರೂಪಾಯಿಗಳ ದಂಡವನ್ನು ಸ್ಥಳದಲ್ಲೇ ವಿಧಿಸಲಾಗಿದೆ. ಮದ್ದೂರು–ಮಂಡ್ಯ ನಡುವೆ ಇಂಟರ್‌ಸೆಪ್ಟರ್ ಕ್ಯಾಮರಾ ಮೂಲಕ ಅತಿ ವೇಗದ ವಾಹನಗಳನ್ನು ರೆಕಾರ್ಡ್ ಮಾಡಲಾಗುತ್ತಿದೆ. ಮುಂದೆ ಬ್ಯಾರಿಕೇಡ್‌ಗಳನ್ನು ಹಾಕಿ ವಾಹನಗಳನ್ನು ನಿಲ್ಲಿಸುವ ಪೊಲೀಸರು ಅತೀ ವೇಗದ ಚಾಲನೆ ಮಾಡುವ ವಾಹನ ಸವಾರರಿಗೆ ದಂಡ ವಿಧಿಸುತ್ತಿದ್ದಾರೆ. ಕಳೆದ ಮೂರು ದಿನದ ಅವಧಿಯಲ್ಲಿ ಒಂದು ಲಕ್ಷ ರೂಪಾಯಿ ದಂಡ ವಿಧಿಸಲಾಗಿದೆ. ಮಾಡಿದ ತಪ್ಪಿಗೆ ದಂಡ ಪಾವತಿಸಿದ ವಾಹನ ಸವಾರರು ಮುಂದೆ ನಿಧಾನವಾಗಿ ಹೋಗುತ್ತಿರುವುದು ಕಂಡುಬಂದಿದೆ.

ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇ ಒಂದು ಕಡೆ ಮಾತ್ರ ಈ ಕಾರ್ಯಾಚರಣೆ ನಡೆಯುತ್ತಿದೆ. ಮೂರ್ನಾಲ್ಕು ಹಂತದಲ್ಲಿ ಹೀಗೆ ದಂಡ ವಿಧಿಸಿದ ಪಕ್ಷದಲ್ಲಿ ಪ್ರಾಯಶಃ ವಾಹನ ಸವಾರರು ಅತೀವೇಗ ಕಡಿಮೆಯಾಗಿ ಅಪಘಾತಗಳ ಸಂಖ್ಯೆ ಕಡಿಮೆ ಆಗಬಹುದು.

# ಶಿಕ್ಷಣ ಇಲಾಖೆಯಲ್ಲಿ ಮರು ಪದನಾಮಕರಣ

ಮೈಸೂರು,ಜು.18(ಎಸ್‌ಪಿಎನ್)–ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರ ಕಚೇರಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಜಿಲ್ಲಾ ಹಂತದ ಉಪ ನಿರ್ದೇಶಕರ ಕಚೇರಿ ಮತ್ತು ಎಲ್ಲಾ ಪದವಿ ಪೂರ್ವ ಕಾಲೇಜುಗಳನ್ನು ಮರು ಪದನಾಮಕರಣಗೊಳಿಸಿ ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಧೀನದಲ್ಲಿ ಬರುವ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಹಾಗೂ ಪದವಿ ಪೂರ್ವ ಎಲ್ಲಾ ಪದವಿ ಪೂರ್ವ ಕಾಲೇಜುಗಳನ್ನು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ ಕಾಲೇಜು) ಎಂದು ಪದನಾಮೀಕರಿಸಿ ಜು.15ರಂದು ಆದೇಶಿಸಿದ್ದಾರೆ. ನೂತನ ಪದನಾಮವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಎಲ್ಲಾ ಕಚೇರಿ/ಪದವಿ ಪೂರ್ವ ಕಾಲೇಜುಗಳ ನಾಮಫಲಕಗಳಲ್ಲಿ (ಬೋರ್ಡ್) ಬರೆಸಲು ಈ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಹಾಗೂ ಎಲ್ಲಾ ಕಾಲೇಜು ಪ್ರಾಂಶುಪಾಲರಿಗೆ ಸೂಚಿಸಿ ಸುತ್ತೋಲೆ ಹೊರಡಿಸಿದ್ದಾರೆ.

# ಗೃಹಲಕ್ಷ್ಮಿ ಯೋಜನೆ ಜಾರಿಗೂ ಮುನ್ನವೇ ಚಿಕ್ಕಮಗಳೂರಿನಲ್ಲಿ ಅವ್ಯವಹಾರದ ಆರೋಪ

ಚಿಕ್ಕಮಗಳೂರು, ಜು.18– ಕರ್ನಾಟಕದಲ್ಲಿ 'ಗೃಹಲಕ್ಷ್ಮಿ' ಯೋಜನೆ ಜಾರಿಯಾಗುವ ಮುನ್ನವೇ ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ನಕಲಿ ಅರ್ಜಿಗಳು ಮಾರಾಟವಾಗುತ್ತಿವೆ. ಈ ಬಗ್ಗೆ ಯುವ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರಿಗೆ ದೂರು ನೀಡಿದ್ದು, ನಕಲಿ ನೋಂದಣಿ ಪತ್ರ ಮಾರಾಟ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ಒತ್ತಾಯಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಭಾವಚಿತ್ರವಿರುವ ನಕಲಿ ಅರ್ಜಿಗಳನ್ನು ಶೃಂಗೇರಿ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸೈಬರ್ ಸೆಂಟರ್‌ಗಳಲ್ಲಿ 100 ರೂ.ಗೆ ಮಾರಾಟ ಮಾಡಲಾಗುತ್ತಿದೆ.

ನಕಲಿ ಪತ್ರದಲ್ಲಿ ಫಲಾನುಭವಿಗಳ ಆಧಾರ್ ಸಂಖ್ಯೆ, ಬ್ಯಾಂಕ್ ಖಾತೆ ಸಂಖ್ಯೆ, ಪಡಿತರ ಚೀಟಿ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆಯ ವಿವರಗಳನ್ನು ಕೇಳಲಾಗಿದೆ. ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಶೃಂಗೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಘಟನೆ ಕುರಿತು ತನಿಖೆ ನಡೆಸುವಂತೆ ಕಾಂಗ್ರೆಸ್ ಕಾರ್ಯಕರ್ತರು ಶೃಂಗೇರಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದಾರೆ. ಜು.19ರಂದು ಸಂಜೆ 5 ಗಂಟೆಗೆ ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ 'ಗೃಹಲಕ್ಷ್ಮಿ' ಯೋಜನೆಗೆ ಚಾಲನೆ ನೀಡಲಿದ್ದಾರೆ. ಈ ಯೋಜನೆಗೆ ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ ಮತ್ತು ಫಲಾನುಭವಿಗಳಿಗೆ ನೋಂದಣಿ ದಿನಾಂಕ, ಸಮಯ ಮತ್ತು ಕೇಂದ್ರದ ಬಗ್ಗೆ ಅವರ ಮೊಬೈಲ್ ಸಂಖ್ಯೆಗಳಿಗೆ ಎಸ್‌ಎಂಎಸ್ ಕಳುಹಿಸಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.

ತಮ್ಮ ನೋಂದಣಿ ನೇಮಕಾತಿ ದಿನಾಂಕ ಮತ್ತು ಸಮಯವನ್ನು ತಿಳಿಯಲು ಇಚ್ಛಿಸುವ ಜನರು 81475 00500ಗೆ SMS ಕಳುಹಿಸಬಹುದು. ಯೋಜನೆಗೆ ಸಂಬಂಧಿಸಿದಂತೆ ಸಂದೇಹಗಳಿರುವ ಜನರು 1902ಗೆ ಕರೆ ಮಾಡಬಹುದು ಎಂದು ಸರ್ಕಾರ ತಿಳಿಸಿದೆ.

### ಮುಂಗಾರು ಅಧಿವೇಶನ

# ಇಂದು ಸರ್ವಪಕ್ಷ ಸಭೆ

**ನವದೆಹಲಿ:** ಸಂಸತ್ತಿನ ಮುಂಗಾರು ಅಧಿವೇಶನ ಜು.20ರಂದು ಪ್ರಾರಂಭವಾಗಲಿದ್ದು, ಕೇಂದ್ರ ಸರ್ಕಾರ ಬುಧವಾರ ಸರ್ವಪಕ್ಷ ಸಭೆ ಕರೆದಿದೆ. ಸಂಸತ್ ಅಧಿವೇಶನ ಆರಂಭಕ್ಕೂ ಮುನ್ನ ರೂಢಿಯಲ್ಲಿರುವ ಸರ್ವಪಕ್ಷ ಸಭೆಯಲ್ಲಿ ಮುಂಗಾರು ಅಧಿವೇಶನಕ್ಕೆ ಸಂಬಂಧಿಸಿದ ಹಲವು ವಿಚಾರಗಳ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ. ಅಧಿವೇಶನದಲ್ಲಿ ಸುಗಮ ಕಲಾಪಕ್ಕೆ ಕೇಂದ್ರ ಸರ್ಕಾರ, ಪ್ರತಿಪಕ್ಷಗಳ ಸಹಕಾರ ಕೋರುವ ಸಾಧ್ಯತೆ ಇದೆ. ಈ ಬಾರಿ ಮಣಿಪುರ ಹಿಂಸಾಚಾರ, ದೆಹಲಿ ಸುಗ್ರೀವಾಜ್ಞೆ ಮತ್ತು ಇತರ ಹಲವು ವಿಷಯಗಳ ಬಗ್ಗೆ ಕಾಂಗ್ರೆಸ್ ನೇತೃತ್ವದ ಪ್ರತಿಪಕ್ಷಗಳು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ಸಾಧ್ಯತೆ ಇದೆ. ಏತನ್ಮಧ್ಯೆ, ಉಪರಾಷ್ಟ್ರಪತಿ ಜಗದೀಪ್ ಧನಕರ್ ಕರೆದಿದ್ದ ಇದೇ ರೀತಿಯ ಸರ್ವಪಕ್ಷ ಸಭೆಯನ್ನು ಹಲವು ಪಕ್ಷಗಳ ನಾಯಕರು ಲಭ್ಯವಿಲ್ಲದ ಕಾರಣ ಮುಂದೂಡಲಾಗಿದೆ

# ಕಲಾಮಂದಿರಕ್ಕೆ ಬೇಕಿದೆ ಕಾಯಕಲ್ಪ; ಶೀಘ್ರವೇ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರಿಂದ ಪರಿಶೀಲನೆ ಸಾಧ್ಯತೆ

ಮೈಸೂರು,ಜು.18(ಜಿಎ)–ಸದ್ಯದಲ್ಲಿಯೇ ಮೈಸೂರಿನ ಕಲಾಮಂದಿರ ಆಧುನೀಕರಣಗೊಳ್ಳುವ ಸಾಧ್ಯತೆ ಇದ್ದು, ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರು ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ.

ಮೈಸೂರಿನ ಕಲಾಮಂದಿರ ನಿರ್ಮಾಣಗೊಂಡು 38 ವರ್ಷ ಪೂರ್ಣಗೊಂಡಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬರುವ ಅಲ್ಪ ಅನುದಾನದಲ್ಲಿ ಆಯಾ ಕಾಲಘಟ್ಟದ ಸಹಾಯಕ ನಿರ್ದೇಶಕರು ಆ ಅನುದಾನವನ್ನು ಬಳಸಿಕೊಂಡು ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಆದರೆ, ಕಲಾಮಂದಿರಕ್ಕೆ ಆಧುನಿಕ ತಂತ್ರಜ್ಞಾನದ ಉಪಕರಣ ಮತ್ತು ಕಟ್ಟಡದ ದುರಸ್ತಿಗೆ ಹೆಚ್ಚಿನ ಅನುದಾನ ಅವಶ್ಯವಿದೆ.

ಮೈಸೂರಿನ ಕಲಾಮಂದಿರವನ್ನು ನಿರ್ಮಾಣ ಮಾಡಲು ಅಂದಿನ ಮುಖ್ಯಮಂತ್ರಿ ಗುಂಡೂರಾವ್ ಅವರು ಅನುಮೋದನೆ ನೀಡಿದರು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ ಅಧಿಕಾರಾವಧಿ (1985) ಯಲ್ಲಿ ಕಲಾಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಮೊದಲು ಕಲಾಮಂದಿರದ ನಿರ್ವಹಣೆಯನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ವಹಿಸಿಕೊಂಡಿತು. ನಂತರ 1989ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಸಂಪೂರ್ಣ ನಿರ್ವಹಣೆಯ ಜವಾಬ್ದಾರಿಯನ್ನು ವರ್ಗಾಯಿಸಲಾಯಿತು.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾವಣೆಗೊಂಡ ನಂತರ ಕೆಲವೊಂದು ಬದಲಾವಣೆಗಳು ಆಗಿದ್ದು, ಅದರಂತೆ ಈ ಹಿಂದೆ ಇಲಾಖೆ ಸಹಾಯಕ ನಿರ್ದೇಶಕರಿದ್ದಾಗ ಕಲಾಮಂದಿರದ ಕುರ್ಚಿಗಳ ಬದಲಾವಣೆ, ಕಾರಂಜಿ, ಉದ್ಯಾನವನ ಮತ್ತು ಚಿಂತಕರ ಚಾವಡಿ ಸೇರಿದಂತೆ ಅನೇಕ ಬದಲಾವಣೆಗಳನ್ನು ಮಾಡಿದ್ದರು. ಆದರೆ, ಮಳೆ ನೀರು ಸೋರಿಕೆ, ಬೆಳಕು ಧ್ವನಿ ಸೇರಿದಂತೆ ಇನ್ನಷ್ಟು ಸಮಸ್ಯೆಗಳು ಇಲ್ಲಿ ತಾಂಡವವಾಡುತ್ತಿದೆ. ಇತ್ತೀಚೆಗೆ 67.50 ಲಕ್ಷ ರೂ. ಅನುದಾನ ಬಿಡುಗಡೆಯಾಗಿತು. ಅದರಲ್ಲಿ ಕಾಂಪೌಂಡ್ ನಿರ್ಮಾಣ, ಶೌಚಾಲಯ ಮತ್ತು ಪೈಪ್‌ಲೈನ್‌ಗಳ ದುರಸ್ತಿ ಮಾಡಲಾಗಿದ್ದು, ಮಳೆ ನೀರಿನಿಂದ ಸೋರುತ್ತಿರುವ ಚಾವಣಿಗೆ ತಾತ್ಕಾಲಿಕವಾಗಿ ಪ್ಲಾಸ್ಟಿಂಗ್ ಮಾಡಲಾಗಿದೆ. ಆದರೆ, ಗಾರೆ ಕೆಲಸದವರ ಪ್ರಕಾರ ಕಲಾಮಂದಿರದ ಚಾವಣಿಯಲ್ಲಿ ಟೈಲ್ಸ್‌ಗಳನ್ನು ಅಳವಡಿಸಿದ್ದು,

> ಕಲಾಮಂದಿರ ನಿರ್ಮಾಣವಾಗಿ 38 ವರ್ಷಗಳು ಕಳೆದಿದ್ದು, ಆಧುನೀಕರಣದ ಸ್ಪರ್ಶ ಬೇಕಿದ್ದು, ಈ ಸಂಬಂಧ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮತ್ತು ಸ್ಥಳೀಯ ಶಾಸಕರಿಗೆ ಮನವಿ ಸಲ್ಲಿಸಲಾಗಿದೆ. ಬಜೆಟ್ ಅಧಿವೇಶನ ಮುಕ್ತಾಯಗೊಂಡ ನಂತರ ಕಲಾಮಂದಿರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವ ಭರವಸೆ ನೀಡಿದ್ದಾರೆ.
> **–ಎಂ.ಡಿ.ಸುದರ್ಶನ್, ಸಹಾಯಕ ನಿರ್ದೇಶಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಅವುಗಳು ಶಿಥಿಲವಾಗಿವೆ. ಅದನ್ನು ಸಂಪೂರ್ಣವಾಗಿ ತೆಗೆದು ಹಾಕಿ ದುರಸ್ತಿ ಮಾಡಬೇಕೆಂದು ತಿಳಿಸಿದ್ದಾರೆ.

ಈ ಹಿಂದೆ ಬಂದ ಅನುದಾನದಲ್ಲಿ ಸಣ್ಣಪುಟ್ಟ ಕಾಮಗಾರಿ ಮಾಡಲಾಗಿದೆ. ಆದರೆ, ಕೆಲವು ವರ್ಷಗಳ ಹಿಂದೆ ಅಳವಡಿಸಿರುವ ಕುರ್ಚಿಗಳು ಹಾಳಾಗಿದ್ದು, ಅದನ್ನು ಬದಲಾಯಿಸಬೇಕು. ಧ್ವನಿ–ಬೆಳಕಿಗೆ ಮತ್ತಷ್ಟು ಆಧುನಿಕ ಉಪಕರಣಗಳನ್ನು ಅಳವಡಿಸಿ ಮೇಲ್ದರ್ಜೆಗೆ ಏರಿಸಬೇಕಿದೆ. ಮುಖ್ಯವಾಗಿ ಕಲಾಮಂದಿರದ ವಿಶಾಲ ಚಾವಣಿಯ ದುರಸ್ತಿ ಆಗಬೇಕಿದ್ದು, ಈ ಎಲ್ಲಾ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತರಲಾಗಿದೆ ಎಂದು ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ತಿಳಿಸಿದರು.

# ಜು.24ಕ್ಕೆ ಮನ್‌ಮುಲ್ ಅಧ್ಯಕ್ಷಗಾದಿ ಚುನಾವಣೆ

**• ಮುಂದೂಡಿದ್ದ ಚುನಾವಣೆ ಮರು ದಿನಾಂಕ ಪ್ರಕಟ • ಅಧಿಕಾರ ಹಿಡಿಯಲು ಕಾಂಗ್ರೆಸ್–ಜೆಡಿಎಸ್ ನಡುವೆ ಭಾರೀ ಪೈಪೋಟಿ**




ಮಂಡ್ಯ, ಜು.18– ಕೋರಂ ಅಭಾವದಿಂದ ಮುಂದೂಡಲ್ಪಟ್ಟಿದ್ದ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಮರು ದಿನಾಂಕ ಘೋಷಣೆಯಾಗಿದ್ದು, ಇದೇ ಜು.24ಕ್ಕೆ ಚುನಾವಣೆ ನಡೆಯಲಿದೆ.

ಜು.6ರಂದು ಚುನಾವಣೆ ದಿನಾಂಕ ಘೋಷಣೆಯಾಗಿ ಅಧ್ಯಕ್ಷಗಾದಿಗೆ ಕಾಂಗ್ರೆಸ್ ನಿರ್ದೇಶಕ ಬೋರೇಗೌಡ ಹಾಗೂ ಜೆಡಿಎಸ್‌ನಿಂದ ಹಾಲಿ ಉಪಾಧ್ಯಕ್ಷ ರಘುನಂದನ್, ಶಾಸಕರೂ ಆದ ನಿರ್ದೇಶಕ ಹೆಚ್.ಟಿ. ಮಂಜು ಹಾಗೂ ಮತ್ತೋರ್ವ ನಿರ್ದೇಶಕ ನೆಲ್ಲಿಗೆರೆ ಬಾಲು ನಾಮಪತ್ರ ಸಲ್ಲಿಸಿದ್ದರು.

ಆದರೆ ಅನಿರೀಕ್ಷಿತ ಬೆಳವಣಿಗೆಯಲ್ಲಿ ಚುನಾವಣೆ ನಡೆಯುವ ಅರ್ಧ ಗಂಟೆಗೂ ಮುನ್ನ ಸಹಕಾರಿ ನಿಬಂಧನೆಗಳನ್ನು ಉಲ್ಲಂಘಿಸಿರುವ ಆರೋಪದ ಮೇರೆಗೆ ಮನ್‌ಮುಲ್ ಮಾಜಿ ಅಧ್ಯಕ್ಷ ಹಾಗೂ ನಿರ್ದೇಶಕ ಬಿ.ಆರ್.ರಾಮಚಂದ್ರ ಹಾಗೂ ಕೆಎಂಎಫ್ ಮತ್ತು ಮನ್‌ಮುಲ್ ನಿರ್ದೇಶಕ ವಿಶ್ವನಾಥ್ ಅವರ ನಿರ್ದೇಶಕ ಸ್ಥಾನವನ್ನು ಸಹಕಾರಿ ಉಪ ನಿಬಂಧಕರು ಅನರ್ಹಗೊಳಿಸಿದ್ದರು. ಈ ಹಿನ್ನಲೆಯಲ್ಲಿ ಜೆಡಿಎಸ್‌ನ ನಿರ್ದೇಶಕರು ಸಾಮೂಹಿಕ ಗೈರಾಗಿದ್ದರು.

ಜೆಡಿಎಸ್‌ನ 6 ಮಂದಿ ನಿರ್ದೇಶಕರ ಪೈಕಿ ಯಾರು ಸಹ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿರಲಿಲ್ಲ. ಇತ್ತ ಕಾಂಗ್ರೆಸ್‌ನ ಯಾವ ನಿರ್ದೇಶಕರು ಭಾಗಿಯಾಗಿರಲಿಲ್ಲ. ಇನ್ನು ಮತದಾನ ಹಕ್ಕು ಹೊಂದಿದ್ದ ಕೆಲ ಅಧಿಕಾರಿಗಳು ಸಹ ಗೈರಾಗಿದ್ದರು. ನಿರ್ದೇಶಕ ಡಾಲು ರವಿ ಮಾತ್ರ ಹಾಜರಾಗಿ, ಹಾಜರಾತಿಗೆ ಸಹಿ ಹಾಕಿ ವಾಪಸ್ ತೆರಳಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ್ದ ಚುನಾವಣಾಧಿಕಾರಿಯೂ ಆದ ಅಪರ ಜಿಲ್ಲಾಧಿಕಾರಿ ಡಾ. ನಾಗರಾಜು, ಕೋರಂ ಅಭಾವದಿಂದ ಚುನಾವಣೆ ಮುಂದೂಡಲಾಗಿದೆ. ಆದರೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಮತ್ತೆ ಮಾಡುವುದಿಲ್ಲ. ಇಂದು ನಾಮಪತ್ರ ಸಲ್ಲಿಕೆಯಾಗಿರುವುದೇ ಅಂತಿಮ. ಮತ್ತೊಂದು ದಿನಾಂಕ ಘೋಷಣೆಯಾದಾಗ ಕೇವಲ ಕಣದಲ್ಲಿರುವ ಅಭ್ಯರ್ಥಿಗಳು ನಾಮಪತ್ರ ವಾಪಸ್ ತೆಗೆದುಕೊಳ್ಳಲು ಹಾಗೂ ಮತದಾನ ಪ್ರಕ್ರಿಯೆಯಲ್ಲಿ ಎಲ್ಲಾ ನಿರ್ದೇಶಕರು ಪಾಲ್ಗೊಳ್ಳಲು ಮಾತ್ರ ಅವಕಾಶವಿದೆ ಎಂದು ಸ್ಪಷ್ಟಪಡಿಸಿದ್ದರು.

ಆದರೆ ಅಚ್ಚರಿ ಎಂಬಂತೆ ಅದೇ ದಿನ ಅನರ್ಹಗೊಂಡಿದ್ದ ರಾಮಚಂದ್ರ ಹಾಗೂ ವಿಶ್ವನಾಥ್‌ರ ಆದೇಶವನ್ನು ಸಹಕಾರ ಇಲಾಖೆ ವಾಪಸ್ ಪಡೆದಿತ್ತು. ಈ ವೇಳೆ ಶಾಸಕ ಹೆಚ್.ಟಿ.ಮಂಜು ಹಾಗೂ ಬಿ.ಆರ್.ರಾಮಚಂದ್ರ ಈ ನಿರ್ಧಾರ ಪ್ರಶ್ನಿಸಿ, ಆಕ್ಷೇಪ ವ್ಯಕ್ತಪಡಿಸಿದ್ದರು. ಸದ್ಯ ಚುನಾವಣೆ ದಿನಾಂಕ ನಿಗದಿಯಾಗಿದ್ದು, ನಿರ್ದೇಶಕರು ಅಂದು ಭಾಗವಹಿಸುವರೋ ಅಥವಾ ಮತ್ತೆ ಗೈರಾಗಿ ಚುನಾವಣೆ ಮುಂದೂಡುತ್ತದೆಯೋ ಕಾದು ನೋಡಬೇಕಿದೆ.

**ಬಲಾಬಲ:** ಪ್ರಸ್ತುತ ಮನ್‌ಮುಲ್‌ನಲ್ಲಿ ಚುನಾಯಿತ ನಿರ್ದೇಶಕರು 12 ಮಂದಿ, ಓರ್ವ ನಾಮ ನಿರ್ದೇಶನ ಹಾಗೂ ನಾಲ್ವರು ಅಧಿಕಾರಿಗಳಿಗೆ ಮತದಾನದ ಹಕ್ಕಿದ್ದು, ಒಟ್ಟಾರೆ 17 ಮಂದಿ ಮತಚಲಾಯಿಸಿ ಅಧ್ಯಕ್ಷರನ್ನು ಆಯ್ಕೆ ಮಾಡಬಹುದಾಗಿದೆ.

ಈ ಪೈಕಿ ಜೆಡಿಎಸ್ 6 ನಿರ್ದೇಶಕರನ್ನು ಹೊಂದಿದ್ದು, ಕಾಂಗ್ರೆಸ್ ಇಬ್ಬರು ಚುನಾಯಿತ ನಿರ್ದೇಶಕರು, ಜೆಡಿಎಸ್‌ನಿಂದ ಕಾಂಗ್ರೆಸ್ ಸೇರಿರುವ ಓರ್ವ ಚುನಾಯಿತ ನಿರ್ದೇಶಕ (ಪಾಂಡವಪುರ ರಾಮಚಂದ್ರು), ಯಾವ ಪಕ್ಷದ ಬೆಂಬಲ ಇಲ್ಲದೇ ಆಯ್ಕೆಯಾಗಿದ್ದ ಡಾಲು ರವಿ ಹಾಗೂ ಓರ್ವ ನಾಮ ನಿರ್ದೇಶಿತ ನಿರ್ದೇಶಕ (ಕದಲೂರು ರಾಮಕೃಷ್ಣ) ಸೇರಿ 5 ನಿರ್ದೇಶಕರನ್ನು ಹೊಂದಿದ್ದು, ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವುದರಿಂದ ಮತದಾನದ ಹಕ್ಕು ಹೊಂದಿರುವ ನಾಲ್ವರು ಅಧಿಕಾರಿಗಳು ಕಾಂಗ್ರೆಸ್ ಬೆಂಬಲಿಸಿದರೆ ಪಕ್ಷದ ಬಲಾಬಲ 9ಕ್ಕೇರಲಿದೆ.

ಅಲ್ಲದೇ ಬಿಜೆಪಿಯ ಇಬ್ಬರು ಚುನಾಯಿತ ನಿರ್ದೇಶಕರ ಮತವಿದ್ದು, ಅವರು ಒಂದು ವೇಳೆ ಜೆಡಿಎಸ್ ಬೆಂಬಲಿಸಿದರೆ ಜೆಡಿಎಸ್ ಬಲ 8ಕ್ಕೇರಲಿದೆ. ಈ ಮೂಲಕ ಮೇಲ್ನೋಟಕ್ಕೆ ಕಾಂಗ್ರೆಸ್‌ಗೆ ಅಧಿಕಾರ ಸಿಗಬಹುದು ಎಂದು ಲೆಕ್ಕಾಚಾರದ ಪ್ರಕಾರ ಹೇಳಬಹುದಾದರೂ ಓರ್ವ ಅಧಿಕಾರಿ ಗೈರಾಗಿ ಅಥವಾ ಮತದಾನದ ಸಂದರ್ಭ ಜೆಡಿಎಸ್‌ಗೆ ಮತ ಹಾಕಿದರೆ ಫಲಿತಾಂಶದ ಲೆಕ್ಕಾಚಾರ ಏರುಪೇರಾಗಲಿದೆ.

**ಮತದಾನ ಮಾಡುವ ಅಧಿಕಾರಿಗಳು ಯಾರ್‍ಯಾರು?:** ಇನ್ನು ಮತದಾನ ಪ್ರಕ್ರಿಯೆಯಲ್ಲಿ ನಾಲ್ಕು ಮಂದಿ ಅಧಿಕಾರಿಗಳಿಗೆ ಮತ ಚಲಾಯಿಸುವ ಹಕ್ಕಿದ್ದು, ಈ ಪೈಕಿ ಕೆಎಂಎಫ್‌ನ ಪ್ರತಿನಿಧಿ, ಪಶುಸಂಗೋಪನೆ ಇಲಾಖೆ ಡಿಸಿ, ಸಹಕಾರಿ ಸಂಘದ ಉಪನಿಬಂಧಕರು ಹಾಗೂ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿ ಉಪ ಪ್ರಧಾನ ವ್ಯವಸ್ಥಾಪಕರಿಗೆ ಮತದಾನದ ಹಕ್ಕಿದೆ.

# ಕ್ಷಯ ರೋಗಕ್ಕೆ ಚಿಕಿತ್ಸೆ ಅಗತ್ಯ: ಶಾಸಕ ರವಿಕುಮಾರ್



ಮಂಡ್ಯ, ಜು.18– ಕ್ಷಯ ಒಂದು ಮಾರಕ ರೋಗವಾಗಿದ್ದು, ಸರಿಯಾದ ಸಮಯಕ್ಕೆ ಚಿಕಿತ್ಸೆ ಪಡೆದರೆ ಗುಣಪಡಿಸಬಹುದಾಗಿದೆ ಎಂದು ಶಾಸಕ ಗಣಿಗ ರವಿಕುಮಾರ್ ಸಲಹೆ ನೀಡಿದರು.

ಮಂಗಳವಾರ ಡಾ||ರಿ ಸಮಾಜ ಸ್ಥಳದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಸಕ್ರಿಯ ಕ್ಷಯ ರೋಗ ಪತ್ತೆ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಆ.2ರವರೆಗೆ ಕ್ಷಯ ರೋಗ ಪತ್ತೆ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಸಾರ್ವಜನಿಕರು ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕ್ಷಯ ರೋಗಿಗಳಿಗೆ ಸರ್ಕಾರದಿಂದ ಉಚಿತ ಚಿಕಿತ್ಸೆ ನೀಡಲಾಗುವುದು. ಜೊತೆಗೆ 500 ರೂ. ಮತ್ತು ಫುಡ್‌ಕಿಟ್ ವಿತರಿಸಲಾಗುವುದು. ಇದರ ಸದುಪಯೋಗವನ್ನು ಮಂಡ್ಯ ಜನತೆ ಪಡೆದುಕೊಳ್ಳಬೇಕು. ಸತತ 2 ವಾರದಿಂದ ಕೆಮ್ಮು ಬರುತ್ತಿದ್ದರೆ ಅಥವಾ ಅದು ನಿಂತಿಲ್ಲದಿದ್ದರೆ ಕಫ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ ಎಂದರು.

ಈ ರೋಗ ಹೋಗಲಾಡಿಸಲು ಜಿಲ್ಲಾ ಆರೋಗ್ಯಾಧಿಕಾರಿಗಳು ಮತ್ತು ಕ್ಷಯ ರೋಗ ಅಧಿಕಾರಿಗಳು ಶ್ರಮಿಸುತ್ತಿದ್ದಾರೆ. ಅವರಿಗೆ ಸಾರ್ವಜನಿಕರು ಸಹಕರಿಸಿ ಜಿಲ್ಲೆಯನ್ನು ಕ್ಷಯ ಮುಕ್ತ ಜಿಲ್ಲೆಯನ್ನಾಗಿಸಬೇಕು. ಜಿಲ್ಲೆಯಲ್ಲಿ 18 ಲಕ್ಷ ಜನರು ವಾಸವಿದ್ದು, ಅದರಲ್ಲಿ 3,38,000 ಜನರ ಸ್ಯಾಂಪಲ್ ಅನ್ನು ತೆಗೆದುಕೊಳ್ಳಲಾಗಿದೆ ಎಂದರು.

ಕ್ಷಯ ರೋಗ ನಿರ್ಮೂಲನಾಧಿಕಾರಿ ಡಾ.ಎ.ಎನ್.ಆಶಾಲತಾ ಮಾತನಾಡಿ, ಕಫ ಪರೀಕ್ಷೆಯನ್ನು ಕೆಲಸಕ್ಕಾಗಿ ವಲಸೆ ಬರುವ ಜನರಿರುವ ಪ್ರದೇಶದಲ್ಲಿ, ಹೈರಿಸ್ಕ್ ಪ್ರದೇಶದಲ್ಲಿ ಕೇಸ್ ಇರುವ ಕಡೆ ಎಲ್ಲಾ ಮನೆ ಮನೆಗೂ ಹೋಗಿ ರೋಗ ಲಕ್ಷಣದ ಬಗ್ಗೆ ಅಲ್ಲಿನ ಜನಸಾಮಾನ್ಯರ ಜೊತೆ ವಿಚಾರಿಸಲಾಗುತ್ತಿದೆ. ಕ್ಷಯ ರೋಗದ ಪರೀಕ್ಷೆ ನಡೆಸಲು ಜಿಲ್ಲಾದ್ಯಂತ 315 ಆರೋಗ್ಯ ಅಧಿಕಾರಿಗಳ ಗುಂಪು ರಚನೆ ಮಾಡಲಾಗಿದೆ. ಕ್ಷಯ ರೋಗದ ಲಕ್ಷಣ ಇದ್ದರೆ ಅವರೇ ಸ್ವಯಂ ಪ್ರೇರಿತರಾಗಿ ಮುಂದೆ ಬರಬೇಕು. ಕಫ ಸಂಗ್ರಹಣೆ ಮಾಡಿ ಪರೀಕ್ಷೆ ಮಾಡಲಾಗುವುದು ಎಂದರು.

ಈ ಸಂದರ್ಭ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್, ಆರೋಗ್ಯ ಇಲಾಖೆ ಅಧಿಕಾರಿಗಳಾದ ಡಾ.ಜವರೇಗೌಡ, ಡಾ.ಕೆ.ಆರ್.ಶಶಿಧರ್, ಮಂಗಳ, ನಗರಸಭಾ ಸದಸ್ಯ ನಾಗೇಶ್ ಇನ್ನಿತರರಿದ್ದರು.

## ಮಂಡ್ಯಕ್ಕೆ ಅಖಿಲೇಶ್ ಯಾದವ್ ಭೇಟಿ

ಮಂಡ್ಯ, ಜು.18– ವಿಪಕ್ಷಗಳ ಸಭೆಗಾಗಿ ಬೆಂಗಳೂರಿಗೆ ಆಗಮಿಸಿದ್ದ ಉತ್ತರ ಪ್ರದೇಶ ಮಾಜಿ ಮುಖ್ಯಮಂತ್ರಿ ಹಾಗೂ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮಂಡ್ಯಕ್ಕೆ ಮಂಗಳವಾರ ಭೇಟಿ ನೀಡಿದ್ದರು. ಬೆಂಗಳೂರಿನಲ್ಲಿ ಸಭೆ ಮುಗಿದ ಬಳಿಕ ಮಂಡ್ಯಕ್ಕೆ ಆಗಮಿಸಿದ್ದ ಅಖಿಲೇಶ್, ಮಂಡ್ಯದ ಖಾಸಗಿ ಹೋಟೆಲ್‌ನಲ್ಲಿ ಕೆಲ ಕಾಲ ವಿಶ್ರಾಂತಿ ಪಡೆದು ಬಳಿಕ ಮಂಡ್ಯ, ಚನ್ನಪಟ್ಟಣ ಹಾಗೂ ಶ್ರೀರಂಗಪಟ್ಟಣದ ತಮ್ಮ ಸ್ನೇಹಿತರನ್ನು ಭೇಟಿ ಮಾಡಿ, ಕುಶಲೋಪರಿ ವಿಚಾರಿಸಿದರು.



## ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ಜು.18– ಬಸರಾಳು, ಹಂಪಾಪುರ ಮತ್ತು ಚಿಕ್ಕಮಂಡ್ಯ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜು.20ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಬಸರಾಳು, ಶಿವಪುರ, ಬೇಬಿ, ಕಂಬದಹಳ್ಳಿ, ಬಿದರಕಟ್ಟೆ, ಮಾರಸಿಂಗನಹಳ್ಳಿ, ಅಂಕುಶಾಪುರ, ಬೆನ್ನಹಟ್ಟಿ, ಶಾನಭೋಗನಹಳ್ಳಿ, ಬೊಮ್ಮನಹಳ್ಳಿ, ಮನುಗನಹಳ್ಳಿ, ಎಂ.ಹಟ್ನ, ಗಣಿಗ, ಕೆರಗೋಡು, ದೊಡ್ಡಗರುಡನಹಳ್ಳಿ, ಬಿಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ.ಹೊಸೂರು, ಹಂಪಾಪುರ, ಕಲ್ಮಂಟಿದೊಡ್ಡಿ, ಸೌದೇನಹಳ್ಳಿ, ಬೆಟ್ಟಹಳ್ಳಿ, ಬೀಚನಹಳ್ಳಿ, ಪುರದಕೊಪ್ಪಲು, ಎಂ.ಹೊನ್ನೇನಹಳ್ಳಿ, ಮನುಗನಹಳ್ಳಿ, ಶಂಕರಪುರ, ಜೈನ ಸ್ಟ್ರೀಟ್, ಬೀಡಿ ಕಾಲೋನಿ, ಜಬರ್ ಸರ್ಕಲ್, ವಿನಾಯಕನಂದ ಬಡಾವಣೆ, ಗೋಪಾಲಪುರ, ಚಿಕ್ಕಮಂಡ್ಯ, ಸಾತನೂರು, ಕೊಮ್ಮೇರಹಳ್ಳಿ, ಹುಲಿವಾನ, ಕೆ.ಗೌಡಗೆರೆ, ಹೆಚ್.ಮಲ್ಲಿಗೆರೆ, ಎಸ್.ಐ.ಕೋಡಿಹಳ್ಳಿ, ಹೆಚ್.ಕೋಡಿಹಳ್ಳಿ, ಸಂಪಹಳ್ಳಿ, ಗೊರವಾಲೆ, ಸುತ್ತಮುತ್ತ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.



ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಗೆ ವಿವಿಧೆಡೆಗಳಿಂದ ಆಗಮಿಸುವ ಸಾರ್ವಜನಿಕರ ಅನುಕೂಲಕ್ಕಾಗಿ ಮೈಸೂರಿನ ಅಗರ್ವಾಲ್ ಕುಟುಂಬದಿಂದ ಗ್ರಾನೈಟ್ ಬೆಂಚ್ ಹಾಗೂ ಪೂಜೆ ಕಟ್ಟೆ ನಿರ್ಮಿಸಲಾಯಿತು. ಈ ವೇಳೆ ಅಗರ್ವಾಲ್ ಕುಟುಂಬದ ಮುಖ್ಯಸ್ಥ ಬಿಂದು ಅಗರ್ವಾಲ್, ಪುರಸಭಾ ಸದಸ್ಯ ಎಂ.ನಂದೀಶ್, ಪುರಸಭೆ ಮಾಜಿ ಉಪಾಧ್ಯಕ್ಷ ಕೃಷ್ಣಪ್ಪ, ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್ ಮಾಯಿಗೌಡ, ಅಗರ್ವಾಲ್ ಕುಟುಂಬದವರು ಮತ್ತು ಸಾರ್ವಜನಿಕರಿದ್ದರು.

# ದುರುದ್ದೇಶದಿಂದ ನಾಮಫಲಕ ತೆಗೆದಿಲ್ಲ: ಡಾ.ಶಿವಕುಮಾರ್




ಕೆ.ಆರ್.ಪೇಟೆ, ಜು.18– ಪಟ್ಟಣದ ದುಂಡಶೆಟ್ಟಿ–ಲಕ್ಷ್ಮಮ್ಮ ಸಾರ್ವಜನಿಕ ಆಸ್ಪತ್ರೆ ನಾಮಫಲಕವನ್ನು ಯಾವುದೇ ದುರುದ್ದೇಶ ಪೂರ್ವಕವಾಗಿ ತೆಗೆಸಿಲ್ಲ. ಆಸ್ಪತ್ರೆ ಮೊದಲ ಅಂತಸ್ತಿನಲ್ಲಿ 95 ಲಕ್ಷ ರೂ. ವೆಚ್ಚದಲ್ಲಿ ಲ್ಯಾಬೋರೇಟರಿ ಕಟ್ಟಡ ಹಾಗೂ ಐಸೋಲೇಷನ್ ವಾರ್ಡ್ ಕಾಮಗಾರಿ ನಡೆಯುತ್ತಿರುವ ಕಾರಣ ಸುರಕ್ಷತೆ ಕಾರಣ ತೆಗೆಯಲಾಗಿದೆ ಎಂದು ಆಸ್ಪತ್ರೆ ಮುಖ್ಯ ಆಡಳಿತಾಧಿಕಾರಿ ಡಾ.ಕೆ.ಎಸ್.ಶಿವಕುಮಾರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಸ್ಪತ್ರೆ ಮುಖ್ಯ ಆಡಳಿತ ವೈದ್ಯಾಧಿಕಾರಿಯಾಗಿ ಬಂದ ನಂತರ ಹಲವು ಸುಧಾರಣೆ ತಂದು ಆಸ್ಪತ್ರೆ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ತೊಡಗಿಸಿಕೊಂಡಿದ್ದೇನೆ. ಕಳೆದ ವರ್ಷ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಅಂಗವಾಗಿ ದುಂಡಶೆಟ್ಟಿ ಲಕ್ಷ್ಮಮ್ಮ ಸಾರ್ವಜನಿಕ ಆಸ್ಪತ್ರೆ ಎಂಬ ಹೈಟೆಕ್ ನಾಮಫಲಕವನ್ನು ಅಳವಡಿಸಲಾಗಿತ್ತು. ಇದಕ್ಕೂ ಮುಂಚೆ ಚಿಕ್ಕದಾಗಿ ಬರೆಯಲಾಗಿದ್ದ ನಾಮಫಲಕ ವನ್ನು ಚೆನ್ನಾಗಿ ಕಾಣುವಂತೆ ಹೈಟೆಕ್ ಮಾದರಿ ನಾಮಫಲಕವನ್ನು ನಾನೇ ಹೆಚ್ಚಿನ ಕಾಳಜಿ ವಹಿಸಿ ಹಾಕಿದ್ದೆ ಎಂದು ಸ್ಪಷ್ಟಪಡಿಸಿದರು.

ಆಸ್ಪತ್ರೆ ಮೊದಲ ಅಂತಸ್ತಿನಲ್ಲಿ ಕಾಮಗಾರಿ ನಡೆಯುತ್ತಿರುವ ಕಾರಣ ನಾಮಫಲಕ ವಿರೂಪಗೊಳ್ಳುವ ಸಾಧ್ಯತೆ ಇದ್ದ ಕಾರಣ ಬಿಚ್ಚಿಡಲಾಗಿದ್ದು, ಇದನ್ನು ತಪ್ಪಾಗಿ ಅರ್ಥೈಸಿಕೊಂಡಿರುವ ಕೆಲವರು ಆಸ್ಪತ್ರೆ ಆಡಳಿತಾಧಿಕಾರಿಯಾದ ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದರು.

ಈ ವೇಳೆ ಕರವೇ ಹೋರಾಟಗಾರ ಎ.ಸಿ. ಕಾಂತರಾಜು, ದುಂಡಶೆಟ್ಟಿ ಲಕ್ಷ್ಮಮ್ಮ ವಂಶಸ್ಥರ ಹಲವು ಮುಖಂಡರು ಹಾಗೂ ಆಸ್ಪತ್ರೆ ವೈದ್ಯಕೀಯ ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.

# ಮದ್ದೂರು ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ಕುಮಾರ್ ಭೇಟಿ



ಮಂಡ್ಯ, ಜು.18– ಮದ್ದೂರು ತಾಲೂಕು ಕಚೇರಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಮಂಗಳವಾರ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿ, ತಾಲೂಕು ಕಚೇರಿ ಪರಿಶೀಲಿಸಿದರು.

ತಾಲೂಕು ಕಚೇರಿಯಲ್ಲಿ ಕರ್ತವ್ಯಕ್ಕೆ ನಿಗದಿತ ಸಮಯಕ್ಕೆ ಹಾಜರಾಗದ ನೌಕರರ ಬೇಜವಾಬ್ದಾರಿತನ ಕಂಡ ಜಿಲ್ಲಾಧಿಕಾರಿ ಅವರು ಹಾಜರಾತಿ ಪುಸ್ತಕ ಪರಿಶೀಲಿಸಿ ಸೂಕ್ತ ಕ್ರಮ ವಹಿಸುವಂತೆ ತಹಸೀಲ್ದಾರ್ ನರಸಿಂಹಮೂರ್ತಿಗೆ ಸೂಚಿಸಿದರು.

ನಂತರ ತಾಲೂಕಿನ ಸಾರ್ವಜನಿಕ ಆಸ್ಪತ್ರೆ ಭೇಟಿ ನೀಡಿ ಹೊರ ರೋಗಿಗಳ ಕುಂದು ಕೊರತೆ ಆಲಿಸಿದರು. ಆಸ್ಪತ್ರೆಗೆ ದಾಖಲಾಗಿರುವ ರೋಗಿಗಳ ಆರೋಗ್ಯ ವಿಚಾರಿಸಿ, ಊಟ, ನೀರು, ಔಷಧ ಸೇರಿದಂತೆ ಮೂಲ ಸೌಕರ್ಯಗಳ ಬಗ್ಗೆ ಮಾಹಿತಿ ಪಡೆದು ರೋಗಿಗಳು ಯಾವ ಸಮಯದಲ್ಲಿ ಔಷಧ ತೆಗೆದುಕೊಳ್ಳಬೇಕು ಎಂದು ಚೀಟಿಯಲ್ಲಿ ಬರೆದುಕೊಡುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

# ಟಿ.ನರಸೀಪುರ ವೇಣುಗೋಪಾಲ್ ಶ್ರದ್ಧಾಂಜಲಿ ಸಭೆಗೆ ಹೈಕೋರ್ಟ್ ಅನುಮತಿ

ಬೆಂಗಳೂರು, ಜು.18– ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಇತ್ತೀಚೆಗೆ ಕೊಲೆಯಾದ ಯುವ ಬ್ರಿಗೇಡ್ ಕಾರ್ಯಕರ್ತ ಟಿ. ನರಸೀಪುರದ ವೇಣುಗೋಪಾಲ್ ಶ್ರದ್ಧಾಂಜಲಿ ಸಭೆಯನ್ನು ನಡೆಸುವುದಕ್ಕೆ ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆಯಿಂದ ನಿರಾಕರಿಸಲಾಗಿತ್ತು. ಈ ಕುರಿತು ನ್ಯಾಯಾಲಯದ ಮೊರೆ ಹೋಗಿದ್ದ ವೀರಾಂಜನೇಯ ಬಳಗ ಮತ್ತು ಯುವ ಬ್ರಿಗೇಡ್ ಸಂಸ್ಥೆಗೆ ಹೈಕೋರ್ಟ್ ವೇಣುಗೋಪಾಲ್ ಶ್ರದ್ಧಾಂಜಲಿ ಸಭೆ ನಡೆಸಲು ಷರತ್ತುಬದ್ಧ ಅನುಮತಿ ನೀಡಿದೆ. ಟಿ.ನರಸೀಪುರದಲ್ಲಿ ವೇಣುಗೊಪಾಲ ಶ್ರದ್ಧಾಂಜಲಿ ಸಭೆಯನ್ನು ನಡೆಸುವುದಕ್ಕೆ ಟಿ.ನರಸೀಪುರ ಪೊಲೀಸರು ಹಾಗೂ ತಹಸಿಲ್ದಾರ್ ಇಲಾಖೆಯಿಂದ ಅನುಮತಿ ನಿರಾಕರಣೆ ಮಾಡಲಾಗಿತ್ತು. ಈ ಕುರಿತು ಹೈಕೋರ್ಟ್ ಮೆಟ್ಟಿಲೇರಿದ್ದ ವೀರಾಂಜನೇಯ ಧರ್ಮ ಜಾಗೃತಿ ಬಳಗವು ಸಭೆ ನಡೆಸಲು ಅನುಮತಿ ನೀಡುವಂತೆ ಮನವಿ ಮಾಡಿತ್ತು. ಪೊಲೀಸರು ಹಾಗೂ ತಹಸಿಲ್ದಾರ್ ಆದೇಶ ಪ್ರಶ್ನಿಸಿ ಹೈಕೋರ್ಟ್ ಅರ್ಜಿ ಸಲ್ಲಿಸಲಾಗಿತ್ತು. ಈ ಕುರಿತು ವಿಚಾರಣೆ ಮಾಡಿದ ಹೈಕೋರ್ಟ್ ಏಕಸದಸ್ಯ ಪೀಠದಲ್ಲಿ ಅರ್ಜಿ ವಿಚಾರಣೆ ಮಾಡಿದ ನ್ಯಾ.ಕೃಷ್ಣ ದೀಕ್ಷಿತ್ ಅವರ ಪೀಠವು, ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಶ್ರದ್ಧಾಂಜಲಿ ಸಭೆಗೆ ಅನುಮತಿ ನೀಡಿದೆ. ಅರ್ಜಿದಾರರ ಪರ ವಕೀಲ ಅರುಣ್ ವಾದ ಮಂಡನೆ ಮಾಡಿದ್ದರು.

ಮೂರನೇ ಪುಟದಿಂದ

## ಕಾಮಗಾರಿ ವರ್ಷಾಂತ್ಯಕ್ಕೆ ಆರಂಭ

ಡಿಪಿಆರ್ ಅನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಅಲ್ಲಿಂದ ಅನುಮೋದನೆಗೊಂಡು, ಹಣ ಬಿಡುಗಡೆ ಆದ ನಂತರ ಟೆಂಡರ್ ಕರೆಯಲಾಗುವುದು. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಂಡ ನಂತರ ಡಿಸೆಂಬರ್ ವೇಳೆಗೆ ಮೈಸೂರು ದಸರಾ ವಸ್ತುಪ್ರದರ್ಶನವನ್ನು ಮೇಲ್ದರ್ಜೆಗೇರಿಸುವ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲಾಗುವುದು. ಬೆಂಗಳೂರಿನ ಡೆಲಾಯಿಟ್ ಕಂಪನಿಯು ಡಿಪಿಆರ್ ಸಿದ್ಧ ಮಾಡುತ್ತಿದೆ ಎಂದರು.

ದಸರಾ ವೇಳೆ ಮಾತ್ರ ಈ ವಸ್ತುಪದರ್ಶನ ತೆರೆದಿರುತ್ತದೆ. ಆದರೆ ವರ್ಷಪೂರ್ತಿ ವಸ್ತುಪ್ರದರ್ಶನವಿರುವ ಉದ್ದೇಶದಿಂದ ವಿಶಿಷ್ಟ ರೀತಿಯಲ್ಲಿ ಅಭಿವೃದ್ಧಿ ಮಾಡಲಾಗುವುದು. ಮದುವೆ, ಸಭೆ–ಸಮಾರಂಭ, ನಾಟಕ, ಮನರಂಜನೆ ಸೇರಿದಂತೆ ಇತರೆ ಕಾರ್ಯಕ್ರಮಗಳನ್ನು ಆಯೋಜಿಸಲು ವ್ಯವಸ್ಥೆ ಮಾಡಲಾಗುವುದು. ಈ ಮೂಲಕ ದಸರಾ ವೇಳೆಯಲ್ಲಿ ಮಾತ್ರ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ ಬರುತ್ತಿದ್ದ ಆದಾಯ ವರ್ಷ ಪೂರ್ತಿ ಬರುವಂತೆ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು. ಮೈಸೂರಿನ ಎಂ.ಜಿ.ರಸ್ತೆಯಲ್ಲಿ ದಸರಾ ವಸ್ತುಪ್ರದರ್ಶನಕ್ಕೆ ಸೇರಿದ 13 ಎಕರೆ ಜಮೀನು ಇದೆ. ಇಲ್ಲಿ ಸಾಂಸ್ಕೃತಿಕ ಕೇಂದ್ರ ತೆರೆಯಲಾಗುವುದು. ಅಲ್ಲಿ ವಿವಿಧ ರೀತಿಯ ಆಕರ್ಷಕ ಕಾರ್ಯಕ್ರಮ ಆಯೋಜನೆಗೆ ಸೂಕ್ತ ವೇದಿಕೆ ಕಲ್ಪಿಸಲಾಗುವುದು ಎಂದರು. ಮೈಸೂರು ರೇಷ್ಮೆ ಸೀರೆ, ಮೈಸೂರು ವಿಳ್ಯೇದೆಲೆ, ಮೈಸೂರು ಮಲ್ಲಿಗೆ ಸೇರಿದಂತೆ ಮೈಸೂರಿನ ಹೆಗ್ಗುರುತಾದಂತಹ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುವುದು. ರಾಜರ ಕಾಲದಿಂದಲೂ ಮೈಸೂರು ಕುಸ್ತಿಗೆ ಹೆಸರುವಾಸಿಯಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಕುಸ್ತಿ ಪಟುಗಳಿಗೆ ಪ್ರೋತ್ಸಾಹ ನೀಡಲು, ಪ್ರವಾಸಿಗರು ಸಾಹಸ ಕ್ರೀಡೆ ಕುಸ್ತಿಯನ್ನು ನೋಡುವ ವ್ಯವಸ್ಥೆ ಮಾಡಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು.

ಇತರೆ ಪ್ರವಾಸಿ ತಾಣದ ವೀಕ್ಷಣೆಯ ಜೊತೆಗೆ ದಸರಾ ವಸ್ತುಪ್ರದರ್ಶನಕ್ಕೂ ಭೇಟಿ ನೀಡಿ ಮೈಸೂರಿನ ಸಂಸ್ಕೃತಿ, ಪರಂಪರೆಯನ್ನು ಅರ್ಥ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಈ ಮೂಲಕ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆಯನ್ನು ಇಮ್ಮಡಿಗೊಳಿಸಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು.

## ಆಸ್ತಿಯನ್ನ ಸರ್ಕಾರವೇ ಖರೀದಿಸಲಿ

ಸಂರಕ್ಷಿಸಬೇಕು ಎಂದು ಪ್ರತಾಪ್ ಸಿಂಹ ಹೇಳಿದರು. ಭಕ್ತಿ ಪ್ರಧಾನವಾದ ಸ್ಥಳ ಚಾಮುಂಡಿಬೆಟ್ಟ ಎಂದಿಗೂ ಹಿಮಾಚಲ ಪ್ರದೇಶದ ಶಿಮ್ಲಾ, ಡಾರ್ಜಿಲಿಂಗ್ ಆಗಬಾರದು. ಬೆಟ್ಟದ ಮೂಲ ಪಾರಂಪರಿಕತೆ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ದೇವಸ್ಥಾನದ ಸುತ್ತ ಅನಧಿಕೃತ ಕಟ್ಟಡಗಳು ತಲೆ ಎತ್ತದಂತೆ ನೋಡಿಕೊಳ್ಳಬೇಕು ಎಂದರು. ಸೋಮಣ್ಣ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಚಾಮುಂಡಿಬೆಟ್ಟದ ಸುತ್ತಲಿನ ಪ್ರದೇಶಗಳನ್ನು ಸ್ವಚ್ಛ ಮಾಡಿಸಲಾಯಿತು. ಆ ವೇಳೆ ಎರಡು ಟ್ರಕ್ ಬಿಯರ್ ಬಾಟಲ್‌ಗಳು ಸಿಕ್ಕಿದ್ದವು. ಈ ಕಾರಣದಿಂದ ಎಂದಿಗೂ ಚಾಮುಂಡಿಬೆಟ್ಟದ ಪಾವಿತ್ರ್ಯತೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕಿದೆ ಎಂದು ಹೇಳಿದರು. ಚಾಮುಂಡಿಬೆಟ್ಟದ ಅಭಿವೃದ್ಧಿಗೆ ರಾಜ್ಯ ಸರ್ಕಾರವೇನು ಹಣ ಕೊಡಬೇಕಿಲ್ಲ. ದೇವಸ್ಥಾನದ ಹುಂಡಿಯ ಬಾಬ್ತಿನಲ್ಲಿ 130 ಕೋಟಿ ರೂಪಾಯಿ ಹಣ ಇದೆ. ಜೊತೆಗೆ ಕೇಂದ್ರ ಸರ್ಕಾರ ಪ್ರಸಾದ ಯೋಜನೆಯಲ್ಲಿ 45 ಕೋಟಿ ನೀಡಿದೆ. ಈ ಹಣದಿಂದಲೇ ಚಾಮುಂಡಿಬೆಟ್ಟವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಬಹುದು ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಮೈಸೂರಿನ ಅಭಿವೃದ್ಧಿ ಸಂಬಂಧ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚೆ ಮಾಡುತ್ತೇನೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

# ಉದಯಗಿರಿ ಪೊಲೀಸರ ಬಿಗಿ ರಾತ್ರಿ ಗಸ್ತು: ದುಷ್ಕರ್ಮಿಗಳಿಗೆ ಎಚ್ಚರಿಕೆ ಸಂದೇಶ



ಮೈಸೂರು, ಜು.18(ಎಂಕೆ)– ರಾತ್ರಿ ವೇಳೆ ದುಷ್ಕೃತ್ಯ ನಡೆಸುವ ಕಿಡಿಗೇಡಿಗಳಿಗೆ ಎಚ್ಚರಿಕೆ ಸಂದೇಶ ನೀಡಿರುವ ಉದಯಗಿರಿ ಠಾಣೆ ಪೊಲೀಸರು, ರಾತ್ರಿ ಗಸ್ತನ್ನು ಬಿಗಿಗೊಳಿಸುವ ಮೂಲಕ ಸಾರ್ವಜನಿಕರಿಗೆ ಅಭಯ ನೀಡಿದ್ದಾರೆ.

ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ ನೇತೃತ್ವದಲ್ಲಿ ಉದಯಗಿರಿ ಠಾಣೆ ವ್ಯಾಪ್ತಿಯ ತ್ರಿವೇಣಿ ವೃತ್ತದ ಬಳಿ ಪೊಲೀಸ್ ಸಿಬ್ಬಂದಿಗೆ ಕರ್ತವ್ಯ ಹಂಚಿಕೆ ಮಾಡುವ ಮೂಲಕ ಸಾರ್ವಜನಿಕರಿಗೆ ಅಭಯ ನೀಡಲಾಯಿತು. ಸಿಬ್ಬಂದಿಗಳು ತಮ್ಮ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ ಬಗ್ಗೆ ಎಚ್ಚರಿಕೆ ವಹಿಸಬೇಕು. ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸುವಂತೆ ತಿಳಿಸಿದ್ದಾರೆ.

ಇದುವರೆಗೆ ನೈಟ್ ಬೀಟ್ ಕರ್ತವ್ಯ ನಿಯೋಜನೆ ಕಾರ್ಯ ಠಾಣೆಯಲ್ಲೇ ನಡೆಯುತ್ತಿತ್ತು. ಸೂಕ್ಷ್ಮ ಪ್ರದೇಶಗಳಲ್ಲಿ ಸಿಬ್ಬಂದಿಗಳ ನಿಯೋಜನೆ ಮಾಡುವ ಮೂಲಕ ಸಾರ್ವಜನಿಕರಿಗೆ ಪೊಲೀಸರ ಕಾರ್ಯ ವೈಖರಿ ಬಗ್ಗೆ ಭರವಸೆ ಹುಟ್ಟಿಸುವ ಕೆಲಸ ಮಾಡಲಾಗುತ್ತಿದೆ ಎಂದು ಉದಯಗಿರಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಪಿ.ಕೆ.ರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಸಬ್ ಇನ್ಸ್‌ಪೆಕ್ಟರ್ ಸುನಿಲ್ ಮತ್ತಿತರರಿದ್ದರು.

# 'ಗೃಹಲಕ್ಷ್ಮಿ'ಗೆ ಇಂದಿನಿಂದ ಅರ್ಜಿ ಸ್ವೀಕಾರ

**ಬೆಂಗಳೂರು:** ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ನಾಳೆ ಅಂದರೆ ಜುಲೈ 19ರಿಂದ ಅರ್ಜಿ ಸ್ವೀಕಾರ ಆರಂಭವಾಗ ಲಿದೆ. ಇದು ಕಾಂಗ್ರೆಸ್ ಸರ್ಕಾರದ ನಾಲ್ಕನೇ ಗ್ಯಾರಂಟಿ ಯೋಜನೆಯಾಗಿದ್ದು, ಈ ಯೋಜನೆಯಡಿ ಮನೆ ಯೊಡತಿಯು ತಿಂಗಳಿಗೆ 2000 ರೂ. ಪಡೆಯಲಿದ್ದಾಳೆ. ಯೋಜನೆಯ ನೋಂದಣಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ ಹಾಗೂ ಅರ್ಜಿ ಸಲ್ಲಿಸಲು ಡೆಡ್‌ಲೈನ್ ಕೂಡ ನಿಗದಿ ಪಡಿಸಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕ್ಕರ್ ತಿಳಿಸಿದ್ದಾರೆ.

ರೇಷನ್ ಕಾರ್ಡ್‌ನಲ್ಲಿ ನಮೂದಿಸಿರುವ ಮನೆಯ ಹಿರಿಯ ಮಹಿಳೆಯು ಈ ಯೋಜನೆಯ ಫಲಾನುಭವಿಯಾಗಲಿದ್ದಾರೆ. ಎಪಿಎಲ್, ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡ್‌ನವರು ಇದಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಫಲಾನುಭವಿ ಅಥವಾ ಅವಳ ಪತಿ ತೆರಿಗೆ ಅಥವಾ ಜಿಎಸ್‌ಟಿ ಪಾವತಿದಾರು ಆಗಿರಬಾರದು. ಸುಮಾರು 1.28 ಕೋಟಿ ಕುಟುಂಬಗಳು ಈ ಯೋಜನೆ ಪ್ರಯೋಜನ ಪಡೆಯಲಿದ್ದಾರೆ. ಆಗಸ್ಟ್ 16 ರಿಂದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ಹಣ ವರ್ಗಾವಣೆ ಆಗಲಿದೆ. ಫಲಾನುಭವಿಯು ತನ್ನ ಬ್ಯಾಂಕ್ ಖ್ಯಾತೆಯೊಂದಿಗೆ ಲಿಂಕ್ ಮಾಡಿರುವ ರೇಷನ್ ಕಾರ್ಡ್ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ಸಂಖ್ಯೆಯನ್ನು ನೀಡಬೇಕು. ಒಂದು ವೇಳೆ ಇನ್ನೊಂದು ಬ್ಯಾಂಕ್ ಖಾತೆಗೆ ಹಣವನ್ನು ಸ್ವೀಕರಿಸಲು ಬಯಸಿದರೆ, ನೋಂದಣಿ ಸಮಯದಲ್ಲಿ ಅವಳು ಆ ಖಾತೆಯ ಪಾಸ್ ಪುಸ್ತಕದೊಂದಿಗೆ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಬೇಕು.

2,000 ರೂ. ನಗದು ಹಣವನ್ನು ಫಲಾನುಭವಿಯ ಆಧಾರ್ ಸಂಖ್ಯೆಗೆ ಲಿಂಕ್ ಮಾಡಿದ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು ಆ.16 ರಿಂದ ನೇರ ಲಾಭ ವರ್ಗಾವಣೆ (ಡಿಬಿಟಿ) ಮೂಲಕ ವರ್ಗಾಯಿಸಲಾಗುತ್ತದೆ. ಫಲಾನುಭವಿಯು ಹೊಸ ಬ್ಯಾಂಕ್ ಖಾತೆಯನ್ನು ಒದಗಿಸಿದ್ದರೆ (ಆಕೆಯ ಆಧಾರ್ ಸಂಖ್ಯೆಗೆ ಲಿಂಕ್ ಮಾಡಲಾದ ಖಾತೆಯನ್ನು ಹೊರತುಪಡಿಸಿ), ಮೊತ್ತವನ್ನು ಆರ್‌ಟಿಜಿಎಸ್ ಮೂಲಕ ವರ್ಗಾಯಿಸಲಾಗುತ್ತದೆ ಎಂದು ಸಚಿವರು ಹೇಳಿದರು.

**ಅರ್ಜಿ ಸಲ್ಲಿಕೆ ಎಲ್ಲಿ ಹೇಗೆ:** ಗೃಹಲಕ್ಷ್ಮಿ ಯೋಜನೆಗೆ ಸರ್ಕಾರ ನಿಗದಿ ಪಡಿಸಿದ ಗ್ರಾಮ ಒನ್, ಕರ್ನಾಟಕ ಒನ್ ಬೆಂಗಳೂರು ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ನಿಮ್ಮ ಹತ್ತಿರದಲ್ಲಿರುವ ಈ ಯಾವುದಾದರೂ ಒಂದು ಕೇಂದ್ರಕ್ಕೆ ತೆರಳಿ ನೀವು ಅರ್ಜಿ ಸಲ್ಲಿಸಬಹುದು. ನಿಗದಿತ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿಕೊಂಡಾಗ ಮಂಜೂರಾತಿ ಪತ್ರವನ್ನು ನೀಡಲಾಗುವುದು.

**ಬೇಕಾಗುವ ಅಗತ್ಯ ದಾಖಲೆಗಳು**

▸ ಆಧಾರ್ ಕಾರ್ಡ್ ▸ ರೇಷನ್ ಕಾರ್ಡ್
▸ ಬ್ಯಾಂಕ್ ಪಾಸ್ ಪುಸ್ತಕ

ಯೋಜನೆಯ ಫಲಾನುಭವಿಗಳು ಬ್ಯಾಂಕ್ ಖಾತೆ ಯೊಂದಿಗೆ ಆಧಾರ್ ಕಾರ್ಡ್ ಜೋಡಣೆ ಮಾಡುವುದು ಕಡ್ಡಾಯವಾಗಿದೆ.

**ಸಹಾಯವಾಣಿ:** ನೊಂದಣಿಗೆ ನಿಗದಿಪಡಿಸಿರುವ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಸಂಬಂಧಪಟ್ಟಂತೆ ನೀವು ಸಹಾಯವಾಣಿ ಸಂಖ್ಯೆ 1902 ಕರೆ ಮಾಡಿ ತಿಳಿದುಕೊಳ್ಳಬಹುದು. ಇಲ್ಲದೇ ಇದ್ದರೆ 8147500 500ಗೆ ಎಸ್‌ಎಂಎಸ್ ಅಥವಾ ವಾಟ್ಸ್ ಆಪ್ ಮೂಲಕ ಸಂದೇಶ ಕಳುಹಿಸಿ ವಿವರ ಪಡೆದುಕೊಳ್ಳಬಹುದು.

# ಮೈಸೂರು ನಗರ ಬಸ್ ನಿಲ್ದಾಣದ ಬಳಿ ಸಯ್ಯಾಜಿರಾವ್ ರಸ್ತೆ ದಾಟಲು ನಿತ್ಯವೂ ವಿದ್ಯಾರ್ಥಿಗಳ ಹರಸಾಹಸ

**ಹಲವು ವರ್ಷಗಳಿಂದ ಇದರ ಬಗ್ಗೆ ಸಾರ್ವಜನಿಕರು ದೂರುತ್ತಿದ್ದರೂ ಎಚ್ಚೆತ್ತುಕೊಳ್ಳದ ಮಹಾ ಮೈಸೂರು ಜಿಲ್ಲಾಡಳಿತ**



ಮೈಸೂರು, ಜು.18(ಎಸ್‌ಬಿಡಿ)– ಮೈಸೂರು ನಗರ ಬಸ್ ನಿಲ್ದಾಣದ ಬಳಿ ವಿಪರೀತ ವಾಹನ ದಟ್ಟಣೆಯಿಂದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಿತ್ಯ ಹೈರಾಣಾಗುತ್ತಿದ್ದಾರೆ.

ಸಯ್ಯಾಜಿರಾವ್ ರಸ್ತೆ ಹಾಗೂ ಜಗನ್ಮೋಹನ ಅರಮನೆ ರಸ್ತೆ ಜಂಕ್ಷನ್‌ನಲ್ಲಿ ನಿರಂತರವಾಗಿ ಸಂಚರಿಸುವ ವಾಹನಗಳ ನಡುವೆ ವಿದ್ಯಾರ್ಥಿಗಳು ನುಸುಳಿಕೊಂಡು ರಸ್ತೆ ದಾಟುವ ದೃಶ್ಯ ಭಯ ಹುಟ್ಟಿಸುತ್ತದೆ. ಒಂದರ ಹಿಂದೊಂದು ಸಾಗುವ ಸಿಟಿ ಬಸ್‌ಗಳು, ಕಾರು, ಆಟೋ, ದ್ವಿಚಕ್ರ ವಾಹನಗಳ ಮಧ್ಯೆ ಜೀವ ಬಿಗಿ ಹಿಡಿದುಕೊಂಡು ಓಡಾಡುತ್ತಾರೆ. ಶಾಲಾ–ಕಾಲೇಜು ಆರಂಭವಾಗುವ ಹಾಗೂ ಮುಕ್ತಾಯವಾದ ವೇಳೆಯಲ್ಲಂತೂ ಈ ಜಂಕ್ಷನ್‌ನಲ್ಲಿ ಅದ್ವಾನ ಉಂಟಾಗುತ್ತದೆ. ಪಾದಚಾರಿಗಳು ಮಾತ್ರವಲ್ಲ ವಾಹನ ಸವಾರರೂ ವಿಪರೀತ ದಟ್ಟಣೆಯಿಂದ ಹೈರಾಣಾಗುತ್ತಾರೆ.

ಈ ರಸ್ತೆಯಲ್ಲಿ ಬೆಳಗ್ಗೆ ಹಾಗೂ ಸಂಜೆ ಹೆಚ್ಚು ವಾಹನ ಸಂಚಾರವಿರುತ್ತದೆ. ಇದರ ನಡುವೆ ನಗರ ಬಸ್ ನಿಲ್ದಾಣದಿಂದ ಎರಡು ಮಾರ್ಗದಲ್ಲಿ ಬಸ್‌ಗಳು ನಿರಂತರವಾಗಿ ರಸ್ತೆಗೆ ತಿರುವು ಪಡೆಯುತ್ತಿರುತ್ತವೆ. ಇದರಿಂದ ಕೆ.ಆರ್.ವೃತ್ತದವರೆಗೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಇದರ ನಡುವೆ ಜಗನ್ಮೋಹನ ರಸ್ತೆಯಿಂದ ಸಿಟಿ ಬಸ್ ನಿಲ್ದಾಣಕ್ಕೆ ಹೋಗಲು ಸಾವಿರಾರು ವಿದ್ಯಾರ್ಥಿಗಳು ರಸ್ತೆ ದಾಟುತ್ತಾರೆ. ಶಾಲಾ ಮಕ್ಕಳೂ ಕೂಡ ಈ ಅಪಾಯಕಾರಿ ಪರಿಸ್ಥಿತಿಯಲ್ಲೇ ರಸ್ತೆ ದಾಟಿ, ಸಿಟಿ ಬಸ್ ನಿಲ್ದಾಣಕ್ಕೆ ತೆರಳುತ್ತಾರೆ.

ಜಗನ್ಮೋಹನ ರಸ್ತೆಯಲ್ಲಿ ಬರುವವರು ಕೆ.ಆರ್.ವೃತ್ತದ ಬಳಿ ಜೀಬ್ರಾ ಕ್ರಾಸಿಂಗ್‌ನಲ್ಲಿ ರಸ್ತೆ ದಾಟಿ, ಬಸ್ ನಿಲ್ದಾಣಕ್ಕೆ ಹೋಗಬಹುದು. ಆದರೆ ಹೀಗೆ ಸುತ್ತಿಕೊಂಡು ಹೋಗುವಷ್ಟರಲ್ಲಿ ಬಸ್ ಹೊರಟು ಹೋಗುತ್ತದೆ ಎಂಬ ಧಾವಂತದಲ್ಲಿ ವಾಹನ ದಟ್ಟಣೆ ನಡುವೆಯೇ ನುಸುಳುತ್ತಾರೆ. ಈ ಜಂಕ್ಷನ್‌ನಲ್ಲಿ ಹೋಂಗಾರ್ಡ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದರೂ ಅವರು ಅಸಹಾಯಕರಾಗಿ ನಿಂತಿರುತ್ತಾರೆ. ವಾಹನಗಳನ್ನು ತಡೆದು ಪಾದಚಾರಿಗಳಿಗೆ ರಸ್ತೆ ದಾಟಲು ಅನುವು ಮಾಡಿಕೊಟ್ಟರೆ ಕೆಲವೇ ಸೆಕೆಂಡ್‌ಗಳಲ್ಲಿ ಸಿಗ್ನಲ್‌ವರೆಗೂ ವಾಹನಗಳು ಸಾಲುಗಟ್ಟಿ ನಿಲ್ಲುತ್ತವೆ. ಅತ್ತ ಪಾದಚಾರಿಗಳನ್ನೂ ನಿಯಂತ್ರಿಸಲಾಗುವುದಿಲ್ಲ. ಈ ಪರಿಸ್ಥಿತಿಯನ್ನು ನಿರ್ವಹಣೆ ಮಾಡಲಾಗದೆ ಸುಮ್ಮನೆ ನಿಂತಿರುತ್ತಾರೆ.

**ಅಪಘಾತದ ಆತಂಕ:** ಇದು ಒಂದು ದಿನದ ಸಮಸ್ಯೆಯಲ್ಲ. ಹಲವು ವರ್ಷಗಳಿಂದ ಇದೇ ಪರಿಸ್ಥಿತಿ ಇದೆ. ವಿದ್ಯಾರ್ಥಿಗಳು ಸೇರಿದಂತೆ ಎಲ್ಲಾ ಪಾದಚಾರಿಗಳು ಹಾಗೂ ವಾಹನ ಸವಾರರು ತೊಂದರೆ ಅನುಭವಿಸುತ್ತಲೇ ಇದ್ದಾರೆ. ಎಲ್ಲಾ ಸಮಯವೂ ಒಂದೇ ರೀತಿ ಇರುವುದಿಲ್ಲ. ಅರಮನೆಗೆ ಹೋಗುವ ಪ್ರವಾಸಿ ವಾಹನಗಳೂ ಈ ಮಾರ್ಗದಲ್ಲಿ ಸಂಚರಿಸುವುದರಿಂದ ಈ ಜಾಗದ ಪರಿಸ್ಥಿತಿ ತಿಳಿಯದೆ ವೇಗವಾಗಿ ಬಂದು ರಸ್ತೆ ದಾಟುವವರಿಗೆ ಡಿಕ್ಕಿ ಹೊಡೆದರೆ ಏನು ಗತಿ.

**ಪರಿಹಾರ ಯಾವಾಗ:** ಜಗನ್ಮೋಹನ ಅರಮನೆ ರಸ್ತೆಯಿಂದ ನಗರ ಬಸ್ ನಿಲ್ದಾಣಕ್ಕೆ ಅಂಡರ್‌ಪಾಸ್ ಕಲ್ಪಿಸಿಕೊಡುವ ಉದ್ದೇಶದೊಂದಿಗೆ ಈ ಹಿಂದೆ ನಗರ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದರು. ಆದರೆ ಆ ನಿಟ್ಟಿನಲ್ಲಿ ಯಾವುದೇ ಪ್ರಕ್ರಿಯೆ ಮುಂದುವರೆಯಲಿಲ್ಲ. ಈಗಲಾದರೂ ಈ ಬಗ್ಗೆ ಗಮನಹರಿಸಬೇಕು. ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಜಿಲ್ಲಾಧಿಕಾರಿಗಳೇ ಕ್ರಮಕ್ಕೆ ಮುಂದಾಗಬೇಕು. ಪಾಲಿಕೆ ಆಯುಕ್ತರು, ಕೆಎಸ್‌ಆರ್‌ಟಿಸಿ ಅಧಿಕಾರಿಗಳು, ನಗರ ಪೊಲೀಸ್ ಆಯುಕ್ತರು ಸೇರಿದಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

**"** ಸಯ್ಯಾಜಿರಾವ್ ರಸ್ತೆ ಹಾಗೂ ಜಗನ್ಮೋಹನ ಅರಮನೆ ರಸ್ತೆ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ನಿರ್ಮಿಸುವ ಸಂಬಂಧ ಗುರುದತ್ ಹೆಗ್ಡೆ ಪಾಲಿಕೆ ಆಯುಕ್ತರಾಗಿದ್ದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ವಾಣಿ ವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಲಾಗಿತ್ತು. ಅಂದಿನ ಅಭಿವೃದ್ಧಿ ಅಧಿಕಾರಿ 2.50 ಕೋಟಿ ರೂ. ಅಂದಾಜು ಪಟ್ಟಿ ತಯಾರಿಸಿದ್ದರು. ತಸ್ನೀಂ ಮೇಯರ್ ಆಗಿದ್ದಾಗ ಬಜೆಟ್‌ನಲ್ಲೂ ಅನುದಾನ ಮೀಸಲಿಡಲಾಗಿತ್ತು. ಆದರೆ ಅಧಿಕಾರಿಗಳು ಕ್ರಿಯಾಯೋಜನೆ ಮಾಡುವಲ್ಲಿ ವಿಫಲರಾಗಿದ್ದರಿಂದ ಅಂಡರ್‌ಪಾಸ್ ಯೋಜನೆ ನೆನೆಗುದಿಗೆ ಬಿತ್ತು.


–ಜಿ.ವಿ.ಮಂಜುನಾಥ್, ಕಾರ್ಪೊರೇಟರ್

### ಕೊಡಗು ಜಿಲ್ಲಾಡಳಿತ ಭವನದ ತಡೆಗೋಡೆ ಕಾಮಗಾರಿ ಕಳಪೆ, ಅವೈಜ್ಞಾನಿಕ

# ಲೋಕಾಯುಕ್ತ ಅಧಿಕಾರಿಗಳಿಂದ ತನಿಖೆ ಆರಂಭ

- ತಾಂತ್ರಿಕಾಧಿಕಾರಿಗಳಿಂದ ಸ್ಥಳ ಪರಿಶೀಲನೆ, ಮಾಹಿತಿ ಸಂಗ್ರಹ
- ಸ್ಥಳದ ಮಣ್ಣು, ಜೆಲ್ಲಿ, ಎಂ–ಸ್ಯಾಂಡ್ ಸಂಗ್ರಹಿಸಿದ ಅಧಿಕಾರಿಗಳು





ಮಡಿಕೇರಿ, ಜು.18– ಕೊಡಗು ಜಿಲ್ಲಾಡಳಿತ ಭವನದ ಬಹುಕೋಟಿ ವೆಚ್ಚದ ತಡೆಗೋಡೆ ಕಾಮಗಾರಿ ಕಳಪೆ ಮತ್ತು ಅವೈಜ್ಞಾನಿಕವಾಗಿದೆ ಎಂಬ ದೂರನ್ನು ಆಧರಿಸಿ ಲೋಕಾಯುಕ್ತ ಅಧಿಕಾರಿಗಳು ಮಡಿಕೇರಿಗೆ ಆಗಮಿಸಿ ತಡೆಗೋಡೆ ಪರಿಶೀಲನೆ ನಡೆಸಿದರು.

ಬೆಂಗಳೂರು ಲೋಕಾಯುಕ್ತದ ತಾಂತ್ರಿಕ ವಿಭಾಗದ ಕಾರ್ಯಪಾಲಕ ಅಭಿಯಂತರ ಡಿ.ರವಿಶಂಕರ್, ಲೋಕಾಯುಕ್ತದ ಗುಣಮಟ್ಟ ಖಾತ್ರಿ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಡಿ.ಎಂ. ಗಿರೀಶ್, ಕಿರಿಯ ಅಭಿಯಂತರ ಸುಬ್ಬಯ್ಯ ಹಾಗೂ ವಿನಯ್ ಅವರುಗಳ ತಂಡ ದೂರುದಾರ ತೆನ್ನೀರಾ ಮೈನಾ ಅವರ ಸಮ್ಮುಖದಲ್ಲಿ ಕಾಮಗಾರಿಯನ್ನು ಪರಿಶೀಲನೆ ನಡೆಸಿತು. ಗುತ್ತಿಗೆದಾರರು ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಂದ ಕಾಮಗಾರಿಯ ಮಾಹಿತಿ ಪಡೆದರು.

ತಡೆಗೋಡೆ ವಿನ್ಯಾಸ, ಬಳಸಲಾದ ತಾಂತ್ರಿಕತೆ, ಕಾಂಕ್ರೀಟ್ ಸ್ಲ್ಯಾಬ್ ಮಾದರಿ, ಜಿಯೋ ಫ್ಯಾಬ್ರಿಕೇಷನ್, ನೈಲ್ಸ್, ಮೆಷ್ ಮತ್ತಿತರ ವಿಚಾರಗಳ ಕುರಿತು ದಾಖಲಾತಿಗಳನ್ನು ಪರಿಶೀಲನೆಗೆ ಒಳಪಡಿಸಿದರು. ಕಾಮಗಾರಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿರುವ ಹಣಕಾಸಿನ ದಾಖಲಾತಿಯನ್ನು ಒದಗಿಸುವಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಲೋಕಾಯುಕ್ತ ಅಧಿಕಾರಿಗಳು ಸೂಚಿಸಿದರು.

**ಬೆದರಿಕೆ ಆರೋಪ:** ಲೋಕಾಯುಕ್ತ ಅಧಿಕಾರಿಗಳ ಜೊತೆ ಮಾತನಾಡಿದ ದೂರುದಾರ ತೆನ್ನೀರಾ ಮೈನಾ, ಲೋಕೋಪಯೋಗಿ ಅಧಿಕಾರಿಗಳು ತಮ್ಮ ಪ್ರಭಾವ ಬಳಸಿ, ತಡೆಗೋಡೆ ಮೂಲ ಗುತ್ತಿಗೆದಾರರಿಗೆ ಬೆದರಿಕೆ ಒಡ್ಡಿ ಕಾಮಗಾರಿಯನ್ನು ಸಬ್ ಕಂಟ್ರಾಕ್ಟ್ ನೀಡುವಂತೆ ಮಾಡಿದ್ದಾರೆ. ಪರಿಣಾಮವಾಗಿ ಕಾಮಗಾರಿಗೆ ಬೇಕಾಗುವ ಕಚ್ಚಾ ವಸ್ತುಗಳ ಪೂರೈಕೆ, ತಡೆಗೋಡೆಗೆ ಮಣ್ಣು ತುಂಬಿಸುವುದು ಸೇರಿದಂತೆ ಇತರೆ ಕಾಮಗಾರಿಗಳನ್ನು ಬೇರೆ ಗುತ್ತಿಗೆದಾರರು ನಿರ್ವಹಿಸಿದ್ದಾರೆ. ಪರಿಣಾಮವಾಗಿ ಕಳೆದ ವರ್ಷದ ಜುಲೈ ತಿಂಗಳಲ್ಲಿ ತಡೆಗೋಡೆ ಸ್ಲ್ಯಾಬ್‌ಗಳು ಒಡೆದು ಇಡೀ ತಡೆಗೋಡೆಯೇ ಅಪಾಯಕ್ಕೆ ಸಿಲುಕುವಂತಾಯಿತು ಎಂದು ಲೋಕಾಯುಕ್ತ ಅಧಿಕಾರಿಗಳಿಗೆ ವಿವರಿಸಿದರು.

**ಅವೈಜ್ಞಾನಿಕ ಕಾಮಗಾರಿ:** ತಡೆಗೋಡೆ ಕಾಮಗಾರಿಯನ್ನು ಕೊಡಗಿನ ಹವಾಮಾನ ಅನುಸರಿಸಿ ಮಾಡಲಾಗಿಲ್ಲ. ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸುವ ಸಂದರ್ಭ ವಿನ್ಯಾಸದ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ತಡೆಗೋಡೆ ಮತ್ತು ಸ್ಲ್ಯಾಬ್ ನಡುವಿನ ಅಂತರಕ್ಕೆ ಬೇಕಾಬಿಟ್ಟಿಯಾಗಿ ಮಣ್ಣು ತುಂಬಿಸಲಾಗಿದ್ದು ಅದನ್ನು ಗಟ್ಟಿಗೊಳಿಸಿಲ್ಲ. ತುಂಬಿಸಲಾದ ಮಣ್ಣಿನ ಸಾಂದ್ರತೆ ಶೇ.96ಕ್ಕಿಂತಲೂ ಕಡಿಮೆ ಇದ್ದು, ಜಿಯೋ ಫ್ಯಾಬ್ರಿಕೇಷನ್ ಪ್ರಕ್ರಿಯೆ ನಡೆಸಿಲ್ಲ. ಸ್ಲ್ಯಾಬ್‌ನ ಫಿಲ್ಟರ್ ಮೀಡಿಯಾ ಕ್ರಮಬದ್ಧವಾಗಿಲ್ಲ. ಸ್ಲ್ಯಾಬ್ ಪ್ಯಾನೆಲ್, ನೇಯಿಲಿಂಗ್, ರಾಡ್ ಅಳವಡಿಕೆ, ಬೆಲ್ಟ್, ಕೇಬಲ್ ಅಳವಡಿಕೆ ಕ್ರಮಬದ್ಧವಾಗಿಲ್ಲ ಎಂದು ತೆನ್ನೀರಾ ಮೈನಾ ಲೋಕಾಯುಕ್ತ ಅಧಿಕಾರಿಗಳ ಗಮನ ಸೆಳೆದರು. ಈ ಸಂದರ್ಭ ಸ್ಥಳದಲ್ಲಿದ್ದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ತಡೆಗೋಡೆ ಸ್ಥಳದಲ್ಲಿ ನೀರಿನ ಒರತೆ ಇದ್ದದ್ದೇ ತಡೆಗೋಡೆ ಕುಸಿಯಲು ಕಾರಣ ಎಂದು ಸಬೂಬು ನೀಡಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ದೂರುದಾರ ಮೈನಾ, ಅಲ್ಲಿ ಯಾವುದೇ ನೀರಿನ ಒರತೆ ಇರಲಿಲ್ಲ, ಇದ್ದರೂ ಕೂಡ ಅದಕ್ಕೆ ತಕ್ಕಂತೆ ವೈಜ್ಞಾನಿಕವಾಗಿ ಕಾಮಗಾರಿ ನಿರ್ವಹಿಸಿಲ್ಲ ಎಂದು ಆರೋಪಿಸಿದರು.

**ಪ್ರಯೋಗಾಲಯದಲ್ಲಿ ಮಣ್ಣು ಪರೀಕ್ಷೆ:** ಕಾಮಗಾರಿ ಕ್ರಮಬದ್ಧವಾಗಿಲ್ಲ ಎಂಬ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ತಡೆಗೋಡೆಗೆ ತುಂಬಿಸಿದ ಮಣ್ಣನ್ನು ಪರಿಶೀಲನೆ ನಡೆಸಲು ಸ್ಥಳದಿಂದ ಸಂಗ್ರಹಿಸಲಾಯಿತು. ದೂರುದಾರ ಮೈನಾ ಸೂಚಿಸಿದ ಸ್ಥಳದಲ್ಲಿ ಒಟ್ಟು 2 ಗುಂಡಿಗಳನ್ನು ಮಾಡಿ ಲೋಕಾಯುಕ್ತ ಅಧಿಕಾರಿಗಳೇ ವೈಜ್ಞಾನಿಕವಾಗಿ ಮಣ್ಣನ್ನು ಸಂಗ್ರಹಿಸಿದರು. ಮಾತ್ರವಲ್ಲದೇ ತಡೆಗೋಡೆಗೆ ಅಳವಡಿಸುವ ಜೆಲ್ಲಿ, ಎಂ.ಸ್ಯಾಂಡ್ ಮಿಶ್ರಿತ ಫಿಲ್ಟರ್ ಮೀಡಿಯಾವನ್ನು ಕೂಡ ಅಧಿಕಾರಿಗಳು ಸಂಗ್ರಹಿಸಿದರು. ಈ ಸ್ಯಾಂಪಲ್‌ಗಳನ್ನು ಬೆಂಗಳೂರು ಲೋಕಾಯುಕ್ತದ ತಾಂತ್ರಿಕ ವಿಭಾಗದ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಆ ಮೂಲಕ ಮಣ್ಣಿನ ಸಾಂದ್ರತೆ, ಕಾಮಗಾರಿಗೆ ಬಳಸಲ್ಪಟ್ಟ ಕಚ್ಚಾವಸ್ತುಗಳ ಗುಣಮಟ್ಟ ಪರಿಶೀಲನೆಗೆ ಒಳಪಡಿಸಲಾಗುತ್ತದೆ ಎಂದು ಲೋಕಾಯುಕ್ತ ಅಧಿಕಾರಿಗಳು ದೂರುದಾರ ತೆನ್ನೀರಾ ಮೈನಾ ಅವರಿಗೆ ವಿವರಿಸಿ, ದಾಖಲಾತಿಗಳಿಗೆ ಸಹಿ ಪಡೆದರು.

ಈ ಸಂದರ್ಭ ಲೋಕೋಪಯೋಗಿ ಇಲಾಖೆ ನಿವೃತ್ತ ಕಾರ್ಯಪಾಲಕ ಅಭಿಯಂತರ ಮದನ್ ಮೋಹನ್, ಕೊಡಗು ಜಿಲ್ಲಾ ಲೋಕೋಪಯೋಗಿ ಇಲಾಖೆ ಕಾರ್ಯಪಾಲಕ ಅಭಿಯಂತರ ಸಿದ್ದೇಗೌಡ, ಇಲಾಖೆ ಇಂಜಿನಿಯರ್‌ಗಳಾದ ಶಿವರಾಂ, ಡಿ.ನಾಗರಾಜು, ಧ್ರುವರಾಜ್, ಪಿ.ಸತೀಶ್, ಕೆ.ಸಿ.ಪ್ರಮೋದ್, ನಗರ ಸಭೆ ಮಾಜೀ ಅಧ್ಯಕ್ಷ ಹೆಚ್.ಎಂ. ನಂದಕುಮಾರ್, ಪುಷ್ಪ ಪೂಣಚ್ಚ, ಕಳಪೆ ಕಾಮಗಾರಿ ಸಂಬಂಧ ಈಗಾಗಲೇ ಅಮಾನತ್ತಾಗಿರುವ ಕಿರಿಯ ಇಂಜಿನಿಯರ್ ದೇವರಾಜ್ ಮತ್ತಿತರರು ಹಾಜರಿದ್ದರು.

## ಗೊಂದಲ ಮೂಡಿಸಬೇಡಿ

ತಡೆಗೋಡೆ ಕಾಮಗಾರಿ ಕುರಿತು ಲೋಕಾಯುಕ್ತ ಅಧಿಕಾರಿಗಳು ಗುತ್ತಿಗೆದಾರರು ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ವಿವಿಧ ಪ್ರಶ್ನೆಗಳನ್ನು ಮುಂದಿಟ್ಟರು. ಈ ವೇಳೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಮತ್ತು ಗುತ್ತಿಗೆದಾರರು ದಾಖಲಾತಿಗಳನ್ನು ಮುಂದಿಟ್ಟು ವ್ಯತಿರಿಕ್ತವಾಗಿ ಮಾಹಿತಿ ನೀಡಿದರು. ಈ ಸಂದರ್ಭ ಲೋಕಾಯುಕ್ತ ಅಧಿಕಾರಿ ಡಿ. ರವಿಶಂಕರ್ ಮತ್ತು ಡಿ.ಎಂ. ಗಿರೀಶ್ ಅವರುಗಳು ಗೊಂದಲದ ಮಾಹಿತಿ ಏಕೆ ನೀಡುತ್ತೀರಾ, ಕಾಮಗಾರಿಯ ಮಾಹಿತಿ ಮಾತ್ರವೇ ಸಮರ್ಪಕವಾಗಿ ನೀಡಿ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಾಮಗಾರಿಯ ಪ್ರತಿ ಹಂತದ ಪರಿಶೀಲನೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗುತ್ತಿತ್ತು

## ನೆಲಜಿ ಗ್ರಾಮದಲ್ಲಿ ತೋಟಗಳಿಗೆ ಕಾಡಾನೆಗಳ ಲಗ್ಗೆ




ಮಡಿಕೇರಿ, ಜು.18– ನಾಪೋಕ್ಲು ಸಮೀಪದ ಬಲ್ಲಮಾವಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲಜಿ ಗ್ರಾಮದಲ್ಲಿ ತೋಟಗಳಿಗೆ ಕಾಡಾನೆಗಳ ಹಿಂಡು ಲಗ್ಗೆ ಇಟ್ಟು ಬೆಳೆಗಳನ್ನು ತುಳಿದು ನಾಶಪಡಿಸಿವೆ.

ನೆಲಜಿ ಗ್ರಾಮದ ನಿವಾಸಿ ಎಂ.ಎಂ. ಶಾರದ ಎಂಬುವರ ತೋಟಕ್ಕೆ ದಾಳಿ ಮಾಡಿದ ಕಾಡಾನೆಗಳ ಹಿಂಡು ತೋಟದಲ್ಲಿ ಬೆಳೆದಿದ್ದ ಕಾಫಿ, ತೆಂಗು, ಬಾಳೆ ಸೇರಿದಂತೆ ಇನ್ನಿತರ ಫಸಲು ಭರಿತ ಗಿಡಗಳನ್ನು ತುಳಿದು ಭಾರೀ ನಷ್ಟ ಉಂಟು ಮಾಡಿವೆ. ಕಳೆದ ಕೆಲವು ದಿನಗಳ ಹಿಂದೆ ನರಿಯಂದಡ ಗ್ರಾಪಂ ವ್ಯಾಪ್ತಿಯ ಚೆಯ್ಯಂಡಾಣೆ, ಚೇಲಾವರ, ಮರಂದೋಡ ಹಾಗೂ ಕಕ್ಕಬ್ಬೆ, ಕುಂಜಿಲ ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆಗಳ ಹಿಂಡು ತೋಟಗಳಲ್ಲಿ ದಾಂಧಲೆ ನಡೆಸಿದ್ದವು. ಇದೀಗ ಕಾಡಾನೆಗಳು ನೆಲಜಿ ಗ್ರಾಮ ವ್ಯಾಪ್ತಿಯಲ್ಲಿ ಕಂಡು ಬಂದಿದ್ದು ಜನರು ಸಂಚರಿಸಲು ಕೂಡ ಭಯ ಪಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಅರಣ್ಯ ಇಲಾಖೆ ತಕ್ಷಣ ಕಾಡಾನೆಗಳನ್ನು ಕಾಡಿಗಟ್ಟುವ ಅಥವಾ ಹಿಡಿದು ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ನಷ್ಟ ಅನುಭವಿಸಿದ ಬೆಳೆಗಾರರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

## ಮರ ಬಿದ್ದು, ವಿದ್ಯುತ್ ತಂತಿಗಳು ತುಂಡಾಗಿ ಅವಾಂತರ



ನಾಪೋಕ್ಲು, ಜು.18– ಸಮೀಪದ ಮರಂದೋಡ ಗ್ರಾಮದಲ್ಲಿ ಮರವೊಂದು ಮುರಿದು ವಿದ್ಯುತ್ ಕಂಬದ ಮೇಲೆ ಬಿದ್ದ ಪರಿಣಾಮ ವಿದ್ಯುತ್ ತಂತಿಗಳು ತುಂಡಾಗಿ ರಸ್ತೆಯ ಮೇಲೆ ಬಿದ್ದು ಜನರು ಸಂಕಷ್ಟಕ್ಕೆ ಸಿಲುಕುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಸೋಮವಾರ ಬೆಳಕಿನ ಜಾವ ನಾಲ್ಕು ಗಂಟೆಗೆ ಮರಂದೋಡ ಗ್ರಾಮದ ಕೆರೆತಟ್ ರಸ್ತೆಯ ಸಮೀಪ ನಾಪೋಕ್ಲು – ವಿರಾಜಪೇಟೆ ಮುಖ್ಯರಸ್ತೆಯ ಮೇಲೆ ಮರ ಮುರಿದು ಬಿದ್ದಿದ್ದು ಸ್ಥಳೀಯರಾದ ಗ್ರಾಮ ಪಂಚಾಯಿತಿ ಸದಸ್ಯ ಹರೀಶ್ ಮೊಣ್ಣಪ್ಪ ಮರ ತೆರವುಗೊಳಿಸುವುದರ ಮೂಲಕ ಬಸ್ಸು ಸಂಚಾರಕ್ಕೆ ಅನುವು ಮಾಡಿಕೊಟ್ಟರು. 11 ಕೆ.ವಿ ವಿದ್ಯುತ್ ತಂತಿಯ ಮೇಲೆ ಮರ ಬಿದ್ದಿದ್ದು ತಂತಿಗಳು ತುಂಡಾಗಿ ಸಮಸ್ಯೆಗೆ ಕಾರಣವಾಗಿತ್ತು ಬೆಂಗಳೂರಿನಿಂದ ಮಡಿಕೇರಿಗೆ ಬಸ್ಸು ಬರುವ ಸಂದರ್ಭ ತೊಂದರೆ ಆಗುತ್ತಿದ್ದುದನ್ನು ಮನಗಂಡು ಕಾಡಾನೆಗಳ ಗಿಳಿಡುವ ಶಬ್ದಗಳ ಮಧ್ಯೆ ಹರೀಶ್ ಮೊಣ್ಣಪ್ಪ ಸಕಾಲದಲ್ಲಿ ಸ್ಥಳಕ್ಕೆ ತೆರಳಿ ವಾಹನಗಳ ಸುಗಮ ಸಂಚಾರಕ್ಕೆ ಕಟಿಂಗ್ ಮಿಷನ್‌ನಿಂದ ಮರ ತೆರವುಗೊಳಿಸಿದ್ದಾರೆ. ಸಂಭವನೀಯ ಅವಘಡವನ್ನು ತಪ್ಪಿಸಿದ ಹರೀಶ್ ಮೊಣ್ಣಪ್ಪ ಬಗ್ಗೆ ಗ್ರಾಮಸ್ಥರು ಶ್ಲಾಘಿಸಿದ್ದಾರೆ.

### ಸಂಪಾಜೆಯಲ್ಲಿ ಕೊಲೆ ಪ್ರಕರಣ

## ಇಬ್ಬರು ಸಹೋದರರ ಬಂಧನ

ಮಡಿಕೇರಿ, ಜು.18– ಆಸ್ತಿ ಕಲಹದ ವಿಚಾರವಾಗಿ ಸಂಪಾಜೆ ವ್ಯಾಪ್ತಿಯ ಕುದ್ರೆಪಾಯದಲ್ಲಿ ಜು.14ರಂದು ನಡೆದಿದ್ದ ಉಸ್ಮಾನ್(65) ಕೊಲೆ ಪ್ರಕರಣದ ಇಬ್ಬರು ಆರೋಪಿಗಳನ್ನು ಕೇರಳದಲ್ಲಿ ಬಂಧಿಸಲಾಗಿದೆ. ಸಹೋದರರಾದ ರಫೀಕ್ ಮತ್ತು ಸತ್ತರ್ ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಪ್ರಕರಣದ ಸಂಬಂಧ ಮಡಿಕೇರಿ ಗ್ರಾಮಾಂತರ ಪೊಲೀಸರಿಂದ ತನಿಖೆ ಮುಂದುವರೆದಿದೆ.

ಮೃತ ಉಸ್ಮಾನ್ ಮತ್ತು ಅವರ ಸಹೋದರರು ಸಂಪಾಜೆ ಕುದ್ರೆಪಾಯದಲ್ಲಿ ಕೃಷಿ ಭೂಮಿ ಹೊಂದಿದ್ದು, ಈ ವಿಚಾರದಲ್ಲಿ ವೈಷಮ್ಯ ಏರ್ಪಟ್ಟಿತ್ತು. ಈ ಹಿನ್ನೆಲೆಯಲ್ಲಿ ಜು.14 ರಂದು ಆಸ್ತಿ ಹಂಚಿಕೆ ಕುರಿತು ಸರ್ವೆ ಕಾರ್ಯ ನಡೆಸಲಾಗಿತ್ತು. ಈ ವೇಳೆ ಉಸ್ಮಾನ್ ಅವರ ಸಹೋದರರಾದ ರಫೀಕ್ ಮತ್ತು ಸತ್ತರ್ ಎಂಬವರು ಚೂರಿಯಿಂದ ಇರಿದು ಸ್ವಂತ ಅಣ್ಣನನ್ನು ಕೊಲೆ ಮಾಡಿದ್ದರು. ಬಳಿಕ ಸುಳ್ಯಕ್ಕೆ ತೆರಳಿ ಅಲ್ಲಿಂದ ಕೇರಳಕ್ಕೆ ಪರಾರಿಯಾಗಿದ್ದರು.

## ಆಟೋ ಅಪಘಾತ: ಗಾಯಾಳು ವಿದ್ಯಾರ್ಥಿಗಳಿಗೆ ರೂ.1.75 ಲಕ್ಷ ಆರ್ಥಿಕ ನೆರವು







ಕುಶಾಲನಗರ, ಜು.18– ಆಟೋರಿಕ್ಷಾ ಅಪಘಾತದಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ತಾಲೂಕಿನ ತೊರೆನೂರು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸೋಮವಾರಪೇಟೆ ತಾಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘವು ಆರ್ಥಿಕ ನೆರವು ನೀಡಿದೆ.

ತೊರೆನೂರು ಸರ್ಕಾರಿ ಪ್ರೌಢಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿದ್ದ ಕೆ.ಎಸ್. ಭುವಿನ್, ಎಸ್.ಐಶ್ವರ್ಯ ಹಾಗೂ ಕೆ.ಎಸ್. ಭೂಮಿಕಾ ತೀವ್ರವಾದ ಪೆಟ್ಟು ಬಿದ್ದು ಮೈಸೂರು ಹಾಗೂ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಗಿದ್ದು, ಶಿಕ್ಷಕಿ ಸವಿತಾ ಅವರು ಸಂಘದ ಪದಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡ ಮೇರೆಗೆ ಸೋಮವಾರಪೇಟೆ ತಾಲೂಕಿನ ಸಂಘದ ಕಾರ್ಯದರ್ಶಿ ರತ್ನ ಕುಮಾರ, ಸಂಘದ ಅಧ್ಯಕ್ಷ ಡಿ.ಪಿ. ಧರ್ಮಪ್ಪ ಅವರ ಬಳಿ ಚರ್ಚಿಸಿ ಸೋಮವಾರಪೇಟೆ ಪ್ರೌಢಶಾಲಾ ಸಹ ಶಿಕ್ಷಕರ ವಾಟ್ಸಾಪ್ ಗ್ರೂಪ್‌ನಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂತೆ ಮನವಿ ಮಾಡಿದ ಎರಡೇ ದಿನದಲ್ಲಿ 1.75 ಲಕ್ಷ ರೂ. ಹಣವನ್ನು ವಿದ್ಯಾರ್ಥಿಗಳ ಪೋಷಕರ ಬ್ಯಾಂಕ್ ಖಾತೆಗೆ ಹಾಕಲಾಗಿದೆ.

ಭುವನ್ ಎಂಬ ವಿದ್ಯಾರ್ಥಿಗೆ ಒಂದು ಲಕ್ಷ, ಐಶ್ವರ್ಯ ಎಂಬ ವಿದ್ಯಾರ್ಥಿನಿ ಐವತ್ತು ಸಾವಿರ ಹಾಗೂ ಕೆ.ಎಸ್. ಭೂಮಿಕ ಎಂಬ ವಿದ್ಯಾರ್ಥಿನಿಗೆ ಇಪ್ಪತ್ತೈದು ಸಾವಿರ ರೂಪಾಯಿ ಅನ್ನು ನೀಡಲಾಗಿದೆ. ಸಂಘದ ಪದಾಧಿಕಾರಿಗಳ ಮನವಿಗೆ ಸ್ಪಂದಿಸಿ ಎಲ್ಲಾ ಶಿಕ್ಷಕರು ತಮ್ಮ ಕೈಲಾದ ಸಹಾಯವನ್ನು ಮಾಡುವ ಮೂಲಕ ಮಾನವೀಯತೆಯನ್ನು ಮೆರೆದಿದ್ದಾರೆ. ಸೋಮವಾರಪೇಟೆ ಪ್ರೌಢಶಾಲಾ ಸಹಶಿಕ್ಷಕರ ಸಂಘದ ಅಧ್ಯಕ್ಷ ಧರ್ಮಪ್ಪ, ಕಾರ್ಯದರ್ಶಿ ಕೆ.ಆರ್.ರತ್ನಕುಮಾರ್, ಪದಾಧಿಕಾರಿಗಳಾದ ಜಯಕುಮಾರ್, ಶೈಲಾ, ಯಶ್ವಂತ್ ಕುಮಾರ್, ಶ್ರೀಕಾಂತ್, ಭರತ್ ಕುಮಾರ್, ಪ್ರಕಾಶ್, ಪೂವಯ್ಯ, ಶಿವಕುಮಾರಿ, ರಜನಿ, ಬಸವರಾಜು ಅವರಿಗೆ ತೊರೆನೂರು ಪ್ರೌಢಶಾಲಾ ಅಭಿವೃದ್ಧಿ ಸಮಿತಿ ಧನ್ಯವಾದಗಳನ್ನು ಸಲ್ಲಿಸಿದೆ. ಮಕ್ಕಳು ಆದಷ್ಟು ಬೇಗ ಗುಣಮುಖರಾಗಿ ಶಾಲೆಗೆ ಬರುವಂತಾಗಲಿ, ಜೊತೆಗೆ ಈ ಭಾಗದ ವಿದ್ಯಾರ್ಥಿಗಳು ಓಡಾಡಲು ಅನುವಾಗುವಂತೆ ಆ ಮಾರ್ಗದಲ್ಲಿ ಬಸ್ ವ್ಯವಸ್ಥೆಯನ್ನು ಕಲ್ಪಿಸಲು ಶಾಸಕ ಮಂಥರ್‌ಗೌಡ ಹಾಗೂ ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕು ಎಂದು ತಾಲೂಕು ಪ್ರೌಢಶಾಲಾ ಶಿಕ್ಷಕರ ಸಂಘ ಒತ್ತಾಯಿಸಿದೆ.

### ಜು.24ಕ್ಕೆ ಕೆಡಿಪಿ ಸಭೆ

ಚಾಮರಾಜನಗರ, ಜು.18– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಜು.24 ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ನೂತನ ಕೆಡಿಪಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಸಿಇಓ ಎಸ್.ಪೂವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.27ಕ್ಕೆ ಗೋಲಕ ಹಣ ಎಣಿಕೆ


ಚಾಮರಾಜನಗರ, ಜು.18– ಮಲೆ ಮಹದೇಶ್ವರ ಬೆಟ್ಟದ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಗೋಲಕಗಳ ಎಣಿಕೆ ಕಾರ್ಯವನ್ನು ಜು.27ರಂದು ಬೆಟ್ಟದ ಬಸ್ ನಿಲ್ದಾಣದಲ್ಲಿರುವ ವಾಣಿಜ್ಯ ಸಂಕೀರ್ಣ ಕಟ್ಟಡದ ಮೊದಲ ಮಹಡಿ ವಿಶ್ರಾಂತಿ ಗೃಹದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ನಡೆಸಲಾಗುವುದು ಎಂದು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಗೀತಾ ಹುಡೇದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ನಾಳೆ ನೇರ ಸಂದರ್ಶನ

ಚಾಮರಾಜನಗರ, ಜು.18– ಜಿಲ್ಲಾ ಉದ್ಯೋಗ ಇಲಾಖೆ ಮತ್ತು ಬದನಗುಪ್ಪೆ, ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎಲ್ಕಿಚ್ ಪ್ರೈಲಿ ಸಹಯೋಗದೊಂದಿಗೆ ಉದ್ಯೋಗ ನೇಮಕಾತಿಗಾಗಿ ನೇರ ಸಂದರ್ಶನವನ್ನು ಜು.20 ರಂದು ಬೆಳಗ್ಗೆ 10.30ಕ್ಕೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಫಿಟ್ಟರ್ ಮತ್ತು ಟರ್ನರ್ ವಿಷಯದಲ್ಲಿ ಐಟಿಐ ಹಾಗೂ ಮೆಕ್ಯಾನಿಕಲ್‌ನಲ್ಲಿ ಡಿಪ್ಲೋಮಾ, ಬಿಇ ವಿದ್ಯಾರ್ಹತೆ ಹೊಂದಿರುವ 18 ರಿಂದ 40 ವರ್ಷ ವಯೋಮಾನದ ಆಸಕ್ತ ಅಭ್ಯರ್ಥಿಗಳು ಸ್ವವಿವರ ಮತ್ತು ಅಂಕಪಟ್ಟಿಗಳ ಮೂಲ ಹಾಗೂ ಜೆರಾಕ್ಸ್ ಪ್ರತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾಗಬೇಕು. ಮಾಹಿತಿಗೆ ದೂ. 8884865299, 08226–224430 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

### ಕಾಳೇಗೌಡ ನಿಧನ



ಯಳಂದೂರು, ಜು.18– ಪಟ್ಟಣದ ನಿವಾಸಿ ಕಾಳೇಗೌಡ (52) ಸೋಮವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ವಚನ ಸಾಹಿತ್ಯಕ್ಕೆ ಹಡಪದ ಅಪ್ಪಣ್ಣ ಕೊಡುಗೆ ಅಪಾರ

### ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅಭಿಪ್ರಾಯ



ಚಾಮರಾಜನಗರ, ಜು.18– ಹನ್ನೆರಡನೇ ಶತಮಾನ ವಚನ ಸಾಹಿತ್ಯದಲ್ಲಿ ಕ್ರಾಂತಿ ಉಂಟು ಮಾಡಿದ ಯುಗವಾಗಿದ್ದು, ಈ ವೇಳೆ ಹಡಪದ ಅಪ್ಪಣ್ಣನವರು ರಚಿಸಿದ ವಚನಗಳ ಸಾರ ಶ್ರೇಷ್ಠವಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಹಡಪದ ಅಪ್ಪಣ್ಣ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು.

ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಿಂದ ವಚನ ಸಾಹಿತ್ಯ ತನ್ನದೇ ಆದ ಶ್ರೇಷ್ಠತೆ ಕಂಡುಕೊಂಡಿತು. ಹಡಪದ ಅಪ್ಪಣ್ಣ ಅವರು ಬಸವಣ್ಣನವರ ಆಪ್ತ ಕಾರ್ಯದರ್ಶಿಯಾಗಿ ಅನೇಕ ಉತ್ತಮ ವಚನಗಳನ್ನು ರಚಿಸಿದರು. ಅವರ ವಚನಗಳ ಸಾರ ಶ್ರೇಷ್ಠ ಎನಿಸಿವೆ ಎಂದರು. ವಿದ್ಯಾರ್ಥಿಗಳು ಶಿಕ್ಷಣದತ್ತ ಹೆಚ್ಚು ಗಮನ ಹರಿಸಬೇಕು. ವಚನ ಸಾಹಿತ್ಯದ ಬಗ್ಗೆ ಅರಿತಾಗ ಉತ್ತಮ ವ್ಯಕ್ತಿಯಾಗಲು ಸಾಧ್ಯ. ಇತ್ತೀಚಿನ ದಿನಗಳು ತುಂಬಾ ಸ್ಪರ್ಧಾತ್ಮಕವಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾದಾಗ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ. ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವತ್ತ ಗಮನಹರಿಸಬೇಕು ಎಂದು ಸಲಹೆ ನೀಡಿದರು.

ಮುಖ್ಯ ಭಾಷಣಕಾರರಾದ ನಿವೃತ್ತ ಶಿಕ್ಷಕ ಶಿವಣ್ಣ ಇಂದುವಾಡಿ ಮಾತನಾಡಿ, 12ನೇ ಶತಮಾನದ ಜಗಜ್ಯೋತಿ ಬಸವಣ್ಣ, ಹಡಪದ ಅಪ್ಪಣ್ಣನವರ ವಚನ ಸಾಹಿತ್ಯದ ಕೊಡುಗೆಯನ್ನು ಎಲ್ಲರೂ ಸ್ಮರಿಸಬೇಕು. ಈ ಶತಮಾನ ಕೇವಲ ವಚನ ಯುಗವಾಗದೇ ಸುವರ್ಣಯುಗವಾಗಿತ್ತು. ಅಂದಿನ ವೃತ್ತಿ ಆಧಾರಿತವಾದ ಧರ್ಮ, ಜಾತಿಗಳ ಮಧ್ಯೆ ಮನುಷ್ಯತ್ವದ ನೆಲೆಯಲ್ಲಿ ಚಿಂತಿಸುವಂತೆ ಮಾಡಿದರು ಎಂದರು.

ಸಮ ಸಮಾಜ ನಿರ್ಮಾಣಕ್ಕೆ ತಮ್ಮದೇ ಆದ ವಚನಗಳ ಮೂಲಕ ಹೋರಾಟ ಪ್ರಾರಂಭಿಸಿದರು. ಅನುಭವ ಮಂಟಪ ಸ್ಥಾಪಿಸಿ ಜ್ಞಾನ, ಅಕ್ಷರ ದಾಸೋಹಕ್ಕೆ ಕಾರಣರಾದವರು ಜಗಜ್ಯೋತಿ ಬಸವಣ್ಣನವರು. ಹಡಪದ ಅಪ್ಪಣ್ಣ ಅವರು ಬಸವಣ್ಣನವರ ಆಪ್ತರಾಗಿ ದ್ದರು. ಬಸವಣ್ಣ ಅವರಂತೆ ಹಡಪದ ಅಪ್ಪಣ್ಣನವರು ಸಮಾಜದಲ್ಲಿ ರುವ ಅಸಮಾನತೆ ವಿರುದ್ಧ ದನಿ ಎತ್ತಿದವರು. ವಚನ ಸಾಹಿತ್ಯದ ವಿಷಯದಲ್ಲಿ ವಿದ್ವತ್ತು, ಗಂಭೀರತೆ, ಗಾಢತೆ ಹೊಂದಿದ್ದರು ಎಂದರು. ಪ್ರಸ್ತುತ ಮಕ್ಕಳಿಗೆ ಶಿಕ್ಷಣ ತುಂಬಾ ಅವಶ್ಯಕ. ಮಕ್ಕಳು ಚೆನ್ನಾಗಿ ಓದಿ ದೇಶದ ಉನ್ನತ ಸ್ಥಾನ ಅಲಂಕರಿಸುವಂತಾಗಬೇಕು. ಶಿಕ್ಷಣದಿಂದ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಶಿಕ್ಷಣದಿಂದ ಜಾಗೃತ ಮನಸ್ಸುಗಳಾಗಬಹುದು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮುದಾಯದ ಮುಖಂಡರಾದ ವೆಂಕಟರಾಜು, ಬಸವಣ್ಣ, ವಿಠ್ಠಲ್, ತಮ್ಮಯ್ಯ, ಮಹದೇವಪ್ಪ, ದೊಡ್ಡತಾಯಮ್ಮ, ಮಹದೇವಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಗುರುಲಿಂಗಯ್ಯ ಇತರರಿದ್ದರು.

### ಸೂಕ್ತ ಉಪಾಹಾರ ಕಲ್ಪಿಸದ ಹಿನ್ನೆಲೆ: ಮುಖಂಡರ ಆಕ್ರೋಶ

ಚಾಮರಾಜನಗರ, ಜು.18– ಇಂದಿಲ್ಲಿ ನಡೆದ ಹಡಪದ ಅಪ್ಪಣ್ಣ ಜಯಂತಿಯಲ್ಲಿ ಸೂಕ್ತ ಉಪಾಹಾರ ಕಲ್ಪಿಸದ ಹಿನ್ನೆಲೆಯಲ್ಲಿ ಸವಿತಾ ಸಮಾಜದ ಮುಖಂಡರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಕಾರ್ಯಕ್ರಮ ಮುಗಿದ ಬಳಿಕ ಸಮುದಾಯದವರಿಗೆ ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು. ಆದರೆ ಸಾಕಷ್ಟು ಮಂದಿಗೆ ಉಪಾಹಾರ ದೊರೆಯಲಿಲ್ಲ. ಈ ಹಿನ್ನೆಲೆಯಲ್ಲಿ ಮುಖಂಡರು ಅಡುಗೆ ಅವರನ್ನು ಪ್ರಶ್ನಿಸಿದ್ದು, ಅಧಿಕಾರಿಗಳ ಆದೇಶದಲ್ಲಿ ಉಪಾಹಾರ ತಯಾರಿಸಲಾಗಿದೆ ಎಂದು ನುಣುಚಿಕೊಂಡರು.

ಇದರಿಂದ ಬೇಸರಗೊಂಡ ಸವಿತಾ ಸಮಾಜದ ಮುಖಂಡರು, ಅಧಿಕಾರಿಗಳು ಹಾಗೂ ಕಾರ್ಯಕ್ರಮದ ಆಯೋಜಕರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

## ಗಿರಿಮಲೆ ಸೌಹಾರ್ದ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚಾಮರಾಜನಗರ, ಜು.18– ನಗರದ ಗಿರಿಮಲೆ ಸೌಹಾರ್ದ ಸಹಕಾರಿ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮಲ್ಲೇಶ್, ಉಪಾಧ್ಯಕ್ಷರಾಗಿ ಜಡಿಯಪ್ಪ ಆಯ್ಕೆಯಾಗಿದ್ದಾರೆ.

ಸಂಘದ ಗೌರವಾಧ್ಯಕ್ಷ ರಾಜಪ್ಪ ಮಾತನಾಡಿ, ಸಹಕಾರ ಸಂಘಗಳನ್ನು ಕಟ್ಟುವುದು ಬಹಳ ಸುಲಭ. ಆದರೆ ಸಹಕಾರ ಕ್ಷೇತ್ರದಲ್ಲಿ ಸದಸ್ಯರನ್ನು ಸಂಘಟಿಸುವುದು ಬಹಳ ಕಷ್ಟವಿದೆ. ಹೀಗಾಗಿ ತಾವೆಲ್ಲರೂ ಒಟ್ಟಾಗಿ ಷೇರು, ಠೇವಣಿ ಸಂಗ್ರಹಣೆಗಳಲ್ಲಿ ತೊಡಗಿಸಿಕೊಂಡು ಸಹಕಾರಿಯ ಆರ್ಥಿಕ ಚಟುವಟಿಕೆಗೆ ವೇಗ ನೀಡಬೇಕು ಎಂದರು. ಈ ವೇಳೆ ಚುನಾವಣಾಧಿಕಾರಿ ನಾಗರಾಜು, ನಿರ್ದೇಶಕರಾದ ಅಶ್ವಿನ್‌ಕುಮಾರ್, ಪರಶಿವಮೂರ್ತಿ, ಗೋವಿಂದರಾಜು, ನಿಂಗರಾಜು, ನಿಂಗಪ್ಪ ಮಂಜುಳಾ, ಲಿಂಗರಾಜಮ್ಮ, ಪ್ರಭಾರ ಸಿಇಓ ವಿಜ್ಞೇಶ್ ಹಾಜರಿದ್ದರು.

## ನೋಂದಣಿ ಗುರುತಿನ ಚೀಟಿ ಹಿಂತಿರುಗಿಸಲು ಸೂಚನೆ

ಚಾಮರಾಜನಗರ, ಜು.18– ನಕಲಿ ದಾಖಲೆ ಸೃಷ್ಟಿಸಿ ಕಟ್ಟಡ ಕಾರ್ಮಿಕರಾಗಿ ನೋಂದಣಿ ಮಾಡಿಸಿಕೊಂಡಿದ್ದಲ್ಲಿ ಸ್ವ–ಇಚ್ಛೆಯಿಂದ ಕಾರ್ಮಿಕರ ಕಲ್ಯಾಣ ಮಂಡಳಿಗೆ ಗುರುತಿನ ಚೀಟಿ ಹಿಂತಿರುಗಿಸುವಂತೆ ಕಾರ್ಮಿಕ ಇಲಾಖೆ ಸೂಚಿಸಿದೆ.

ನಕಲಿ ದಾಖಲೆ ಸೃಷ್ಟಿಸಿ ಕಟ್ಟಡ ಕಾರ್ಮಿಕರಾಗಿ ನೋಂದಣಿ ಮಾಡಿಸಿಕೊಂಡಿದ್ದಲ್ಲಿ ಸ್ವಇಚ್ಛೆಯಿಂದ ಮಂಡಳಿಗೆ ಗುರುತಿನ ಚೀಟಿಯನ್ನು ಹಿಂತಿರುಗಿಸಿದ್ದಲ್ಲಿ ಮುಂದಿನ ಕಾನೂನು ಕ್ರಮ ಕೈಬಿಡಲಾಗುವುದು. ಇಲ್ಲವಾದಲ್ಲಿ ಇಲಾಖಾ ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಿ ನಕಲಿ ದಾಖಲೆ ಸೃಷ್ಟಿಸಿ ಗುರುತಿನ ಚೀಟಿ ಮತ್ತು ಸೌಲಭ್ಯಗಳನ್ನು ಪಡೆದವರ ವಿರುದ್ಧ ಕಾನೂನು ರೀತ್ಯಾ, ಸಕ್ಷಮ ಪ್ರಾಧಿಕಾರದಲ್ಲಿ ಮೊಕದ್ದಮೆ ದಾಖಲಿಸಲಾಗುವುದು.

ಕಟ್ಟಡ ಕಾರ್ಮಿಕರಲ್ಲದವರಿಗೆ (ಬೋಗಸ್ ಕಾರ್ಮಿಕರಿಗೆ) ಸುಳ್ಳು ಉದ್ಯೋಗ ಪ್ರಮಾಣ ಪತ್ರ ನೀಡುವ/ನೀಡಿರುವ ಮಾಲೀಕರ, ಗುತ್ತಿಗೆದಾರ, ಸಂಸ್ಥೆ, ಪ್ರಾಧಿಕಾರ, ಕಾರ್ಮಿಕ ಸಂಘಟನೆಗಳು ಉದ್ಯೋಗ ಪ್ರಮಾಣ ಪತ್ರ ನೀಡುವುದನ್ನು ರದ್ದುಗೊಳಿಸಲಾಗುವುದು. ಅಲ್ಲದೇ ಭಾರತೀಯ ದಂಡ ಸಂಹಿತೆ ಪ್ರಕಾರ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ಸವಿತಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಪ್ರಸ್ತಾವನೆ ಆಹ್ವಾನ

ಚಾಮರಾಜನಗರ, ಜು.18– ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಶಿಕ್ಷಕರ ದಿನಾಚರಣೆಯಂದು ನೀಡಲಾಗುವ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರ ಪ್ರಶಸ್ತಿಗೆ ಪ್ರಸ್ತಾವನೆ ಆಹ್ವಾನಿಸಲಾಗಿದೆ. ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದ ಶಿಕ್ಷಕರು ಪ್ರಸ್ತಾವನೆ ಸಲ್ಲಿಸಬಹುದು. ಪ್ರಸ್ತಾವನೆ ಸಲ್ಲಿಸಲು ಆ.7 ಅಂತಿಮ ದಿನ ಎಂದು ಪ್ರಕಟಣೆ ತಿಳಿಸಿದೆ.

## ಚಿರತೆ ದಾಳಿಗೆ 2 ಕರು ಬಲಿ

ಹನೂರು, ಜು.18– ಚಿರತೆ ದಾಳಿಗೆ 2 ಕರುಗಳು ಬಲಿಯಾಗಿರುವ ಘಟನೆ ಹನೂರು ತಾಲೂಕಿನ ಗುಂಡಾಲ್ ಜಲಾಶಯ ಸಮೀಪದ ತೋಟದಲ್ಲಿ ಮಂಗಳವಾರ ಮುಂಜಾನೆ ನಡೆದಿದೆ.

ಕಾಮಗೆರೆ ಹಾಗೂ ಗುಂಡಾಲ್ ಜಲಾಶಯ ಮಾರ್ಗ ಮಧ್ಯ ಬರುವ ಪಾಳ್ಯ ಹೋಬಳಿ ಕೊಂಗರಹಳ್ಳಿ ಗ್ರಾಮದ ಸರ್ವೆ ನಂ.148/3ಯಲ್ಲಿರುವ ಕೆ.ಎಸ್.ಭರತ್ ಎಂಬುವರ ಜಮೀನಿನಲ್ಲಿ ಕಟ್ಟಿ ಹಾಕಿದ್ದ 2 ಕರುಗಳ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯಾಧಿಕಾರಿಗಳು ಪರಿಶೀಲನೆ ನಡೆಸಿದರು. ಈ ವೇಳೆ ಸ್ಥಳೀಯರು ಚಿರತೆ ಸೆರೆಗೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಸ್ಥಳೀಯರ ಮನವಿಗೆ ಸ್ಪಂದಿಸಿದ ಅರಣ್ಯಾಧಿಕಾರಿಗಳು ಚಿರತೆ ಸೆರೆಗೆ ಬೋನಿಟ್ಟು, ಸುತ್ತ 8 ಸಿಸಿ ಕ್ಯಾಮರ ಅಳವಡಿಸಿದ್ದಾರೆ ಎನ್ನಲಾಗಿದೆ.

**ಸೂಕ್ತ ಪರಿಹಾರ ನೀಡಲು ಸೂಚನೆ:** ಚಿರತೆ ದಾಳಿಯಿಂದ ಕರುಗಳನ್ನು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡುವಂತೆ ಮಾಜಿ ಶಾಸಕ ಆರ್.ನರೇಂದ್ರ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಡಿಸಿಎಫ್ ಸಂತೋಷ್ ಅವರಿಗೆ ಸೂಚಿಸಿದ್ದಾರೆ.

## ಆಲೂರು ವೆಂಕಟರಾಯರ ಸೇವೆ ಸ್ಮರಣೀಯ



ಚಾಮರಾಜನಗರ, ಜು.18– ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಮತ್ತು ಏಕೀಕರಣಕ್ಕಾಗಿ ಶ್ರಮಿಸಿದ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರ ಸೇವೆ ನಿತ್ಯ ಸ್ಮರಣೀಯವಾಗಬೇಕು ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಪಟ್ಟಣದ ಪಿಡಬ್ಲ್ಯೂಡಿ ಕಾಲೋನಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಆಲೂರು ವೆಂಕಟರಾಯರ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಲೂರು ವೆಂಕಟರಾಯರು ಕರ್ನಾಟಕ ಗತ ವೈಭವ, ಕರ್ನಾಟಕ ವೀರರ ರತ್ನಗಳು, ಕರ್ನಾಟಕತ್ವದ ಸೂತ್ರಗಳು, ಕರ್ನಾಟಕತ್ವದ ವಿಕಾಸ ಸೇರಿದಂತೆ 35ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ ಎಂದರು. ಪ್ರತಿಯೊಬ್ಬರೂ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರಾಗಿ ಕನ್ನಡದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳಬೇಕು. ಆ ಮೂಲಕ ಜಿಲ್ಲೆಯಲ್ಲಿರುವ ಅಪಾರವಾದ ಜನಪದ ಸಾಹಿತ್ಯ ಸಂಪತ್ತನ್ನು ತಿಳಿಯುವ ಪ್ರಯತ್ನ ಮಾಡೋಣ. ಜನಪದ ಉತ್ಸವಗಳನ್ನು ಏರ್ಪಡಿಸೋಣ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಕೋಶಾಧ್ಯಕ್ಷ ಆರ್.ವಿ. ಮಹದೇವಪ್ಪ ಮಾತನಾಡಿ, ಉತ್ತಮ ಪರಿಸರದಲ್ಲಿರುವ ಪಿಡಬ್ಲ್ಯೂಡಿ ಶಾಲೆ ನಗರದ ಮಾದರಿ ಶಾಲೆಯಾಗಲಿ. ಕನ್ನಡ ಅಭಿಮಾನ ಬೆಳೆಸಿಕೊಳ್ಳುವ ದಿಕ್ಕಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕ್ರಮಗಳಿಗೆ ಸರ್ಕಾರ ಸಹಕಾರ ಅಗತ್ಯ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕಿ ಮಾಲಿನಿ, ಕಸಾಪ ನಿರ್ದೇಶಕ ರಾದ ಬಿ.ಕೆ. ಆರಾಧ್ಯ, ಸರಸ್ವತಿ, ಶಿಕ್ಷಕರಾದ ನಾಗಮ್ಮ, ರೂಪಾ, ಸವಿತಾ, ಸುಗಂದಿನಿ, ಕಮಲ, ಮಮತಾ ಇದ್ದರು.

### ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.18– ಜಿಲ್ಲಾ ಉಪ್ಪಾರ ಸಂಘದಿಂದ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿರುವ ಉಪ್ಪಾರ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಒಂದು ಫೋಟೋದೊಂದಿಗೆ ಜು.25ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ.9902039341 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ



ಮೂರನೇ ಪುಟದಿಂದ

## ನಮ್ಮ ವಿಚಾರ ಧಾರೆ: ಮೋದಿ

ಎಂದು ಮೋದಿ ಹೇಳಿದರು. **ಎನ್‌ಡಿಎ ಎಂದರೇನು:** ಎನ್‌ಡಿಎ ಅಂದರೆ **ಎನ್-ನ್ಯೂ ಇಂಡಿಯಾ, ಡಿ-ಡೆವಲಪ್‌ಮೆಂಟ್ ಹಾಗೂ ಎ-ಆಸ್ಪಿರೇಷನ್** ಎಂದು ಮೋದಿ ವ್ಯಾಖ್ಯಾನಿಸಿದರು. ನಾವು ಬಡತನವನ್ನು ಬಡವರ ಶಕ್ತಿಯಿಂದಲೇ ನಿರ್ಮೂಲನೆ ಮಾಡುತ್ತೇವೆ. ದೇಶದ ಜನರ ಅಭಿವೃದ್ಧಿಯೇ ಎನ್‌ಡಿಎ ಮೈತ್ರಿಕೂಟದ ವಿಚಾರಧಾರೆ. ಬಡತನ ನಿರ್ಮೂಲನೆಯೇ ಎನ್‌ಡಿಎ ಮೈತ್ರಿಕೂಟದ ಗುರಿ. ದೇಶದ ಬಡವರು, ಯುವಕರು, ದಲಿತರು, ಆದಿವಾಸಿಗಳು ಮಹಿಳೆಯರು ಎನ್‌ಡಿಎ ಒಕ್ಕೂಟದ ಜೊತೆ ಇದ್ದಾರೆ ಎಂದು ಪ್ರಧಾನಿ ಹೇಳಿದರು. ಎನ್‌ಡಿಎಗೆ ರಾಷ್ಟ್ರ ಮೊದಲು, ದೇಶದ ಭದ್ರತೆ ಮೊದಲು, ಪ್ರಗತಿ ಮೊದಲು ಮತ್ತು ಜನರ ಸಬಲೀಕರಣ ಮೊದಲು ಎಂದು ಅವರು ಪ್ರತಿಪಾದಿಸಿದರು.

**ಜನಾದೇಶಕ್ಕೆ ಅವಮಾನ ಮಾಡಿಲ್ಲ:** ನಾವು ವಿರೋಧ ಪಕ್ಷದ ಸ್ಥಾನಲ್ಲಿದ್ದಾಗಲೂ ಸಕಾರಾತ್ಮಕ ರಾಜಕಾರಣ ಮಾಡಿದ್ದೇವೆ. ವಿರೋಧ ಪಕ್ಷದಲ್ಲಿ ನಾವು ಆಗಿನ ಸರ್ಕಾರದ ಹಗರಣಗಳನ್ನು ಹೊರತಂದಿದ್ದೇವೆ. ಆದರೆ ಜನಾದೇಶಕ್ಕೆ ಅವಮಾನ ಮಾಡಿಲ್ಲ. ಆಳುವ ಸರ್ಕಾರಗಳ ವಿರುದ್ಧ ನಾವು ಎಂದಿಗೂ ವಿದೇಶಿ ಶಕ್ತಿಗಳ ಸಹಾಯವನ್ನು ತೆಗೆದುಕೊಂಡಿಲ್ಲ. ದೇಶದ ಅಭಿವೃದ್ಧಿ ಯೋಜನೆಗಳಲ್ಲಿ ನಾವು ಎಂದಿಗೂ ಅಡೆತಡೆಗಳನ್ನು ಸೃಷ್ಟಿಸಿಲ್ಲ ಎಂದು ಮೋದಿ ಹೇಳಿದರು.

**ಮಹಾಮೈತ್ರಿ ವಿರುದ್ಧ ಮೋದಿ ವಾಗ್ದಾಳಿ:** ಕಾಂಗ್ರೆಸ್ ಹಾಗೂ ಇತರ ಪ್ರತಿಪಕ್ಷಗಳ ಮಹಾ ಮೈತ್ರಿಕೂಟದ ಬಗ್ಗೆ ಮೋದಿ ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಪಕ್ಷವು ಮಹಾಮೈತ್ರಿಯನ್ನು ದುರ್ಬಳಕೆ ಮಾಡಿಕೊಂಡಿದೆ. ಆದರೆ, ಎನ್‌ಡಿಎ ಮೈತ್ರಿಕೂಟವು ಯಾರನ್ನೋ ಅಧಿಕಾರದಿಂದ ಇಳಿಸಲು ಮಾಡಿದ್ದಲ್ಲ ಎಂದು ಮೋದಿ ಹೇಳಿದರು. ಕೆಲ ರಾಜ್ಯಗಳು ಕೇಂದ್ರದ ಯೋಜನೆ ಜಾರಿ ಮಾಡಲು ಬಿಟ್ಟಿಲ್ಲ. ಇದಕ್ಕಾಗಿ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವ ಪರಿಸ್ಥಿತಿ ಬಂತು. ಬಡವರ ಅಭಿವೃದ್ಧಿಯಲ್ಲೂ ರಾಜಕೀಯ ಲೆಕ್ಕಾಚಾರ ಹಾಕುತ್ತಾರೆ ಎಂದು ಮೋದಿ ಕುಟುಕಿದರು.

### ಎನ್‌ಡಿಎ ಸಭೆಯಲ್ಲಿ 38 ಪಕ್ಷಗಳು ಭಾಗಿ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ನೇತೃತ್ವದಲ್ಲಿ ನಡೆದ ಸಭೆ ದೆಹಲಿಯ ಅಶೋಕ ಹೋಟೆಲ್‌ನಲ್ಲಿ ನಡೆದ ಎನ್‌ಡಿಎ ಸಭೆಯಲ್ಲಿ ಎಐಎಡಿಎಂಕೆ, ಶಿವಸೇನೆ (ಶಿಂಧೆ ಬಣ), ಎನ್‌ಪಿಪಿ, ಎನ್‌ಡಿಪಿಪಿ, ಎಸ್‌ಕೆಎಂ, ಜೆಜೆಪಿ, ಎಜೆಎಸ್‌ಯು, ಆರ್‌ಪಿಐ, ಎಂಎನ್‌ಎಫ್, ತಮಿಳು ಮನಿಲಾ ಕಾಂಗ್ರೆಸ್, ಎಎಂಕೆಎಂಕೆ, ಐಪಿಎಫ್‌ಟಿ, ಬಿಪಿಪಿ, ಪಟ್ಟಾಲಿ ಮಕ್ಕಳ್ ಕಚ್ಚಿ, ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ, ಅಪ್ನಾ ದಳ, ಅಸ್ಸಾಂ ಗಣ ಪರಿಷತ್, ನಿಶಾದ್ ಪಾರ್ಟಿ, ಜನಸೇನಾ, ಯುಪಿಪಿಎಲ್, ಎಐಆರ್‌ಎನ್‌ಸಿ, ಶಿರೋಮಣಿ ಅಕಾಲಿ ದಳ, ಎನ್‌ಸಿಪಿ (ಅಜಿತ್ ಪವಾರ್ ಬಣ), ಲೋಕ ಜನಶಕ್ತಿ ಪಕ್ಷ, ಹಿಂದೂಸ್ಥಾನಿ ಅವಾಮ್ ಮೋರ್ಚಾ, ಆರ್‌ಎಲ್‌ಎಸ್‌ಪಿ, ವಿಐಪಿ, ಎಸ್‌ಬಿಎಸ್ ಪಕ್ಷ ಸೇರಿದಂತೆ 38 ರಾಜಕೀಯ ಪಕ್ಷಗಳು ಭಾಗವಹಿಸಿವೆ.

## ವಿಪಕ್ಷ ಅಲಯನ್ಸ್‌ಗೆ ಮೋದಿ ವ್ಯಂಗ್ಯ

ಲಾಭ ಗಳಿಸುವುದೇ ಈ ಅಂಗಡಿಗಳ ಉದ್ದೇಶ. ಇದರ ಮಾರ್ಗದರ್ಶಕರು ಕೂಡ ಭ್ರಷ್ಟಾಚಾರಿಗಳೇ ಆಗಿರುತ್ತಾರೆ ಎಂದು ಲೇವಡಿ ಮಾಡಿದರು. ಬೆಂಗಳೂರಿನಲ್ಲಿ ಕಡು ಭ್ರಷ್ಟರ ಕೂಟದ ಸಮ್ಮೇಳನ ನಡೆದಿದೆ. ಸ್ವಹಿತ-ಸ್ವಕುಟುಂಬವೇ ಅವರ ಧ್ಯೇಯ. ಈ ಭ್ರಷ್ಟರು ಒಂದೇ ಸೂರಿನಡಿ ಸೇರಿದ್ದಾರೆ. ದೇಶದಲ್ಲಿ ಭ್ರಷ್ಟಾಚಾರಕ್ಕೆ ಮತ್ತಷ್ಟು ಉತ್ತೇಜನ ನೀಡುವುದೇ ಈ ಸಭೆಯ ಮೂಲ ಉದ್ದೇಶ. ಇದನ್ನು ಜನರೇ ಬಹಿರಂಗವಾಗಿ ಹೇಳುತ್ತಿದ್ದಾರೆ ಎಂದರು. ವಿಪಕ್ಷ ನಾಯಕರಿಗೆ ದೇಶದ ಬಡವರು ಮತ್ತು ಮಕ್ಕಳ ಅಭ್ಯುದಯದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಸ್ವಕುಟುಂಬಗಳ ಭ್ರಷ್ಟಾಚಾರವನ್ನು ಮತ್ತಷ್ಟು ಪೋಷಿಸುವುದೇ ಅವರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಧ್ಯೇಯ ವಾಕ್ಯವಾಗಿದೆ ಎಂದು ವ್ಯಂಗ್ಯವಾಡಿದರು. ಪ್ರಜಾಪ್ರಭುತ್ವವೆಂದರೆ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಇರುವ ವ್ಯವಸ್ಥೆ ಎಂದರ್ಥ. ಆದರೆ, ಪ್ರತಿಪಕ್ಷಗಳದ್ದು ಇದಕ್ಕೆ ತದ್ವಿರುದ್ಧ ನೀತಿ. ಕುಟುಂಬ, ಕುಟುಂಬಕ್ಕಾಗಿ, ಕುಟುಂಬಕೋಸ್ಕರ ಎಂಬುದು ಅವರ ಮೂಲತತ್ವ ಅವರ ಪಾಲಿಗೆ ರಾಷ್ಟ್ರದ ಹಿತಾಸಕ್ತಿ ನಗಣ್ಯವಾಗಿದೆ ಎಂದು ಆಪಾದಿಸಿದರು.

ತಮಿಳುನಾಡಿನಲ್ಲಿ ಡಿಎಂಕೆ ಭ್ರಷ್ಟಾಚಾರದಲ್ಲಿ ಮುಳುಗಿದೆ. ಆ ಪಕ್ಷಕ್ಕೆ ಪ್ರತಿಪಕ್ಷಗಳು ಕ್ಲೀನ್‌ಚಿಟ್ ನೀಡಿವೆ ಎಂದು ಟೀಕಿಸಿದರು. ಪಶ್ಚಿಮ ಬಂಗಾಳದ ಪಂಚಾಯಿತಿ ಚುನಾವಣೆಯಲ್ಲಿ ಹಿಂಸಾಚಾರ ನಡೆದಿದೆ. ಮಮತಾ ಬ್ಯಾನರ್ಜಿ ಅವರು ಸಂಘರ್ಷ ತಡೆಗಟ್ಟುವಲ್ಲಿ ವೈಫಲ್ಯ ಕಂಡಿದ್ದಾರೆ. ಆದರೆ, ಎಡಪಕ್ಷಗಳು ಮತ್ತು ಕಾಂಗ್ರೆಸ್, ಅಲ್ಲಿನ ಸರ್ಕಾರದ ವೈಫಲ್ಯವನ್ನು ಟೀಕಿಸಿಲ್ಲ ಎಂದು ಹೇಳಿದರು.

ಸ್ವಾತಂತ್ರ್ಯದ ಬಳಿಕ ಭಾರತದ ಅಭಿವೃದ್ಧಿ ವೇಗ ಪಡೆಯಬೇಕಿತ್ತು. ಇದಕ್ಕೆ ಭ್ರಷ್ಟಾಚಾರ ಹಾಗೂ ಕುಟುಂಬ ರಾಜಕಾರಣ ಅಡ್ಡಿಯಾಯಿತು ಎಂದರು.

## ಒಗ್ಗಟ್ಟಿನ ಹೋರಾಟದ ಉದ್ದೇಶ: ಖರ್ಗೆ

ಇದರ ರೂಪು-ರೇಷೆಗಳನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಲಾಗು ವುದು. ನಮ್ಮ ಒಗ್ಗಟ್ಟು ಬಲಿಷ್ಠವಾಗುತ್ತಿದ್ದಂತೆ ಬಿಜೆಪಿ ಎಚ್ಚೆತ್ತುಕೊಂಡು ತನ್ನ ಒಕ್ಕೂಟ ಉಳಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದೆ. ನಮ್ಮ ಒಗ್ಗಟ್ಟು ಎನ್‌ಡಿಎ ಸರ್ಕಾರವನ್ನು ಎಚ್ಚರಿಸಿದೆ. ಚುನಾವಣೆಯವರೆಗೂ ನಮ್ಮ ಶಕ್ತಿಯನ್ನು ಇದೇ ರೀತಿ ಮುಂದುವರೆಸಿ ಕೇಂದ್ರದ ವಿರುದ್ಧ ಹೋರಾಟ ನಡೆಸುವ ನಿರ್ಣಯ ಕೈಗೊಂಡಿವೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿಯನ್ನು ರಾಷ್ಟ್ರಾದ್ಯಂತ ಕಟ್ಟಿ ಹಾಕಲು ಏನೆಲ್ಲಾ ಕಾರ್ಯತಂತ್ರ ರೂಪಿಸ ಬೇಕು ಎಂಬ ಬಗ್ಗೆ ಹತ್ತು-ಹಲವು ಸಲಹೆ ಬಂದಿವೆ.

ಲೋಕಸಭೆ ಚುನಾವಣೆಗೂ ಮುನ್ನ ತಿಂಗಳಿಗೊಮ್ಮೆ ಇಲ್ಲವೇ, ಎರಡು ತಿಂಗಳಿಗೊಮ್ಮೆ ಪ್ರತಿಪಕ್ಷಗಳ ಮುಖಂಡರು ಸಭೆ ಸೇರಿ ಚುನಾವಣೆ ಸಿದ್ಧತೆ ನಡೆಸುವ ತೀರ್ಮಾನಕ್ಕೆ ನಾಯಕರು ಬಂದಿದ್ದಾರೆ. ಅಧಿಕಾರಕ್ಕಾಗಿ ಪ್ರಜಾ ಪ್ರಭುತ್ವದ ಕಗ್ಗೊಲೆ ಮಾಡುತ್ತಿರುವ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಪ್ರಾದೇಶಿಕ ಪಕ್ಷಗಳನ್ನು ವಿಭಜಿಸುತ್ತಿರುವುದನ್ನು ಸಭೆ ಖಂಡಿಸಿದೆ ಮೋದಿ ಅವರ ವಿರುದ್ಧ ಒಗ್ಗಟ್ಟಿ ನಿಂದ ಹೋರಾಟ ನಡೆಸಿದರೆ, ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ ಎಂಬ ವಿಶ್ವಾಸ ಸಭೆಯಲ್ಲಿ ಮೂಡಿ ಬಂದಿದೆ. ಕಳೆದ 9-10 ವರ್ಷಗಳ ಬಿಜೆಪಿ ಆಡಳಿತದಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆ ಬಡ ಮತ್ತು ಮಧ್ಯಮ ವರ್ಗದವರನ್ನು ಅಲುಗಾಡಿಸಿದೆ. ಸರ್ವಾಧಿಕಾರಿ ಧೋರಣೆಯಿಂದ ಸಂವಿಧಾನದ ಆಶೋತ್ತರಗಳಿಗೆ ಧಕ್ಕೆಯುಂಟಾಗುತ್ತಿದೆ. ಎನ್‌ಡಿಎ ಆಡಳಿತದ ಎಲ್ಲಾ ಲೋಪಗಳನ್ನು ಜನರ ಮುಂದಿಡಲು ಸಭೆ ನಿರ್ಧರಿಸಿದೆ. ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಂದ ಬೃಹತ್ ಜಾಥಾ ಮತ್ತು ಸಭೆಗಳನ್ನು ನಡೆಸಿ ಕೇಂದ್ರದ ಜನವಿರೋಧಿ ನೀತಿಗಳ ಬಗ್ಗೆ ಜಾಗೃತಿ ಮೂಡಿಸುವುದು. ಇದನ್ನು ದೇಶದ ಉದ್ದಗಲಕ್ಕೂ ವಿಸ್ತರಣೆ ಮಾಡಿ ಆಂದೋಲನದ ರೂಪದಲ್ಲಿ ಜನರಿಗೆ ಅರಿವು ಮೂಡಿಸಲು ನಿರ್ಣಯ ಕೈಗೊಂಡಿದ್ದಾರೆ.

## ಪ್ರಜಾಪ್ರಭುತ್ವ ಉಳಿಸಲು ಒಗ್ಗಟ್ಟಿನ ಹೋರಾಟ

ಇರಲಿದ್ದು, ಸಮನ್ವಯ ಕಾರ್ಯದರ್ಶಿ ಹಾಗೂ 11 ಸದಸ್ಯರನ್ನು ಒಳಗೊಂಡಿರುತ್ತದೆ. ಮುಂದಿನ ಸಭೆಯನ್ನು ಮಹಾರಾಷ್ಟ್ರದ ಮುಂಬೈನಲ್ಲಿ ನಡೆಸಲು ನಿರ್ಧರಿಸಿದ್ದು, ಅಲ್ಲಿ ಹೋರಾಟದ ಮುಂದಿನ ರೂಪು-ರೇಷೆಗಳ ಕುರಿತು ಚರ್ಚಿಸಲಾಗುವುದು.

ಹಣದುಬ್ಬರ, ನಿರುದ್ಯೋಗ ಇಡೀ ದೇಶವನ್ನು ಕಾಡುತ್ತಿದೆ, ಜನತೆ ಕೇಂದ್ರದ ನೀತಿ-ನಿರ್ಧಾರಗಳಿಂದ ಬೇಸರಗೊಂಡಿದ್ದಾರೆ. ಅಷ್ಟೇ ಅಲ್ಲ, ವಿರೋಧ ಪಕ್ಷಗಳ ನಾಯಕರನ್ನು ದಮನ ಮಾಡುವ ಕೆಲಸವನ್ನು ಕೇಂದ್ರ ಮಾಡುತ್ತಿದೆ.

ಎನ್‌ಡಿಎ ವಿರುದ್ಧ 'ಇಂಡಿಯಾ' ಸಂಘಟನೆ ಹೋರಾಡಲಿದೆ, ವಿವಿಧ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ನಿಲುವುಗಳು ಬೇರೆ-ಬೇರೆಯಾಗಿದ್ದರೂ ರಾಷ್ಟ್ರ ಮತ್ತು ಸಂವಿಧಾನದ ಉಳಿವಿಗಾಗಿ ಸಂಘಟಿತರಾಗಿ ಹೋರಾಟ ಮಾಡಲಿದ್ದೇವೆ ಎಂದರು. ನಮ್ಮ ಹೋರಾಟವನ್ನು ಎನ್‌ಡಿಎಯಿಂದ ತಡೆಯಲು ಸಾಧ್ಯವಿಲ್ಲ, ಚುನಾವಣೆಯನ್ನು ಸಂಘಟನೆಯ ಹೆಸರಿನಲ್ಲಿ ಎದುರಿಸಲಿದ್ದೇವೆ ಎಂದರು. 'ಇಂಡಿಯಾ' ಎದುರಿಸಲು ಎನ್‌ಡಿಎಗೆ ತಾಕತ್ತಿದೆಯೇ ಎಂದಿರುವ ಈ ನಾಯಕರು, ನಾವು ರೈತರು, ದಲಿತರು ಹಾಗೂ ದೇಶಕ್ಕಾಗಿ ಇದ್ದೇವೆ, ದೇಶವನ್ನು ಬಿಜೆಪಿ ಮಾರಾಟದ ವಸ್ತುವನ್ನಾಗಿ ಮಾಡಿಕೊಂಡಿದೆ. ಪ್ರಜಾಪ್ರಭುತ್ವವನ್ನು ಖರೀದಿಯ ವಸ್ತುವನ್ನಾಗಿಸಿದೆ, ಇಂಡಿಯಾ ಗೆಲ್ಲುತ್ತೆ ಎನ್‌ಡಿಎ ಸೋಲುತ್ತೆ ಎಂದು ಹೇಳಿದರು. ಖರ್ಗೆ ಅವರ ಹೇಳಿಕೆಗೆ ಪಶ್ಚಿಮಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಶಿವಸೇನೆ ನಾಯಕ ಉದ್ಧವ್ ಠಾಕ್ರೆ, ಕಾಂಗ್ರೆಸ್‌ನ ರಾಹುಲ್ ಗಾಂಧಿ ಸೇರಿದಂತೆ ಹಲವು ನಾಯಕರು ಧನಿಗೂಡಿಸಿದರು.

## ಕಾರು ಡಿಕ್ಕಿ: ಮೂವರ ಸಾವು

ತೀವ್ರವಾಗಿ ಗಾಯ ಗೊಂಡಿರುವ ಮುಜೀದ್ ಅಹಮದ್ (36) ಅವರನ್ನು ಮೈಸೂರಿನ ಕೆವಿಸಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಸೋದರ ಸಂಬಂಧಿಗಳಾದ ಈ ನಾಲ್ವರು ವೃತ್ತಿಯಲ್ಲಿ ಡ್ರೈವರ್‌ಗಳಾಗಿದ್ದು, ವಾಹನವನ್ನು ಖರೀದಿಸಿ, ಮಾರಾಟ ಮಾಡುವ ವ್ಯವಹಾರ ಮಾಡು ತ್ತಿದ್ದರು. ಇಂದು ಬೆಳಗಿನ ಜಾವ ಐ20 ಕಾರಿನಲ್ಲಿ (ಕೆಎ12 Z 3389) ಹೊಸ ಕಾರನ್ನು ಖರೀದಿಸಲು ಮೈಸೂರಿಗೆ ತೆರ ಳುತ್ತಿದ್ದಾಗ ತಾಲೂಕಿನ ಕಂಪಲಾಪುರದ ಹೈಸ್ಕೂಲ್ ಮುಂಭಾಗ ನಿಂತಿದ್ದ ಸೌದೆ ತುಂಬಿದ್ದ ಟ್ರ್ಯಾಕ್ಟರ್ ಟ್ರ್ಯಾಲಿಗೆ ಡಿಕ್ಕಿ ಹೊಡೆದು ಪರಿಣಾಮವಾಗಿ ಈ ದುರಂತ ಸಂಭವಿಸಿದೆ. ಕಾರಿನ ಟೈಯರ್ ಸಿಡಿದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಕಾರು ರಸ್ತೆ ಬದಿ ನಿಂತಿದ್ದ ಸೌದೆ ತುಂಬಿದ್ದ ಟ್ರ್ಯಾಕ್ಟರ್ ಟ್ರ್ಯಾಲಿಗೆ ಡಿಕ್ಕಿ ಹೊಡೆಯಿತು ಎನ್ನಲಾಗಿದೆ. ಮತ್ತೊಂದು ಮೂಲದ ಪ್ರಕಾರ ಕಾರಿಗೆ ಅಡ್ಡ ಬಂದ ಬೆಕ್ಕಿಗೆ ಡಿಕ್ಕಿ ಹೊಡೆ ಯುವುದನ್ನು ತಪ್ಪಿಸಲು ಯತ್ನಿಸಿದಾಗ ಈ ದುರಂತ ಸಂಭವಿಸಿದೆ ಎನ್ನಲಾಗಿದ್ದು, ಇದಕ್ಕೆ ಪುಷ್ಟಿ ನೀಡುವಂತೆ ಬೆಕ್ಕೊಂದು ಸ್ಥಳದಲ್ಲಿ ಸತ್ತು ಬಿದ್ದಿರುವುದು ಕಂಡುಬಂದಿದೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಸಂಬಂಧಿ ಕರಿಗೆ ಮೃತದೇಹವನ್ನು ಹಸ್ತಾಂತರಿಸಲಾಯಿತು, ಶವಾಗಾರಕ್ಕೆ ಪುರಸಭಾ ಸದಸ್ಯ ಎಸ್.ಎಂ.ಎಸ್. ರಾಜು. ತಹಸಿಲ್ದಾರ್ ಕುಂಜಿ ಅಹ್ಮದ್ ಭೇಟಿ ನೀಡಿ ಘಟನೆ ಕುರಿತು ವಿವರ ಪಡೆದುಕೊಂಡರು. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಡಿವೈಎಸ್‌ಪಿ ಎಂ.ಕೆ.ಮಹೇಶ್, ಸರ್ಕಲ್ ಇನ್‌ಸ್ಪೆಕ್ಟರ್ ಕೆ.ವಿ.ಶ್ರೀಧರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪಿರಿಯಾಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ತನಿಖೆ ನಡೆಸುತ್ತಿದ್ದಾರೆ.

# ಮೈಸೂರಿನಲ್ಲಿ ಹಡಪದ ಅಪ್ಪಣ್ಣ ಜಯಂತಿ ಆಚರಣೆ



ಮೈಸೂರು, ಜು.18(ಜಿಎ)-ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಆಚರಣಾ ಸಮಿತಿ ವತಿಯಿಂದ ನಗರದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಹಡಪದ ಅಪ್ಪಣ್ಣ ಜಯಂತಿಯನ್ನು ಆಚರಿಸಲಾಯಿತು.

ಈ ವೇಳೆ ಹಿರಿಯ ಕವಿ ಜಯಪ್ಪ ಹೊನ್ನಾಳಿ ಮಾತನಾಡಿ, ಬಸವಣ್ಣನವರು ಜನರಲ್ಲಿ ಮೌಢ್ಯವನ್ನು ಹೋಗಲಾಡಿಸಲು ಪ್ರಾಮಾಣಿಕತೆ ಮತ್ತು ಕಾಯಕ ನಿಷ್ಠೆಯ ಹಡಪದ ಅಪ್ಪಣ್ಣ ಅವರನ್ನು ಆಪ್ತಕಾರ್ಯದರ್ಶಿಯನ್ನಾಗಿ ಮಾಡಿಕೊಂಡಿದ್ದರು. ಬಸವಣ್ಣನವರು ಅಪ್ಪಿಕೊಂಡ ನಂತರ ಹಡಪದ ಅಪ್ಪಣ್ಣ ಎಂಬ ಹೆಸರು ಬಂತು ಎಂಬ ಉಲ್ಲೇಖವಿದೆ ಎಂದರು.

ಹಡಪದ ಅಪ್ಪಣ್ಣ ಅವರ ಮುಖವನ್ನು ನೋಡಬಾರದು, ಕೆಟ್ಟದು ಉಂಟಾಗುತ್ತದೆ ಎಂಬ ಭಾವನೆಯನ್ನು ತೆಗೆದು ಹಾಕಲು ಅನುಭವ ಮಂಟಪಕ್ಕೆ ಬರುವವರು ಮೊದಲು ಹಡಪದ ಅಪ್ಪಣ್ಣ ಅವರನ್ನು ಭೇಟಿ ಮಾಡಿ ಬರಬೇಕೆಂದು ಆದೇಶಿಸಿದರು. ಜೊತೆಗೆ ಅವರು ತಮ್ಮ ಜೀವತಾವಧಿವರೆಗೂ ಬೆಳಗ್ಗೆ ಎದ್ದ ತಕ್ಷಣ ಮೊದಲು ಹಡಪದ ಅಪ್ಪಣ್ಣ ಅವರನ್ನು ನೋಡಿ ದಿನವನ್ನು ಆರಂಭಿಸುತ್ತಿದರು. ವೇದ-ಉಪನಿಷತ್ ಗಳಲ್ಲಿ ಪ್ರಬುದ್ಧರಾಗಿದ್ದ ಅವರು 11 ಸಾವಿರ ವಚನಗಳನ್ನು ರಚಿಸಿದರು. ಅದರಲ್ಲಿ 251 ವಚನಗಳು ದೊರಕಿವೆ. ಅವರಿಗೆ ಸಮನಾಗಿ ಅವರ ಪತ್ನಿ ಲಿಂಗಮ್ಮ ಅನೇಕ ವಚನಗಳನ್ನು ರಚಿಸಿದ್ದರು ಎಂದರು.

ಜಗತ್ತನ್ನು ಸುಂದರಗೊಳಿಸುವ ಸವಿತಾ ಸಮಾಜದವರ ಬದುಕು ಸುಂದರವಾಗಿಲ್ಲ. ಇನ್ನೂ ಅನೇಕ ಸಮಸ್ಯೆಗಳು ಇವೆ. ಈ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಲು ಎರಡು ತಂಡಗಳು ಬಂದಿತು. ನಿಮ್ಮಲ್ಲಿ ಏನಾದರೂ ಸಮಸ್ಯೆಗಳು ಇದ್ದರೆ, ಕುಳಿತು ಬಗೆಹರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ನಂತರ ಮೇಯರ್ ಶಿವಕುಮಾರ್ ಮಾತನಾಡಿ, ಸವಿತಾ ಸಮಾಜಕ್ಕೆ ಪ್ರೋತ್ಸಾಹ ಧನ ನೀಡುವ ಬಗ್ಗೆ 2011ರಲ್ಲಿ ನಾನು ಸ್ಥಾಯಿ ಸಮಿತಿ ಅಧ್ಯಕ್ಷನಾಗಿದ್ದಾಗ ಜಾರಿಗೆ ತಂದಿದ್ದೆ. ಅದೇ ರೀತಿ ಈ ಬಾರಿ ಬಜೆಟ್‌ನಲ್ಲಿ ಸವಿತಾ ಸಮಾಜ ಮತ್ತು ಮಡಿವಾಳರಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಜಾರಿ ಮಾಡಲಾಗಿದೆ. ಅದರಂತೆ ಮಂಗಳವಾದ್ಯದವರಿಗೆ ವಾದ್ಯ, ಮಡಿವಾಳರಿಗೆ ವಾಷಿಂಗ್ ಮೆಷಿನ್ ಖರೀದಿಸಲು 10 ಸಾವಿರ ರೂ. ನೀಡಲಾಗುವುದು. ಈ ಸಂಬಂಧ ಆಯುಕ್ತರಿಗೆ ಸೂಚಿಸಿದ್ದೇನೆ. ಫಲಾನುಭವಿಗಳು ಅರ್ಜಿ ಸಲ್ಲಿಸಿ ಸೌಲಭ್ಯವನ್ನು ಪಡೆಯಬಹುದು ಎಂದರು.

ಕಾರ್ಯಕ್ರಮದಲ್ಲಿ ಉಪ ಮೇಯರ್ ಡಾ.ಜಿ.ರೂಪ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್, ಸವಿತಾ ಸಮಾಜದ ಮುಖಂಡರಾದ ಎನ್.ಆರ್.ನಾಗೇಶ್, ಎ.ಎಂ.ನಾಗರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ಜಿಲ್ಲಾಧ್ಯಕ್ಷರ ಗೊಂದಲ...



ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಆಚರಣಾ ಸಮಿತಿ ವತಿಯಿಂದ ನಗರದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಆಯೋಜಿಸಿದ್ದ ಹಡಪದ ಅಪ್ಪಣ್ಣ ಜಯಂತಿ ಆರಂಭಕ್ಕೂ ಮುನ್ನ ಎನ್.ಆರ್. ನಾಗೇಶ್ ಸವಿತಾ ಸಮಾಜದ ಜಿಲ್ಲಾಧ್ಯಕ್ಷನಲ್ಲ. ನಾನು ಸವಿತಾ ಸಮಾಜದ ಚುನಾಯಿತ ಜಿಲ್ಲಾಧ್ಯಕ್ಷನಾಗಿದ್ದೇನೆಂದು ಎ.ಎಂ.ನಾಗರಾಜು ಎಂಬುವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯ ನಿರ್ದೇಶಕ ಎಂ.ಡಿ.ಸುದರ್ಶನ್ ಅವರ ಬಳಿ ದೂರಿದರು. ಈ ವೇಳೆ ನಾಗೇಶ್ ಮತ್ತು ನಾಗರಾಜು ಅವರಿಬ್ಬರಲ್ಲಿ ಯಾರು ಜಿಲ್ಲಾಧ್ಯಕ್ಷರು ಎಂಬ ಗೊಂದಲ ಸೃಷ್ಟಿಯಾಯಿತು. ನಂತರ ಸ್ಥಳಕ್ಕೆ ಜಯಲಕ್ಷ್ಮಿಪುರಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪೂಣಚ್ಚ ಆಗಮಿಸಿದರು. ಎಂ.ಡಿ.ಸುದರ್ಶನ್ ಅವರು ಮುಖಂಡರೊಡನೆ ಚರ್ಚಿಸಿ, ಇದು ಸರ್ಕಾರದ ಕಾರ್ಯಕ್ರಮ. ಇಲ್ಲಿ ನೀವು ಯಾರು ಎಂಬುದರ ಬಗ್ಗೆ ಪಂಚಾಯಿತಿ ಮಾಡಲು ಸಾಧ್ಯವಿಲ್ಲ. ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು ಎಂದು ಮೂವರನ್ನು ಆಯ್ಕೆ ಮಾಡಿ ಹೆಸರು ನೀಡಿ, ಅವರಿಗೆ ಮಾತ್ರ ವೇದಿಕೆಯಲ್ಲಿ ಅವಕಾಶ ನೀಡಲಾಗುತ್ತದೆ ಎಂದು ಕಟ್ಟುನಿಟ್ಟಾಗಿ ಸೂಚಿಸಿದ ನಂತರ ಎಲ್ಲಾ ಮುಖಂಡರು ಅಧಿಕಾರಿಗಳ ಮಾತಿಗೆ ಒಪ್ಪಿಗೆ ಸೂಚಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

## ವಿಮೆ ಯೋಜನೆ ಜಾರಿಗೊಳಿಸದೇ ಪಾಲಿಕೆ ನಿರ್ಲಕ್ಷ್ಯ



ಮೈಸೂರು,ಜು.18(ಪಿಎಂ)- ರಾಜ್ಯ ಸರ್ಕಾರದ ಸುತ್ತೋಲೆಯಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ಜೀವ ಆರೋಗ್ಯ ವಿಮೆ ಯೋಜನೆ ಜಾರಿಗೊಳಿಸದೇ ಮೈಸೂರು ಮಹಾನಗರ ಪಾಲಿಕೆಯು ನಿರ್ಲಕ್ಷ್ಯ ವಹಿಸಿದೆ ಎಂದು ಅಶೋಕಪುರಂ ಮುಖಂಡ ಜಯಶಂಕರ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರದ ಸುತ್ತೋಲೆಯಂತೆ ಮೈಸೂರು ಮಹಾನಗರ ಪಾಲಿಕೆ ಶೇ.24.10ರಂತೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗಾಗಿ ವಿಮಾ ಯೋಜನೆ ಜಾರಿಗೊಳಿಸಬೇಕು. ಈ ಸಂಬಂಧ ನಗರಾಭಿವೃದ್ಧಿ ಇಲಾಖೆ 2019ರ ಜ.1ರಂದು ಸುತ್ತೋಲೆ ಹೊರಡಿಸಿದೆ ಎಂದರು.

ಐದು ವರ್ಷಗಳಾದರೂ ಎಸ್‌ಸಿ ಮತ್ತು ಎಸ್‌ಟಿ ಸಮುದಾಯದ ಬಡ ಜನತೆಗೆ ಈ ವಿಮಾ ಸೌಲಭ್ಯ ಕಲ್ಪಿಸದೇ ವಂಚಿಸಲಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಜಿಲ್ಲಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಹಾಗೂ ಸಮಾಜ ಕಲ್ಯಾಣ ಸಚಿವರಿಗೆ ಶೀಘ್ರದಲ್ಲಿ ದೂರು ನೀಡಲಿದ್ದೇವೆ ಎಂದರು.

ಈ ಯೋಜನೆ ಸಂಬಂಧ ಮಾಹಿತಿ ಹಕ್ಕು ಕಾಯ್ದೆಯಡಿ 2019ರಿಂದ 2023ರವರೆಗಿನ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದೆವು. ಈ ಯೋಜನೆಗೆ 2019-20 ಹಾಗೂ 20-21ರಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾಗಿಲ್ಲ. ಹಾಗಾಗಿ ಫಲಾನುಭವಿಗಳ ದಾಖಲೆ ಲಭ್ಯವಿಲ್ಲವೆಂದು ಮಾಹಿತಿ ನೀಡಲಾಗಿದೆ. ಜೊತೆಗೆ 2021-22 ಹಾಗೂ 22-23ರಲ್ಲಿ ಈ ಯೋಜನೆ ಅಳವಡಿಸಿಕೊಂಡಿಲ್ಲ ಎಂದು ಮಾಹಿತಿ ಒದಗಿಸಲಾಗಿದೆ ಎಂದು ವಿವರಿಸಿದರು.

ಮುಖಂಡ ಸಿ.ಸುರೇಶ್ ಮಾತನಾಡಿ, ಕಳೆದ ನಾಲ್ಕು ವರ್ಷಗಳ ಹಿಂದೆಯೇ ಈ ಯೋಜನೆ ಜಾರಿಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದ್ದೆವು. ಅಂದಿನ ಪಾಲಿಕೆ ಎಡಿಸಿ ಈ ಯೋಜನೆ ಸಂಬಂಧ ನಮಗೆ ಸುತ್ತೋಲೆ ಬಂದಿದೆ. ಅರ್ಜಿ ನಮೂನೆ ತಯಾರು ಮಾಡುತ್ತಿದ್ದೇವೆ. ಒಂದು ಬಿಪಿಎಲ್ ಕುಟುಂಬದ ಎಷ್ಟು ಸದಸ್ಯರಿಗೆ ಈ ವಿಮಾ ಸೌಲಭ್ಯ ಒದಗಿಸಬೇಕು ಎಂಬುದನ್ನು ಚರ್ಚೆ ಮಾಡಲಾಗುತ್ತಿದೆ. ಶೀಘ್ರದಲ್ಲಿ ಅನುಷ್ಠಾನಗೊಳಿಸುತ್ತೇವೆ ಎಂದು ಭರವಸೆ ನೀಡಿದ್ದರು. ಪಲ್ಲವಿಬೇಗಂ ಹೊರತಾಗಿ ಯಾವುದೇ ಪಾಲಿಕೆ ಸದಸ್ಯರು ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ ಎಂದು ದೂರಿದರು.

ಮುಖಂಡರಾದ ಪಿ.ಸುರೇಶ್, ರಾಜಣ್ಣ, ಸಿದ್ದಪ್ಪ ಗೋಷ್ಠಿಯಲ್ಲಿದ್ದರು.

## ಯುವ ಕಬಡ್ಡಿ ಸೀರಿಸ್; ಇಂದು ಫೈನಲ್ ಪಂದ್ಯ



ಮೈಸೂರು,ಜು.18(ಪಿಎಂ)- ಎಲೆವ್8 ಇಂಡಿಯಾ ಸ್ಪೋರ್ಟ್ಸ್ ವತಿಯಿಂದ ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಯುವ ಕಬಡ್ಡಿ ಸೀರಿಸ್‌ನ ಅಂತಿಮ ಪಂದ್ಯ ಜು.19ರಂದು ನಡೆಯಲಿದೆ ಎಂದು ಯುವ ಕಬಡ್ಡಿ ಸೀರಿಸ್‌ನ ಸಿಇಓ ವಿಕಾಸ್ ಗೌತಮ್ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಜು.19ರ ಸಂಜೆ 7.30ಕ್ಕೆ ಫೈನಲ್ ಪಂದ್ಯ ನಡೆಯಲಿದ್ದು, ಈ ಪಂದ್ಯದ ವೀಕ್ಷಣೆಗೆ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಆಗಮಿಸಲಿದ್ದು, ಬಹುಮಾನ ವಿತರಣೆ ಮಾಡಲಿದ್ದಾರೆ ಎಂದರು.

ಜು.17ರಿಂದ ನಡೆಯುತ್ತಿರುವ ಈ ಪಂದ್ಯಾವಳಿಯಲ್ಲಿ ಕರ್ನಾಟಕ, ತಮಿಳುನಾಡು, ಪಾಂಡಿಚೇರಿ, ರಾಜಸ್ಥಾನ, ಛತ್ತೀಸ್‌ಗಢ, ಜಾರ್ಖಂಡ್ ಹಾಗೂ ಅಸ್ಸಾಂ ರಾಜ್ಯಗಳಿಂದ ಒಟ್ಟು 9 ತಂಡಗಳು ಪಾಲ್ಗೊಂಡಿದ್ದವು. ಈ ಪೈಕಿ ತಮಿಳುನಾಡಿನ ಪಳನಿ ಟಸ್ಕರ್ಸ್ ಮತ್ತು ರಾಜಸ್ಥಾನದ ಪೆರಿಂಥಾರ್ ಪ್ಯಾಂಥರ್ಸ್‌ಫೈನಲ್‌ಗೆ ಪ್ರವೇಶ ಪಡೆದಿದೆ ಎಂದು ತಿಳಿಸಿದರು.

ವಿಜೇತ ತಂಡಕ್ಕೆ 20 ಲಕ್ಷ ರೂ. ನಗದು ಬಹುಮಾನ ದೊರೆಯಲಿದ್ದು, ರನ್ನರ್ ತಂಡಕ್ಕೆ 10 ಲಕ್ಷ ರೂ., ತೃತೀಯ ಸ್ಥಾನ ಪಡೆಯುವ ತಂಡಕ್ಕೆ 5 ಲಕ್ಷ ರೂ., 4ನೇ ಸ್ಥಾನ ಪಡೆಯುವ ತಂಡಕ್ಕೆ 2 ಲಕ್ಷ ರೂ., 5ನೇ ಸ್ಥಾನ ಪಡೆಯುವ ತಂಡಕ್ಕೆ ಲಕ್ಷ ರೂ. ಹಾಗೂ 6ನೇ ಸ್ಥಾನ ಪಡೆಯುವ ತಂಡಕ್ಕೆ 50 ಸಾವಿರ ರೂ. ನಗದು ಬಹುಮಾನ ಲಭಿಸಲಿದೆ ಎಂದು ಹೇಳಿದರು.

ಯುವ ಕಬಡ್ಡಿ ಸೀರಿಸ್‌ನ ಸದಸ್ಯರಾದ ಅಂಕಿತ್, ಕೃತಜ್ಞ ಮಿಶ್ರಾ, ಸಂಗ್ರಾಮ್, ಪಂದ್ಯಾವಳಿ ಸಂಚಾಲಕ ಸತ್ಯನಾರಾಯಣ ಗೋಷ್ಠಿಯಲ್ಲಿದ್ದರು.

## ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್



ಮೈಸೂರು, ಜು.18(ಜಿಎ)-ಮೈಸೂರು ವಿಭಾಗ ಮಟ್ಟದ ಎಂಟು ಜಿಲ್ಲೆಗಳ (ಜಿಲ್ಲೆಯ ಹೊರಗೆ- ವಿಭಾಗದ ಒಳಗೆ) ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸೆಲಿಂಗ್ ಆರಂಭಗೊಂಡಿದೆ.

ಮೈಸೂರಿನ ಡಿಡಿಪಿಐ ಕಚೇರಿಯಲ್ಲಿ ನಡೆದ ಕೌನ್ಸೆಲಿಂಗ್‌ನಲ್ಲಿ ಮೈಸೂರು, ಮಂಡ್ಯ, ಉಡುಪಿ, ಚಿಕ್ಕಮಗಳೂರು, ಹಾಸನ, ಚಾಮರಾಜನಗರ, ದಕ್ಷಿಣ ಕನ್ನಡ ಮತ್ತು ಕೊಡಗು ಸೇರಿದಂತೆ ಎಂಟು ಜಿಲ್ಲೆಗಳ ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಕೌನ್ಸಿಲಿಂಗ್ ನಡೆಯಿತು.


ಕೌನ್ಸೆಲಿಂಗ್‌ನಲ್ಲಿ ಪ್ರಾಥಮಿಕ ಶಾಲಾ ವಿಶೇಷ ಶಿಕ್ಷಕರು-5, ದೈಹಿಕ ಶಿಕ್ಷಕರು-39, ಮುಖ್ಯ ಶಿಕ್ಷಕರು-16, ಸಹ ಶಿಕ್ಷಕರು-433 ಕೋರಿಕೆ ಮೇಲೆ ಒಟ್ಟು 493 ಶಿಕ್ಷಕರು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿದರು. ಅದರಲ್ಲಿ ಮೊದಲ ದಿನವೇ 210 ಶಿಕ್ಷಕರು ಕೌನ್ಸೆಲಿಂಗ್‌ನಲ್ಲಿ ಭಾಗಿಯಾಗಿ ಸ್ಥಳದಲ್ಲಿಯೇ ವಿಭಾಗೀಯ ಕಾರ್ಯದರ್ಶಿ ಮತ್ತು ವರ್ಗಾವಣಾ ಪ್ರಾಧಿಕಾರದ ಭಾರತಿ ಅವರಿಂದ ಮಂಜೂರಾತಿ ಪತ್ರ ಪಡೆದುಕೊಂಡರು.

ಈ ಕೌನ್ಸೆಲಿಂಗ್ ಪ್ರಕ್ರಿಯೆ ಜು.25ರವರೆಗೂ ನಡೆಯಲಿದ್ದು, ಕೋರಿಕೆ ವರ್ಗಾವಣೆಯಲ್ಲಿ 829 ಪ್ರೌಢಶಾಲಾ ಶಿಕ್ಷಕರು ಭಾಗಿಯಾಗಲಿದ್ದಾರೆ. ಹಾಗೇ ಪರಸ್ಪರ ವರ್ಗಾವಣೆ ಪ್ರಕ್ರಿಯೆಯಲ್ಲಿ 32 ಶಿಕ್ಷಕರು ಪಾಲ್ಗೊಳ್ಳಲಿದ್ದಾರೆ.

ವಿಭಾಗೀಯ ಕಾರ್ಯದರ್ಶಿ ಮತ್ತು ವರ್ಗಾವಣಾ ಪ್ರಾಧಿಕಾರದ ಭಾರತಿ ಸಮ್ಮುಖದಲ್ಲಿ ವರ್ಗಾವಣೆ ಕೌನ್ಸೆಲಿಂಗ್ ನಡೆಯುತ್ತಿದೆ. ಹಲವು ಕಾರಣಗಳಿಂದ ವರ್ಗಾವಣೆ ಬಯಸಿದ್ದ ಶಿಕ್ಷಕರಿಗೆ ಕೌನ್ಸೆಲಿಂಗ್ ಪ್ರಯೋಜನಕಾರಿಯಾಗಿದೆ. ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಶಿಕ್ಷಕರಿಗೆ ಯಾವುದೇ ತೊಂದರೆ ಆಗದಂತೆ ಶಿಕ್ಷಕರ ಸಂಘದವರು ಕುಡಿಯುವ ನೀರು, ಕಾಫಿ, ಟೀ ಸೇರಿದಂತೆ ಹಲವು ಸೌಲಭ್ಯ ಕಲ್ಪಿಸಿದ್ದರು.

ಈ ವೇಳೆ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಮಹೇಶ್, ಲಿಪಿಕ ನೌಕರರ ಸಂಘದ ಪದಾಧಿಕಾರಿಗಳಾದ ರಾಜೇಶ್, ಪ್ರದೀಪ್, ಮಂಜುನಾಥ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಬಾಕಿ ಹಣ ಪಾವತಿಸುವಂತೆ ಕಬ್ಬು ಬೆಳೆಗಾರರ ಪ್ರತಿಭಟನೆ



ಮೈಸೂರು, ಜು.18(ಜಿಎ)-ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಹಿಂದಿನ ವರ್ಷದ ಬಾಕಿ ಟನ್ ಕಬ್ಬಿಗೆ 150 ರೂ.ಗಳನ್ನು ತಕ್ಷಣವೇ ಪಾವತಿಸುವಂತೆ ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘ ವತಿಯಿಂದ ಪ್ರತಿಭಟನೆ ನಡೆಯಿತು.

ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದ ರೈತರು, ಶೀಘ್ರ ಬಾಕಿ ಹಣ ಪಾವತಿಸಲು ಕಾರ್ಖಾನೆ ಮಾಲೀಕರಿಗೆ ಸೂಚಿಸುವಂತೆ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದರು.

ಕಬ್ಬಿನ ಉತ್ಪಾದನೆ ವೆಚ್ಚ ಏರಿಕೆಯಾಗಿರುವ ಕಾರಣ ಹೆಚ್ಚು ಬೆಲೆ ನಿಗದಿಪಡಿಸಲು ರೈತರು ಹೋರಾಟ ನಡೆಸಿದ ಪರಿಣಾಮ ರಾಜ್ಯ ಸರ್ಕಾರ ಹೆಚ್ಚುವರಿಯಾಗಿ 150 ರೂ. ನಿಗದಿ ಮಾಡಿ ಆದೇಶ ಹೊರಡಿಸಿತ್ತು. ಕಳೆದ ವರ್ಷ ರೈತರು ಕಾರ್ಖಾನೆಗೆ 15 ಲಕ್ಷ ಟನ್ ಕಬ್ಬು ಸರಬರಾಜು ಮಾಡಿದ್ದಾರೆ. ಇದುವರೆಗೂ ಬಾಕಿ ಹಣ ವಿತರಣೆ ಮಾಡಿಲ್ಲ. ಬಾಕಿ ಹಣ ಪಾವತಿಸಿದ ಬಳಿಕ ಕಾರ್ಖಾನೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಪ್ರಸಕ್ತ ಸಾಲಿನಲ್ಲಿ ಕೇಂದ್ರ ಸರ್ಕಾರ ನಿಗದಿ ಮಾಡಿರುವ ಕಬ್ಬಿನ ದರದಿಂದ ರೈತರಿಗೆ ಅನ್ಯಾಯವಾಗಿದೆ. ಕಾರ್ಖಾನೆ ಆರಂಭವಾಗುವುದಕ್ಕೆ ಮೊದಲು ಜಿಲ್ಲಾಧಿಕಾರಿಗಳು ಸಭೆ ಕರೆದು ಕಟಾವು ಕೂಲಿ, ಸಾಗಾಣಿಕೆ ವೆಚ್ಚ ನಿಗದಿಪಡಿಸಬೇಕು. ರಾಜ್ಯ ಸರ್ಕಾರ ಎಸ್‌ಎಪಿ ಸಭೆ ಕರೆದು ಕಬ್ಬು ಬೆಳೆಗಾರರಿಗೆ ರೈತರ ಹೊಲದಲ್ಲಿನ ದರ ಎಂದು ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

**ಬೇಡಿಕೆಗಳು:** ಕಬ್ಬು ಬೆಳೆಗಾರರು ಹಾಗೂ ಕಾರ್ಖಾನೆ ನಡುವೆ ಸರ್ಕಾರ ಜಾರಿ ಮಾಡಿದ ದ್ವಿಪಕ್ಷೀಯ ಒಪ್ಪಂದ ಪತ್ರವನ್ನು ರೈತರಿಗೆ ಒಂದು ಪ್ರತಿ ಕೊಡಬೇಕು. ಸಕ್ಕರೆ ಕಾರ್ಖಾನೆ ಒಳಗೆ ಇರುವ ಕಬ್ಬು ತೂಕದ ಯಂತ್ರ ಕಾರ್ಖಾನೆ ಮುಂದೆ ಸ್ಥಾಪಿಸಬೇಕು.

ಪ್ರತಿಭಟನೆಯಲ್ಲಿ ಅತ್ತಹಳ್ಳಿ ದೇವರಾಜು, ಹಳ್ಳಿಕೆರೆಹುಂಡಿ ಭಾಗ್ಯರಾಜು, ಹಾಡ್ಯರವಿ, ಎಚ್. ಮಾಕುಹಳ್ಳಿ ಮಹದೇವಸ್ವಾಮಿ, ಅಪ್ಪಣ್ಣ ರಾಜೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಪಾಲಿಕೆ ಆರೋಗ್ಯ, ಶಿಕ್ಷಣ, ಸಾಮಾಜಿಕ ಸ್ಥಾಯಿ ಸಮಿತಿಯಿಂದ ಇಂದಿರಾ ಕ್ಯಾಂಟೀನ್ ಪರಿಶೀಲನೆ

### ನೀರಿನ ವ್ಯವಸ್ಥೆ, ಆಹಾರ ತಯಾರಿಕಾ ವಿಧಾನದ ಬಗ್ಗೆ ಮಾಹಿತಿ ಸಂಗ್ರಹ

ಮೈಸೂರು, ಜು.18(ಎಸ್‌ಬಿಡಿ)- ಮೈಸೂರು ಮಹಾನಗರ ಪಾಲಿಕೆಯ ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸಮಿತಿ, ಇಂದಿರಾ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಕೆ.ಆರ್.ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಮೊದಲು ಭೇಟಿ ನೀಡಿ, ಅಲ್ಲಿನ ಸ್ವಚ್ಛತೆ, ನೀರಿನ ವ್ಯವಸ್ಥೆ, ಆಹಾರದ ಗುಣಮಟ್ಟ, ಪ್ರಮಾಣದ ಬಗ್ಗೆ ಪರಿಶೀಲನೆ ನಡೆಸಲಾಯಿತು. ಬಳಿಕ ಕುಂಬಾರಕೊಪ್ಪಲಿನಲ್ಲಿರುವ ಆಹಾರ ತಯಾರಿಕಾ ಘಟಕವನ್ನೊಳಗೊಂಡ ಕ್ಯಾಂಟೀನ್‌ಗೆ ತೆರಳಿ, ಪರಿಶೀಲಿಸಲಾಯಿತು. ನಂತರ ಕಾರ್ಯಾರಂಭಕ್ಕೆ ಸಿದ್ಧವಾಗಿರುವ ಕೆಸರೆ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಭೇಟಿ ನೀಡಿ, ಅಲ್ಲಿ ಅಳವಡಿಸಲಾಗಿರುವ ಯಂತ್ರೋಪಕರಣ ಹಾಗೂ ನಿರ್ವಹಣೆ ಸಂಬಂಧ ಮಾಹಿತಿ ಪಡೆಯಲಾಯಿತು.



**ಶೆಲ್ಟರ್ ವ್ಯವಸ್ಥೆ:** ಇದೇ ಸಂದರ್ಭದಲ್ಲಿ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ ನಗರ ಪಾಲಿಕೆ ವತಿಯಿಂದ ರೋಗಿಗಳಿಗೆ ಅನುಕೂಲವಾಗುವಂತೆ ಶೆಲ್ಟರ್ ನಿರ್ಮಿಸಿ, ಬೆಂಚುಗಳನ್ನು ಅಳವಡಿಸುವ ನಿಟ್ಟಿನಲ್ಲಿ ಪರಿಶೀಲನೆ ನಡೆಸಲಾಯಿತು.

ಪರಿಶೀಲನೆ ಬಗ್ಗೆ ಸಮಿತಿ ಅಧ್ಯಕ್ಷೆ ಸವಿತಾ ಸುರೇಶ್ ಮಾತನಾಡಿ, ಕೆ.ಆರ್. ಆಸ್ಪತ್ರೆ ಆವರಣದಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಆಸ್ಪತ್ರೆಗೆ ಬರುವ ಬಡ ರೋಗಿಗಳು ಆಹಾರ ಸೇವಿಸುತ್ತಾರೆ. ಹಾಗಾಗಿ ಅಲ್ಲಿಗೆ ಭೇಟಿ ನೀಡಿ, ಶುಚಿತ್ವ ಕಾಪಾಡಿಕೊಂಡು ಸಮರ್ಪಕವಾದ ಆಹಾರ ವಿತರಿಸುವಂತೆ ಸೂಚನೆ ನೀಡಲಾಯಿತು. ಹಾಗೆಯೇ ಆಹಾರ ತಯಾರಿ ಘಟಕವಿರುವ ಕುಂಬಾರಕೊಪ್ಪಲು ಕ್ಯಾಂಟೀನ್‌ಗೂ ಭೇಟಿ ನೀಡಿದ್ದೆವು. ಸ್ವಚ್ಛತೆ ಇನ್ನಿತರೆ ನ್ಯೂನತೆಗಳು ಕಂಡುಬಂದವು. ಸ್ವಚ್ಛತೆಗೆ ಆದ್ಯತೆ ಕೊಡಬೇಕು. ಗುಣಮಟ್ಟದ ಪದಾರ್ಥಗಳನ್ನು ಬಳಸಬೇಕೆಂದು ತಿಳಿಸಲಾಯಿತು. ಹಾಗೆಯೇ ಚೆಲುವಾಂಬ ಆಸ್ಪತ್ರೆಗೆ ಮಕ್ಕಳನ್ನು ಕರೆತರುವ ಮಹಿಳೆಯರಿಗೆ ಕೂರಲು ಅನುಕೂಲವಿಲ್ಲ. ಹಾಗಾಗಿ ಪಾಲಿಕೆ ವತಿಯಿಂದ ಅಲ್ಲೊಂದು ಶೆಲ್ಟರ್ ನಿರ್ಮಿಸಲು ಸ್ಥಳಪರಿಶೀಲಿಸಿದ್ದು, ಆ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸಮಿತಿ ಸದಸ್ಯರಾದ ಸಿ.ವೇದಾವತಿ, ಎಂ.ಸತೀಶ್, ಎಂ.ಶಿವಕುಮಾರ್, ಸವೂದ್ ಖಾನ್, ಪಂಡು, ಆರೋಗ್ಯಾಧಿಕಾರಿ ಡಾ.ನಾಗರಾಜು ಮತ್ತಿತರರ ಅಧಿಕಾರಿಗಳು ಪರಿಶೀಲನೆಯಲ್ಲಿ ಪಾಲ್ಗೊಂಡಿದ್ದರು.

# ರಾಜ್ಯದಲ್ಲಿ ಹಿಂದೂಗಳು ಜೀವನ ಮಾಡದ ವಾತಾವರಣ

## ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಶ್ರದ್ಧಾಂಜಲಿ ಸಭೆಯಲ್ಲಿ ಯತ್ನಾಳ್ ವಾಗ್ದಾಳಿ




ತಿ. ನರಸೀಪುರ ಜು 18– ದೇಶಪ್ರೇಮ ಬೆಳೆಸಲು ಅನುಮತಿ ಅನಿವಾರ್ಯವಾಗಿರುವಾಗ ದೇಶ, ಧರ್ಮದ ಸಲುವಾಗಿ ಹೃದಯದಲ್ಲಿ ಜಾಗವಿಡಿ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿವಿಮಾತು ಹೇಳಿದರು.

ಪಟ್ಟಣದ ಶ್ರೀ ಗುಂಜಾನರಸಿಂಹ ಸ್ವಾಮಿ ದೇವಾಲಯದ ಪಕ್ಕದ ಆವರಣದಲ್ಲಿ ನಡೆದ ಯುವ ಬ್ರಿಗೇಡ್ ಕಾರ್ಯಕರ್ತ ವೇಣುಗೋಪಾಲ್ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಹಿಂದೂಗಳು ಜೀವನ ಮಾಡದ ವಾತಾವರಣ ನಿರ್ಮಾಣವಾಗಿದೆ. ಹತ್ಯೆಗಳು, ಜೋಡಿ ಕೊಲೆಗಳು, ಸಮಾಜ ವಿರೋಧಿ ಕೃತ್ಯದಲ್ಲಿ ಭಾಗಿಯಾಗುವವರಿಗೆ ಹೊಸ ಹುಮ್ಮಸ್ಸು ಬಂದಿದೆ ಎಂದರು.

ವೇಣುಗೋಪಾಲ್ ದೇಶದ್ರೋಹಿ ಚಟುವಟಿಕೆ ಮಾಡಿದ್ರಾ? ಪಾಕಿಸ್ತಾನದ ಪರ ಜೈಕಾರ ಕೂಗಿದ್ದರಾ ಎಂದು ಪ್ರಶ್ನಿಸಿದ ಅವರು, ನಮ್ಮೆಲ್ಲರ ಪುಣ್ಯ ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ ಇದೆ. ನ್ಯಾಯಾಲಯದಲ್ಲಿ ಕಾನೂನು ಸದ್ಯ ಸಿಗುತ್ತಿದೆ. ಇಲ್ಲವಾಗಿದ್ದರೆ ನಮ್ಮ ಸ್ಥಿತಿ ಚಿಂತಾಜನಕವಾಗುತ್ತಿತ್ತು. ಹಿಂದುಗಳು ಒಂದಾಗಬೇಕು. ದೇಶದ ಉಳಿವಿಗಾಗಿ ಎಲ್ಲರೂ ಒಗ್ಗೂಡಬೇಕು ಎಂದು ಹೇಳಿದರು.

ಈ ಹಿಂದೆ ನನ್ನ ವಿರುದ್ಧ 27 ಕೇಸ್ ಹಾಕಿದ್ದರು. ತಿಂಗಳು ಪೂರ್ತಿ ಕೋರ್ಟ್ ಸುತ್ತಬೇಕು ಅಂತ ಕೇಸ್ ಜಡಿದಿದ್ರು, ನ್ಯಾಯಾಲಯಕ್ಕೂ ಅಲೆದಾಡಿಸಿದ್ದರು. ಎಲ್ಲವೂ ಕೂಡ ಈಗ ಖುಲಾಸೆ ಆಗಿವೆ. ಅಮಿತ್ ಶಾ ವಿರುದ್ಧವೂ ಕೂಡ ಹೀಗೆ ಕೇಸ್ ಹಾಕಿದ್ದರು. ಪೊಲೀಸರನ್ನು ರಾಜಕಾರಣಿಗಳು ಕಂಟ್ರೋಲ್ ಮಾಡುತ್ತಿದ್ದಾರೆ. ತಿ.ನರಸೀಪುರದಲ್ಲೂ ಅಂತಹದ್ದೆ ಕಂಟ್ರೋಲಿಂಗ್ ನಡೆಯುತ್ತಿದೆ ಎಂದು ಆರೋಪಿಸಿದರು.

ವೇಣುಗೋಪಾಲ್ ಹತ್ಯೆ ಹಿಂದಿನ ದಿನ ಪಿಸಿಯೊಬ್ಬರು ಜಗಳ ಬಿಡಿಸಿದ್ದರು. ಅಂದೇ ಅವರು ಕ್ರಮ ಕೈಗೊಂಡಿದ್ದರೆ ವೇಣು ಉಳಿಯುತ್ತಿದ್ದ. ಹಿಂದುತ್ವ ಉಳಿದಿರುವುದು ಬಡವರ ಮನೆಯಲ್ಲಿ, ವಾಲ್ಮೀಕಿ ಸಮಾಜದಲ್ಲಿ , ಹಿಂದುಳಿದ ಮನೆಗಳಲ್ಲಿ ಮಾತ್ರ. ಈ ದೇಶಕ್ಕೆ ಮಹಾಭಾರತ ಬರೆದವರು ವೇದವ್ಯಾಸರು, ರಾಮಾಯಣ ಬರೆದವರು ಮಹರ್ಷಿ ವಾಲ್ಮೀಕಿ. ಈ ದೇಶಕ್ಕೆ ಸಂವಿಧಾನ ಬರೆದವರು ಒಬ್ಬ ದಲಿತ ಡಾ.ಬಿ.ಆರ್. ಅಂಬೇಡ್ಕರ್. ಹಿಂದೂ ಧರ್ಮ ಉಳಿದಿರುವುದು ದಲಿತರು, ಬಡವರ ಮನೆಗಳಲ್ಲಿ ಮಾತ್ರ. ಈ ದೇಶದಲ್ಲಿ ಹನುಮ ಜಯಂತಿ ಮಾಡಲು ಅನುಮತಿ ಬೇಕಾ? ಈ ಆದೇಶ ನಮ್ಮ ವಿಜಯಪುರದಲ್ಲಿ ನಡೆಯಲ್ಲ ಎಂದು ತಿಳಿಸಿದರು.

ನಾವು ಎಂದಿಗೂ ಕೂಡ ಯಾರನ್ನೂ ಕಂಟ್ರೋಲ್ ಮಾಡಿಲ್ಲ. ನನ್ನಲ್ಲಿ ಹೊಂದಾಣಿಕೆ ರಾಜಕಾರಣವಿಲ್ಲ. ನನ್ನನ್ನು ಸೋಲಿಸಲು ಯತ್ನ ಮಾಡಿದ್ರು. ವಿಧಾನಸೌಧದಲ್ಲಿ ನನ್ನ ಬಾಯಿ ಮುಚ್ಚಿಸಬೇಕು ಅಂದಿದ್ರು. ನನ್ನ ಸೋಲಿಸಬೇಕೆಂದು ಚೆನ್ನಾಗಿ ಕುಡಿದು ತಿಂದ್ರು, ರಿಸಲ್ಟ್ ದಿನ ಫಲಿತಾಂಶ ಬಂದಾಗ ಟಿವಿಗಳನ್ನು ಹೊಡೆದು ಹಾಕಿದ್ರು. ನನ್ನ ಗೆಲವಿನಿಂದ ಹಲವರು ಹತಾಶರಾಗಿದ್ದಾರೆ ಎಂದು ಹೇಳಿದರು.

ಕೇಸರಿ ಶಾಲು ಹಾಕಿಕೊಂಡರೆ ಹುಷಾರ್, ತಿಲಕ ಹಾಕಿಕೊಂಡರೆ ಹುಷಾರ್ ಅಂತ ಪೊಲೀಸರ ಸಭೆಯಲ್ಲಿ ಮಂತ್ರಿ ಹೇಳುತ್ತಾರೆ. ರಾಮನ ಹಾಡನ್ನು ಹಾಡಲು ಕೂಡ ಅನುಮತಿ ಪಡೆದುಕೊಳ್ಳುವ ದುಃಸ್ಥಿತಿ ಎದುರಾಗಿದೆ. ಗಣಪತಿ ಕೂರಿಸಲು ಕೂಡ ಈಗ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಯುವ ಬ್ರಿಗೇಡ್ ಚಕ್ರವರ್ತಿ ಸೂಲಿಬೆಲೆ ಮಾತನಾಡಿ, ನಾವು ವೀರ ಕೇಸರಿ ಅಂತ ಅಭಿಯಾನ ಮಾಡಿದ್ದೆವು. ವಿವೇಕಾನಂದರ ಸ್ಟಿಕ್ಕರ್ ಹಾಕಿ 2 ರೂ. ಪಡೆಯಬೇಕು ಅಂತ ಹೇಳಿದ್ದೆವು.

ವೇಣುಗೋಪಾಲ್ ನಾಯಕ ತನ್ನ ಮನೆ ಮೇಲೆ 'ಸಾವು ಖಾತ್ರಿ. ಹೀಗಿರುವಾಗ ಮರ, ಕಲ್ಲುಗಳಿಗಿಂದ ಸಾಯುವುದಕ್ಕಿಂತ ವೀರನಂತೆ ಸಾಯುವುದು ಒಳ್ಳೆಯದು' ಅಂತ ಸ್ಟಿಕ್ಕರ್ ಹಾಕಿಕೊಂಡಿದ್ದ. ಕೇವಲ ಸ್ಟಿಕ್ಕರ್ ಹಾಕಿಕೊಂಡಿರಲಿಲ್ಲ. ಅದೇ ರೀತಿ ಬದುಕಿ ಬಿಟ್ಟ, ನಿಮ್ಮ ಜತೆ ಕೂಲಿ ಮಾಡುತ್ತಿದ್ದ. ಕೂಲಿ ಮಾಡಿಕೊಂಡೇ ಬದುಕಬೇಕ? ಉದ್ಯಮ ಶುರು ಮಾಡುತ್ತಾನೆ. ಪ್ರೀತಿಯಿಂದ ಬದುಕುತ್ತಾನೆ. ಒಂದು ಕಾಲ್‌ಗೆ 40–50 ಜನ ಸೇರುವಷ್ಟು ಬೆಳೆದರೆ ಸಹಿಸುವುದಿಲ್ಲ ಎಂದರೆ ಸಮಾಜ ಅತ್ಯಂತ ಕ್ರೂರವಾಗಿ ತಲುಪಿದೆ ಅಂತ ಅರ್ಥ ಮಾಡಿಕೊಳ್ಳಿ ಎಂದು ಹೇಳಿದರು.

> 6 ಶ್ರದ್ಧಾಂಜಲಿ ಸಭೆ ನಡೆಸಲು ತಾಲೂಕು ಆಡಳಿತ ಅನುಮತಿ ನೀಡಲಿಲ್ಲ. ವೇಣುಗೋಪಾಲ್ ಮನೆ ಹತ್ತಿರ 20 ಜನ ಸೇರಿ ಮಾಡಿಕೊಳ್ಳಿ ಅಂದಿದ್ದರು. ಆದರೆ ಹೈಕೋರ್ಟ್‌ಗೆ ಹೋಗಿ ಹೋರಾಡಿ ಪರ್ಮಿಷನ್ ತರಬೇಕಾಯ್ತು. ಹಿಂದೂ ಸಮಾಜವನ್ನು ಹೆದರಿಸುವ, ಬೆದರಿಸುವ ಕೆಲಸ ಆಗುತ್ತಿದೆ. ನಮ್ಮದೇ ಹುಡುಗನ ಸಾವಿಗೆ ಶ್ರದ್ಧಾಂಜಲಿ ಸಭೆ ಮಾಡಲು ಅನುಮತಿ ಸಿಗಲ್ಲ ಅಂದ್ರೆ ಯಾವ ಸಮಾಜದಲ್ಲಿ ನಾವಿದ್ದೇವೆ ಕಂಬನಿ ಸುರಿಸಲು ಜಾಗ ಕೊಡಲ್ಲ ಅಂದರೆ ಏನು ಹೇಳಬೇಕು.
> –ಬಸನಗೌಡ ಪಾಟೀಲ್ ಯತ್ನಾಳ್

ಮೈಸೂರು ನಗರ ಪಾಲಿಕೆಯ ಮೇಯರ್ ಶಿವಕುಮಾರ್ ಹಾಗೂ ಮೃತ ವೇಣುಗೋಪಾಲ್ ಪತ್ನಿ ಪೂರ್ಣಿಮಾ ಮಾತನಾಡಿದರು. ಈ ವೇಳೆ ಶಾಸಕ ಶ್ರೀವತ್ಸ, ಡಾ. ರೇವಣ್ಣ, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಶಾಸಕ ಸಿದ್ದರಾಜು, ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಪುರಸಭಾ ಸದಸ್ಯ, ಎಸ್ ಕೆ ಕಿರಣ್, ಕ್ಷೇತ್ರ ಅಧ್ಯಕ್ಷ ಲೋಕೇಶ್ ನಾಯಕ್, ತೋಟದಪ್ಪ ಬಸವರಾಜು, ಕರುವಟ್ಟಿ ಮಹದೇವಯ್ಯ, ಕೆಬ್ಬೆಹುಂಡಿ ಶಿವಕುಮಾರ್, ನೆರಗತ್ನಹಳ್ಳಿ ಪುಟ್ಟಸ್ವಾಮಿ, ಚೌಹಳ್ಳಿ ಸಿದ್ದರಾಜು, ಯುವ ಮುಖಂಡ ಸಾಮ್ರಾಟ್ ಸುಂದರೇಶನ್, ಯುವ ಬ್ರಿಗೇಡ್‌ನ ರಾಮಾನುಜಂ, ಚೇತನ್, ಮೂಗೂರು ಸಿದ್ದರಾಜು ಇದ್ದರು.

## ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ10.35ಕ್ಕೆ, ಸಂ.4.10ಕ್ಕೆ, ಬಂಪರ್ (ತ): ಮ.1.25ಕ್ಕೆ, ನೀಯತ್ (ಹಿಂ): ರಾ.7ಕ್ಕೆ, ರಾ.9.40ಕ್ಕೆ.

ಸ್ಕ್ರೀನ್ 2 ಇನ್ಸಿಡಿಯಸ್ ದಿ ರೆಡ್ ಡೋರ್ (ಇಂ): ಬೆ11.30ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ನ್ಯಾನೋ ನಾರಾಯಣಪ್ಪ (ಕ): ಮ.1.45ಕ್ಕೆ, ರುದ್ರಾಂಗಿ (ತೆ): ಸಂ.4.30ಕ್ಕೆ.

ಸ್ಕ್ರೀನ್ 3 ರಾಯರು ಬಂದರು ಮಾವನ ಮನೆಗೆ (ಕ): ಬೆ.10.30ಕ್ಕೆ, ಓ ಸಾತಿಯಾ (ತೆ): ಮ.1.15ಕ್ಕೆ, ರಾ.10ಕ್ಕೆ, ಕಬಡಿ ಬ್ರೋ (ತ): ಸಂ.4ಕ್ಕೆ, 72 ಹೂರೇನ್ (ಹಿಂ): ಸಂ.6.25ಕ್ಕೆ, ರಾ.8.15ಕ್ಕೆ.

ಸ್ಕ್ರೀನ್ 4 ಮಧುರ ಮನೋಹರ ಮೋಹನ (ಮ): ಬೆ.10.50ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.1.25ಕ್ಕೆ, ರಾ.9.40ಕ್ಕೆ, ಶ್ರೀ ಪ್ರಸನ್ನ ವೆಂಕಟದಾಸರು (ಕ): ಸಂ.4.30ಕ್ಕೆ, ರಾ.7ಕ್ಕೆ.

## ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಸ್ಕ್ರೀನ್ 2 ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.

ಸ್ಕ್ರೀನ್ 3 ಸ್ಪೈ (ತೆ): ಬೆ.9.50ಕ್ಕೆ, ರಾ10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.

ಸ್ಕ್ರೀನ್ 4 ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

## ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಮಹಾವೀರುಡು (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಅಪರೂಪ (ಕ) | 2 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಡೇ ಅಂಡ್ ಸಮ್‌ಓನ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| 1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಓ ಮನಸೇ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಮಾಮನ್ನಾನ್ (ತ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಮಹಾವೀರನ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಮಿಷನ್ ಇಂಪಾಸಿಬಲ್ (ಇ) | 4 ಪ್ರದರ್ಶನಗಳು |
| **ಲಿಡೋ** | |
| ಬೇಬಿ (ತೆ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ರಾವಣಸುರ (ತ) | 4 ಪ್ರದರ್ಶನಗಳು |
| **ಪ್ರಭಾ** | |
| ಮಿಷ್ಟರಿ (ಕ) | 4 ಪ್ರದರ್ಶನಗಳು |

# ಇಂದಿನಿಂದ ಜು.30ರವರೆಗೆ ಉಚಿತ ಯೋಗ, ನಿಸರ್ಗ ಚಿಕಿತ್ಸಾ ಶಿಬಿರ



ನಂಜನಗೂಡು, ಜು.18– ಪೊಲೀಸ್ ಇಲಾಖೆ, ಬಸವ ಪತಂಜಲಿ ಯೋಗ ಸಮಿತಿ, ಕಾಯಕಯೋಗಿ ಬಸವೇಶ್ವರ ಸೇವಾ ಸಂಘ, ಭಾವಸಾರ್ ಭವನ್ ಟ್ರಸ್ಟ್ ಸಹಯೋಗದೊಂದಿಗೆ ಜು.19ರಿಂದ ಜು.30ರವರೆಗೆ ನಗರದ ಭಾವಸಾರ್ ಕಲ್ಯಾಣ ಮಂಟಪದಲ್ಲಿ ವೀರೇಶ್ ಗುರೂಜಿ ಅವರ ನೇತೃತ್ವದಲ್ಲಿ ಉಚಿತ ಯೋಗ ಮತ್ತು ನಿಸರ್ಗ ಚಿಕಿತ್ಸೆ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಯೋಗ ಶಿಕ್ಷಕ ಮಹದೇವ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.19 ರಿಂದ ಜು.30 ರವರೆಗೆ ಪ್ರತಿದಿನ ಬೆಳಗ್ಗೆ 5.30ರಿಂದ 7 ಗಂಟೆವರೆಗೆ ಯೋಗಾಸನ, ಪ್ರಾಣಾಯಾಮ ಮತ್ತು ಧ್ಯಾನ ತರಗತಿ ಹಾಗೂ 7 ರಿಂದ 8 ಗಂಟೆವರೆಗೆ ಸಮಾಲೋಚನೆ ಮತ್ತು ನಿಸರ್ಗ ಚಿಕಿತ್ಸೆ ನಡೆಯಲಿದೆ. ವಿಶೇಷವಾಗಿ ಬಿಪಿ, ಶುಗರ್, ಅಸ್ತಮಾ, ಸರ್ವಾಂಗ ವಾಯು, ಲಕ್ವ, ಥೈರಾಯ್ಡ್, ಬಿಳಿ ಮುಟ್ಟು, ಮುಟ್ಟಾಗದಿರುವಿಕೆ, ತಲೆನೋವು, ಸೊಂಟನೋವು, ಬೆನ್ನುನೋವು, ಚರ್ಮದ ಕಾಯಿಲೆ, ಕಿಡ್ನಿ ಕಲ್ಲು ಮುಂತಾದ ಆರೋಗ್ಯ ಸಮಸ್ಯೆಗಳಿಗೆ ಔಷಧ ರಹಿತ ಚಿಕಿತ್ಸೆ ನೀಡಲಾಗುವುದು.

ನಿಸರ್ಗ ಚಿಕಿತ್ಸೆಯಲ್ಲಿ ಎಣ್ಣೆ ಮಾಲಿಶ್, ಆಹಾರ ಚಿಕಿತ್ಸೆ ಬಸ್ತಿ ಕ್ರಿಯೆ, ಮಣ್ಣಿನ ಸ್ನಾನ, ಜಲ ಚಿಕಿತ್ಸೆ, ಉಪವಾಸ ಚಿಕಿತ್ಸೆ, ಯೋಗ ಚಿಕಿತ್ಸೆ ವಿರೇಚನ ಚಿಕಿತ್ಸೆ ಮತ್ತು ಬಸವ ಧ್ಯಾನದಂತಹ ಚಿಕಿತ್ಸೆಯನ್ನು ನೀಡಲಾಗುವುದು. ಜೊತೆಗೆ ಒಂದೇ ತಿಂಗಳಲ್ಲಿ 10 ಕೆಜಿವರೆಗೆ ತೂಕ ಕಡಿಮೆ ಮಾಡಿಕೊಳ್ಳಬಹುದಾದ ಆಹಾರ ಕ್ರಮವನ್ನು ತಿಳಿಸಲಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕೋಮಲ, ಮಹದೇವ ಶೆಟ್ಟಿ ಹೇಮಂತ್ ಕುಮಾರ್, ನಂಜುಂಡಸ್ವಾಮಿ, ಮನೋಜ್ ಕುಮಾರ್ ಇದ್ದರು.

# ಸಾಗರೆಯಲ್ಲಿ ಕ್ಷಯರೋಗ ಪತ್ತೆ ಜಾಥಾಕ್ಕೆ ಚಾಲನೆ



ಸರಗೂರು, ಜು.18– ಕ್ಷಯಮುಕ್ತ ಭಾರತವನ್ನಾಗಿ ಮಾಡುವುದು ಈ ಜಾಥಾದ ಉದ್ದೇಶವಾಗಿದ್ದು, ಇದಕ್ಕೆ ಸಾರ್ವಜನಿಕರ ಬೆಂಬಲ ಅಗತ್ಯ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ತಿಳಿಸಿದರು.

ತಾಲೂಕಿನ ಸಾಗರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುವ ಸಾಗರೆ ಗ್ರಾಮದಲ್ಲಿ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದ ಜಾಥಾಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಜು.17ರಿಂದ ಆ.8ರವರೆಗೆ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನ ಕಾರ್ಯಕ್ರಮವನ್ನು ರಾಜ್ಯಾದ್ಯಂತ ನಡೆಸಲಾಗುತ್ತಿದೆ. ಈ ಕಾರ್ಯಕ್ರಮದ ಉದ್ದೇಶ ಪ್ರತಿ ಗ್ರಾಮದಲ್ಲೂ ಆಶಾ ಕಾರ್ಯಕರ್ತೆಯರು ಮನೆ ಮನೆ ಸಮೀಕ್ಷೆ ಮಾಡಿ, ಕ್ಷಯರೋಗವನ್ನು ಪತ್ತೆ ಮಾಡಿ ಚಿಕಿತ್ಸೆ ನೀಡಿ ಗುಣಮುಖಗೊಳಿಸಬೇಕು. ಹಾಗೂ 2025ರೊಳಗೆ ಕ್ಷಯಮುಕ್ತ ಭಾರತವನ್ನಾಗಿ ಮಾಡುವುದು ಇದರ ಉದ್ದೇಶವಾಗಿದೆ ಎಂದರು.


ಕ್ಷಯರೋಗಿಯು ಕೆಮ್ಮಿದಾಗ ಅಥವಾ ಸೀನಿದಾಗ ಹೊರಬರುವ ತುಂತುರುಗಳಿಂದ ಈ ರೋಗಾಣುಗಳು ಗಾಳಿ ಮೂಲಕ ಆರೋಗ್ಯವಂತ ವ್ಯಕ್ತಿಯ ಶ್ವಾಸಕೋಶ ಸೇರಿ ಆತನಿಗೂ ಸೋಂಕು ಉಂಟಾಗುತ್ತದೆ. ಎರಡು ವಾರ ಅಥವಾ ಅದಕ್ಕಿಂತ ಮೇಲ್ಪಟ್ಟ ಸತತವಾದ ಕೆಮ್ಮು, ಜ್ವರ, ಅದರಲ್ಲೂ ಸಂಜೆ ವೇಳೆ ಜ್ವರ ಬರುವುದು, ಎದೆಯಲ್ಲಿ ನೋವು, ತೂಕ ಕಡಿಮೆಯಾಗುವುದು, ಹಸಿವಾಗದಿರುವುದು, ಕಫದಲ್ಲಿ ರಕ್ತ ಬೀಳುವುದು ಕ್ಷಯರೋಗದ ಲಕ್ಷಣಗಳು ಎಂದರು.

ಎಚ್‌ಐವಿ ಮತ್ತು ಏಡ್ಸ್ ಸೋಂಕಿರುವ ವ್ಯಕ್ತಿಗಳಲ್ಲಿ ಮತ್ತು ಮಧುಮೇಹ ಕಾಯಿಲೆ ಇರುವ ವ್ಯಕ್ತಿಗಳಲ್ಲಿ ರೋಗನಿರೋಧಕ ಶಕ್ತಿ ಕುಂಠಿತವಾಗಿರುವುದರಿಂದ ಆ ವ್ಯಕ್ತಿಗಳು ಕ್ಷಯರೋಗದ ಸೋಂಕಿಗೆ ಬೇಗನೆ ಒಳಗಾಗುತ್ತಾರೆ. ಕ್ಷಯರೋಗವನ್ನು ಎರಡು ಬಾರಿ ಕಫಪರೀಕ್ಷೆ ಮಾಡುವುದರ ಮುಖಾಂತರ ಕಂಡು ಹಿಡಿಯಬಹುದು ಎಂದರು.

**ರೋಗವನ್ನು ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳು:** ಕ್ಷಯರೋಗಿಗಳು ಕೆಮ್ಮುವಾಗ ಮತ್ತು ಸೀನುವಾಗ ಬಾಯಿ ಮತ್ತು ಮೂಗಿನ ಹತ್ತಿರ ಕರವಸ್ತ್ರವನ್ನು ಇಟ್ಟುಕೊಳ್ಳಬೇಕು. ರೋಗಿಯು ಕಫವನ್ನು ಮನಸ್ಸಿಗೆ ಬಂದ ಕಡೆ ಉಗಿಯಬಾರದು. ಕಫವನ್ನು ಡಬ್ಬಿಯಲ್ಲಿ ಶೇಖರಿಸಿ ಸುಟ್ಟು ಹಾಕಬೇಕು ಅಥವಾ ಗುಂಡಿ ತೋಡಿ ಹೂಳಬೇಕು. ನವಜಾತ ಶಿಶುಗಳಿಗೆ ಬಿಸಿಜಿ ಲಸಿಕೆ ಹಾಕಿಸಬೇಕು. ನಿಮ್ಮ ಮನೆಗಳಲ್ಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕ್ಷಯರೋಗದ ಲಕ್ಷಣ ಉಳ್ಳವರನ್ನು ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ಉಚಿತ ಕಫ ಪರೀಕ್ಷೆಗಾಗಿ ಕಳಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಗ್ರಾಪಂ ಕೇಂದ್ರದ ವೈದ್ಯಾಧಿಕಾರಿ ಡಾ. ಕಿರಣ್‌ಕುಮಾರ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ನಾಗರಾಜ್, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಮೃತ್ಯುಂಜಯ, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರಾದ ನಾಗರಾಜ್, ಕೃಷ್ಣ ಸೋಮಣ್ಣ ರವಿರಾಜ್, ಉಮೇಶ್, ಸಮುದಾಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತರು, ಸಾರ್ವಜನಿಕರು, ಮಕ್ಕಳು ಹಾಜರಿದ್ದರು.

# ಜಲಸಮಾಧಿಯಾಗಿದ್ದ ಬಾಲಕಿ ಮೃತದೇಹ ಪತ್ತೆ



ಭೇರ್ಯ, ಜು.18– ನೀರು ಕುಡಿಯಲು ಕಾವೇರಿ ನದಿಗೆ ತೆರಳಿ ಜಲಸಮಾಧಿಯಾಗಿದ್ದ ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿಯ ಬಾಲಕಿ ಸ್ಫೂರ್ತಿ(13)ಯ ಮೃತದೇಹ ಕಪ್ಪಡಿ ಕ್ಷೇತ್ರದಿಂದ ಕಿಲೋ ಮೀಟರ್ ದೂರದಲ್ಲಿ ಪತ್ತೆಯಾಗಿದೆ.

ಅಗ್ನಿಶಾಮಕ ದಳದ ಅಧಿಕಾರಿಗಳು ಮತ್ತು ಸಿಬ್ಬಂದಿ ವ್ಯಾಪಕವಾಗಿ ಶೋಧ ನಡೆಸಿತ್ತು. ಆದರೂ ಸಹ ಬಾಲಕಿ ಶವ ಪತ್ತೆಯಾಗಿರಲಿಲ್ಲ. ಇಂದು ಮುಂಜಾನೆ ಮೀನುಗಾರರಿಗೆ ಬಾಲಕಿ ಸ್ಫೂರ್ತಿ ಶವ ದೊರೆತಿದ್ದು, ಕೂಡಲೇ ಸಂಬಂಧಪಟ್ಟವರಿಗೆ ಮಾಹಿತಿ ತಿಳಿಸಿ ಸ್ಥಳಕ್ಕೆ ಕೆ.ಆರ್.ನಗರ ಪೊಲೀಸರು ಆಗಮಿಸಿ ಬಾಲಕಿಯ ಶವದ ಮಹಜರ್ ಮತ್ತು ಮರಣೋತ್ತರ ಪರೀಕ್ಷೆ ನಡೆಸಿ ಪೋಷಕರಿಗೆ ಒಪ್ಪಿಸಲಾಯಿತು.

ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ಬಾಲಕಿ ಗಂಧನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿದ್ದಳು. ಸ್ಥಳಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಆರ್. ಕೃಷ್ಣಪ್ಪ ಭೇಟಿ ನೀಡಿ ಮೃತ ಬಾಲಕಿ ಕುಟುಂಬದವರಿಗೆ ಸಾಂತ್ವನ ಹೇಳಿದರಲ್ಲದೆ, ಸರ್ಕಾರದಿಂದ ಸೂಕ್ತ ಪರಿಹಾರ ದೊರಕಿಸಿ ಕೊಡುವುದಾಗಿ ಭರವಸೆ ನೀಡಿದರು.

**ಕೆಪಿಸಿಸಿ ಸದಸ್ಯರ ಭೇಟಿ :** ತಾಲ್ಲೂಕಿನ ಕೆಪಿಸಿಸಿ ಸದಸ್ಯ ದೊಡ್ಡಸ್ವಾಮಿಗೌಡ ಕಾವೇರಿ ನದಿಯಲ್ಲಿ ಕಾಲು ಜಾರಿ ಮೃತಳಾದ ಗಂಧನಹಳ್ಳಿ ಗ್ರಾಮದ ಬಾಲಕಿ ಸ್ಫೂರ್ತಿ ಮನೆಗೆ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದರಲ್ಲದೆ, ಶಾಸಕ ಡಿ.ರವಿಶಂಕರ್ ಜೊತೆ ಚರ್ಚಿಸಿ ಸರ್ಕಾರದಿಂದ ಸೂಕ್ತವಾದ ಪರಿಹಾರ ಕೊಡಿಸುವ ಭರವಸೆ ನೀಡಿದರು.

# ಪ್ರಾಥಮಿಕ ಕೃಷಿ ಪತ್ತಿನ ಸಹಕಾರಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ. ನರಸೀಪುರ, ಜು.18– ತಾಲೂಕಿನ ಮುಸುವಿನಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಎರಡನೇ ಬಾರಿಗೆ ಅಧ್ಯಕ್ಷರಾಗಿ ಎಂ.ಶಿವರಾಮ್, ಉಪಾಧ್ಯಕ್ಷರಾಗಿ ಕೆಬ್ಬೆಹುಂಡಿ ಮಹೇಶ್, ಅವಿರೋಧವಾಗಿ ಆಯ್ಕೆಯಾದರು.

ತಾಲೂಕಿನ ಮುಸುವಿನಕೊಪ್ಪಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶಿವರಾಂ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಕೆಬ್ಬೆಹುಂಡಿ ಮಹೇಶ್ ಅವರು ನಾಮಪತ್ರ ಸಲ್ಲಿಸಿದರು. ಇನ್ಯಾರು ನಾಮಪತ್ರ ಸಲ್ಲಿಸದ ಕಾರಣ ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಅವಿರೋಧ ಆಯ್ಕೆ ಎಂದು ಘೋಷಿಸಿದರು

ನೂತನ ಅಧ್ಯಕ್ಷ ಎಂ.ಶಿವರಾಮ್ ಮಾತನಾಡಿ, ಸಹಕಾರ ಸಂಘದಲ್ಲಿ ಈಗಾಗಲೇ ನಾವು ಸರ್ಕಾರದಿಂದ ಬಂದಿರುವ ಸಾಲ ಮನ್ನಾ, ಯೋಜನೆ ಮತ್ತು ಮಹಿಳಾ ಸ್ವಸಹಾಯ ಸಂಘಗಳಿಗೆ ಹೆಚ್ಚಿನ ಸಾಲ ನೀಡಿದ್ದು ಮುಂದಿನ ದಿನಗಳಲ್ಲಿ ರೈತರಿಗೆ ಬೇಕಾಗುವ ಗೊಬ್ಬರ ಇನ್ನಿತರ ಪದಾರ್ಥಗಳನ್ನು ನೀಡುವ ಮೂಲಕ ನಮ್ಮ ಸಂಘವನ್ನು ಮಾದರಿಯನ್ನಾಗಿ ಮಾಡುತ್ತೇವೆ ಎಂದರು. ಮೇಲ್ವಿಚಾರಕರಾದ ರಾಜಪ್ಪ, ರಮೇಶ್, ಸಹಾಯಕ ಚುನಾವಣೆ ಅಧಿಕಾರಿ ಹಾಗೂ ಕಾರ್ಯದರ್ಶಿ ಎನ್. ರಾಜು, ನಿರ್ದೇಶಕರಾದ ಎಂ.ಚಂದ್ರಪ್ಪ, ಮಹದೇವಯ್ಯ, ಶಿವಣ್ಣ, ಪುಟ್ಟಮಾದಯ್ಯ, ಎಂ.ಕೆಬ್ಬೆಹುಂಡಿ ಮಹೇಶ್ ಶಿವಕುಮಾರ್ ಸ್ವಾಮಿ, ನಿಂಗರಾಜು, ಚಿಕ್ಕಮಾದನಾಯಕ, ಶಾಂತಮ್ಮ, ಕಮಲಮ್ಮ ಗುಮಾಸ್ತ ಮಣಿಕಂಠ ಹಾಜರಿದ್ದರು

# ಬನ್ನೂರಿನಲ್ಲಿ ಕೆಂಪೇಗೌಡರ ಜನ್ಮದಿನ ಆಚರಣೆ



ಬನ್ನೂರು, ಜು.18– ನಾಡಪ್ರಭು ಕೆಂಪೇಗೌಡ ಒಂದು ಜಾತಿ, ಒಂದು ವರ್ಗ, ಒಂದು ಗುಂಪಿಗೆ ಸೀಮಿತರಾದವರಲ್ಲ. ದೂರದೃಷ್ಟಿ ಹೊಂದಿದ್ದ ಅವರು ಎಲ್ಲ ವರ್ಗದ ಏಳಿಗೆಗೆ ಶ್ರಮಿಸುತ್ತ ನಾಡನ್ನು ಅಭಿವೃದ್ಧಿಗೊಳಿಸುವುದಕ್ಕೆ ಭದ್ರವಾದ ಅಡಿಪಾಯವನ್ನು ಹಾಕುವ ಮೂಲಕ ಅಭಿವೃದ್ಧಿಗೆ ಮುನ್ನುಡಿ ಬರೆದವರು. ಅವರ ಬದುಕು ಎಲ್ಲರಿಗೂ ಮಾದರಿಯಾಗಿದೆ ಎಂದು ಸಮಾಜ ಸೇವಕ ವೈಎಸ್. ರಾಮಸ್ವಾಮಿ ತಿಳಿಸಿದರು.

ಪಟ್ಟಣದ ಸಮೀಪದ ಬಸವೇಶ್ವರ ವೃತ್ತದಲ್ಲಿ ಕೆಂಪೇಗೌಡರ 514ನೇ ಜನ್ಮದಿನದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಕೆಂಪೇಗೌಡರು ಜಾತಿ ವ್ಯವಸ್ಥೆಯಿಂದ ಹೊರಬಂದು ಹಿಂದುಳಿದ ಬದುಕುಗಳಿಗೆ ಪ್ರೇರಣೆಯಾಗಿದ್ದರು ಎಂದು ತಿಳಿಸಿದರು.

ಪ್ರೊ. ನಾಗರಾಜುರವರು, ಕೆಂಪೇಗೌಡರ ಬದುಕಿನ ಇತಿಹಾಸವನ್ನು ಜನರಿಗೆ ಪರಿಚಯವನ್ನು ಮಾಡಿಕೊಟ್ಟರಲ್ಲದೇ ಇಂದಿಗೂ ಕೆಂಪೇಗೌಡರ ವಂಶಸ್ಥರು ತಮಿಳುನಾಡಿನ ಗ್ರಾಮವೊಂದರಲ್ಲಿ ನೆಲೆನಿಂತಿದ್ದಾರೆಂದು ಅವರ ಬಗ್ಗೆ ತಿಳಿಸಿಕೊಟ್ಟರು. ಕೆಂಪೇಗೌಡರ ಆಡಳಿತಾವಧಿಯಲ್ಲಿ ಆದ ಕೆಲಸಕಾರ್ಯಗಳು, ಅವರ ದೂರದೃಷ್ಟಿತ್ವದ ನಿದರ್ಶನಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೆಂಪೇಗೌಡರ ಇತಿಹಾಸದ ಬಗ್ಗೆ ಅಧ್ಯಯನ, ಸಂಶೋಧನೆ ನಡೆಸುತ್ತಿರುವ ಮನೋವೈದ್ಯ ಡಾ. ರವೀಶ್‌ರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ಎಂ. ಪ್ರಕಾಶ್, ತುರಗನೂರು ರಾಜೇಶ್, ಅತ್ತಹಳ್ಳಿ ಕೆಂಪೇಗೌಡ, ಶಂಕರೇಗೌಡ, ನಾರಾಯಣಸ್ವಾಮಿ, ಮೇಗಲಕೊಪ್ಪಲು ಜಯರಾಂ, ರಾಮಚಂದ್ರ, ಕೃಷ್ಣೇಗೌಡ ಸೇರಿದಂತೆ ಕೆಂಪೇಗೌಡರ ಅಭಿಮಾನಿಗಳು, ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.

# ರೈತರಿಗೆ ಸ್ಪಂದಿಸದ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗೆ ವರದಿ

## ರೈತರ ಕುಂದು-ಕೊರತೆ ಸಭೆಯಲ್ಲಿ ತಹಶಿಲ್ದಾರ್ ಸಣ್ಣರಾಮಪ್ಪ ಎಚ್ಚರಿಕೆ



ಹೆಚ್.ಡಿ.ಕೋಟೆ, ಜು.18– ತಾಲೂಕಿನಲ್ಲಿ ಅಧಿಕಾರಿಗಳು ರೈತರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಲಾಗುತ್ತದೆ ಎಂದು ತಹಶಿಲ್ದಾರ್ ಸಣ್ಣರಾಮಪ್ಪ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ತಾಲೂಕು ಆಡಳಿತ ಭವನದ ಸಭಾಂಗಣದಲ್ಲಿ ಮಂಗಳವಾರ ರೈತರ ಕುಂದು ಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರತಿ ಸಭೆಗೆ ತಾಲೂಕು ಮಟ್ಟದ ಅಧಿಕಾರಿಗಳು ತಾವು ಬರದೆ ತಮ್ಮ ಅಧೀನದ ಸಿಬ್ಬಂದಿಗಳನ್ನು ಕಳುಹಿಸುವುದರಿಂದ ರೈತರ ಸಮಸ್ಯೆಗಳನ್ನು ಸಮರ್ಪಕವಾಗಿ ಬಗೆಹರಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಮುಂದಿನ ಸಭೆಗಳಲ್ಲಿ ಇಲಾಖಾ ಅಧಿಕಾರಿಗಳು ತಪ್ಪದೆ ಹಾಜರಾಗಬೇಕು. ತಪ್ಪಿದಲ್ಲಿ ಅವರ ವಿರುದ್ಧ ಜಿಲ್ಲಾಧಿಕಾರಿಗಳಿಗೆ ವರದಿ ಮಾಡಲಾಗುತ್ತದೆ ಎಂದು ತಿಳಿಸಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಮಹಾದೇವ ನಾಯಕ ಮಾತನಾಡಿ, ರೈತರ ಶ್ರಮ ಎಷ್ಟು ಇದೆ ಎಂಬುದನ್ನು ಅಧಿಕಾರಿ ವರ್ಗ ಮನಗಾಣಬೇಕು. ರೈತರ ಸಮಸ್ಯೆಗೆ ಸ್ಪಂದಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ನಂತರ ಕೃಷಿ ಅಧಿಕಾರಿ ಉದ್ದೇಶಿಸಿ ಮಾತನಾಡಿ, ರೈತರು ಗೊಬ್ಬರದ ಅಂಗಡಿಗಳಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ ಇನ್ನಿತರ ಪದಾರ್ಥಗಳ ಸ್ಟಾಕ್‌ಗಳನ್ನು ನಾಮಫಲಕದಲ್ಲಿ ಹಾಕುತ್ತಿಲ್ಲ. ಇದರ ಬಗ್ಗೆ ಈ ಹಿಂದಿನ ಸಭೆಯಲ್ಲಿ ತಿಳಿಸಿದರೂ ಕೂಡ ತಾವು ಯಾವುದೇ ಕ್ರಮ ವಹಿಸಿಲ್ಲ ಎಂದು ದೂರಿದರು.

ಅದಕ್ಕೆ ಕೃಷಿ ಅಧಿಕಾರಿ ರಂಗಸ್ವಾಮಿ ಮಾತನಾಡಿ, ಅಂಗಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ ಎಂದರು. ಈ ಉತ್ತರದಿಂದ ತೃಪ್ತರಾಗದ ರೈತರು ನೀವು ಅಂಗಡಿಗಳಿಗೆ ಭೇಟಿ ನೀಡಿದರೆ ಸಾಲದು. ಗೊಬ್ಬರದ ಅಂಗಡಿಗಳಲ್ಲಿ ಎಷ್ಟು ಸ್ಟಾಕ್ ಇದೆ ಎಂಬುದನ್ನು ಪರಿಶೀಲನೆ ಮಾಡಬೇಕು ಎಂದು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೃಷಿ ಅಧಿಕಾರಿ, ನಾನು ಈಗಾಗಲೇ ಅಂಗಡಿಗಳಿಗೆ ಭೇಟಿ ನೀಡಿ ನಿಯಮ ಉಲ್ಲಂಘನೆ ಮಾಡಿದ ಅಂಗಡಿಗಳಿಗೆ ಎರಡು ನೋಟೀಸ್ ಜಾರಿ ಮಾಡಿದ್ದೇನೆ ಎಂದರು. ಅಂತಿಮ ನೋಟೀಸ್ ಜಾರಿ ಮಾಡಿದ ನಂತರ ಅಂಗಡಿ ಮಾಲೀಕರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿ, ನಾನು ಕಳೆದ ತಿಂಗಳು ಅಂಗಡಿ ಮಾಲೀಕರ ಸಭೆ ಕರೆದು ರೈತರಿಗೆ ಯಾವುದೇ ತೊಂದರೆ ಆಗದಂತೆ ಬಿತ್ತನೆ ಬೀಜ, ರಸಗೊಬ್ಬರ ವಿತರಣೆ ಮಾಡಬೇಕು ಎಂದು ಸೂಚಿಸಲಾಗಿದೆ. ರೈತರಿಗೆ ಮಾಹಿತಿ ನೀಡುವ ಉದ್ದೇಶದಿಂದ ನಾನು ಶನಿವಾರ, ಭಾನುವಾರ ರಜೆ ಎಂಬುದನ್ನು ಲೆಕ್ಕಿಸದೆ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದೇನೆ ಎಂದು ತಿಳಿಸಿದರು.

ತಾಲೂಕಿನಲ್ಲಿ 480 ಗ್ರಾಮಗಳಿದ್ದು, ಕೃಷಿ ಇಲಾಖೆಯಲ್ಲಿ ಇರುವುದು ಕೇವಲ ಇಬ್ಬರು ಅಧಿಕಾರಿಗಳು. ಇಷ್ಟಿದ್ದರೂ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ನೀರಾವರಿ ಇಲಾಖೆ ಸಂಬಂಧಿಸಿದಂತೆ ಮಾತನಾಡಿದ ರೈತರು, ಗದ್ದೆಗಳಿಗೆ ಜಲಾಶಯದಿಂದ ನೀರು ಬಿಡುವ ಮುಂಚೆ ಬಿತ್ತನೆ ಬೀಜ ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ನಾಲೆ ಜಾಗದಲ್ಲಿ ಮನೆ ನಿರ್ಮಾಣ ಮಾಡಿಕೊಂಡಿದ್ದಾರೆ, ನೀವು ಮನೆ ನಿರ್ಮಾಣ ಆಗುವುದಕ್ಕೂ ಮುಂಚೆ ಯಾಕೆ ಕ್ರಮ ಕೈಗೊಳ್ಳಲಿಲ್ಲ ಎಂದು ರೈತ ಮುಖಂಡ ರವಿಕುಮಾರ್ ನೀರಾವರಿ ಅಧಿಕಾರಿಗಳನ್ನು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ತಾರಕ ನೀರಾವರಿ ಅಧಿಕಾರಿ ನಟಶೇಖರ ಮೂರ್ತಿ, ನಾಲೆ ಅಕ್ಕಪಕ್ಕದ ಒಂದು ಮತ್ತು ಎರಡು ಮೀಟರ್ ಜಾಗ ಬಿಟ್ಟು ಮನೆ ಕಟ್ಟಿಕೊಳ್ಳಲು ಅವಕಾಶ ಇದೆ. ಅದನ್ನು ಮೀರಿ ಕಟ್ಟಿದ್ದರೆ ನಮ್ಮಿಂದ ಅನುಮತಿ ಪಡೆದು ಮನೆ ನಿರ್ಮಿಸಿಕೊಳ್ಳಬೇಕು. ಇಂತಹ ಪ್ರಕರಣಗಳು ಇಲಾಖೆ ಗಮನಕ್ಕೆ ಬಂದಿಲ್ಲ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ತಹಶಿಲ್ದಾರ್ ಸಣ್ಣರಾಮಪ್ಪ, ಡಾ.ಟಿ.ರವಿಕುಮಾರ್, ಎಇಓ ರಂಗಸ್ವಾಮಿ, ರೈತ ಸಂಘದ ಮಹಾದೇವನಾಯಕ, ರವಿಕುಮಾರ್, ಬಸವರಾಜು, ಹೋಟೆಲ್ ಪ್ರಸಾದ್, ಮಿಲ್ ನಾಗರಾಜು, ಸಣ್ಣಕುಮಾರ್, ಕೃಷ್ಣ, ಸುಗುಣ, ರಾಮಸ್ವಾಮಿ, ರಂಗಸ್ವಾಮಿ, ಜನಾರ್ದನ್ ಇದ್ದರು.

# ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ವಿಶೇಷ ಪೂಜೆ

ಮೂಗೂರು, ಜು.18– ಹೊಸಹಳ್ಳಿ ಗ್ರಾಮದ ನೇರಳೆ ಮರದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ಭೀಮನ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳು ಸಹಸ್ರಾರು ಮಂದಿ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಹೊಸಹಳ್ಳಿ ಗ್ರಾಮದ ಚಿಗುರು ಕಡಿಯುವ ಕ್ಷೇತ್ರ ಎಂದೇ ಪ್ರಸಿದ್ಧಿ ಪಡೆದ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇಗುಲದಲ್ಲಿ ಬೆಳಗ್ಗೆಯಿಂದಲೇ ಅಮ್ಮನವರಿಗೆ ಅಭಿಷೇಕ ಅರ್ಚನೆಯೊಂದಿಗೆ ದೇವಾಲಯವನ್ನು ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಾನಾ ಭಾಗಗಳಿಂದ ಆಗಮಿಸಿದ್ದ ಭಕ್ತರು ಅಮ್ಮನವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

3ನೇ ವರ್ಷದ ವಾರ್ಷಿಕೋತ್ಸವ ಅಂಗವಾಗಿ ಹೊಸಹಳ್ಳಿ ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಸೇವಾ ಸಮಿತಿ, ಹಾಗೂ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು, ಭಕ್ತರ ನೆರವಿನಿಂದ ಅನ್ನಸಂತರ್ಪಣೆ ಕಾರ್ಯಕ್ಕೆ ಬಾಣಹಳ್ಳಿ ಭಿಕ್ಷ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅವರು ಚಾಲನೆ ನೀಡಿದರು. ಸೇವಾ ಸಮಿತಿ ಗೌರವಾಧ್ಯಕ್ಷ ಪುಟ್ಟಬುದ್ಧಪ್ಪ, ಮಹೇಶ್, ಉಪಾಧ್ಯಕ್ಷ ಬಸವರಾಜು, ಪ್ರಧಾನ ಕಾರ್ಯದರ್ಶಿ ಸುರೇಶ್, ಅರ್ಚಕರಾದ ಸಮಿತಿಯ ಪದಾಧಿಕಾರಿಗಳು ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಮಹಾಘಟಬಂಧನ್ ನಾಯಕರಿಗೆ ಆತಿಥ್ಯ ನೀಡಲು ಐಎಎಸ್ ಬಳಕೆ

**● ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ● ಕಾಂಗ್ರೆಸ್‌ನಿಂದ ರಾಜ್ಯದಲ್ಲಿ ಐಎಎಸ್ ಜೀತ ಪದ್ಧತಿ ಜಾರಿ: ಟ್ವೀಟ್ ಮೂಲಕ ಕಿಡಿ**



ಬೆಂಗಳೂರು, ಜು.18(ಕೆಎಂಶಿ)–ಘಟಬಂಧನ್ ಸಭೆಗೆ ಆಗಮಿಸಿರುವ ಹೊರರಾಜ್ಯದ ರಾಜಕೀಯ ನಾಯಕರ ಆತಿಥ್ಯಕ್ಕೆ ಐಎಎಸ್ ಅಧಿಕಾರಿಗಳ ನಿಯೋಜನೆ ಮಾಡಿರುವ ರಾಜ್ಯ ಸರ್ಕಾರ ಹಾಗೂ ಆಡಳಿತ ಪಕ್ಷ ಕಾಂಗ್ರೆಸ್ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಟೀಕಾಪ್ರಹಾರ ನಡೆಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಐಎಎಸ್ ಜೀತ ಪದ್ಧತಿಯನ್ನು ಜಾರಿಗೆ ತಂದು ಕರ್ನಾಟಕದ ಹೆಮ್ಮೆ, ಪರಂಪರೆಗೆ ಘಟಶ್ರಾದ್ಧ ಮಾಡಿದೆ ಎಂದು ಕಿಡಿಕಾರಿದ್ದಾರೆ. ಅಧಿಕಾರ ಬಂಧನಕ್ಕಾಗಿ ಘಟಬಂಧನಕ್ಕೆ ಒಳಗಾದ ಕಾಂಗ್ರೆಸ್ ಪಕ್ಷವು ಕರ್ನಾಟಕದ ಹೆಮ್ಮೆ, ಪರಂಪರೆ, ಸ್ವಾಭಿಮಾನಕ್ಕೆ ಘಟಶ್ರಾದ್ಧ ಮಾಡಿದೆ. ಘಟಬಂಧನಕ್ಕೆ ಬಂದ ಹೊರ ರಾಜ್ಯದ ರಾಜಕಾರಣಿಗಳ ಸೇವೆಗೆ ರಾಜ್ಯದ ಹೆಮ್ಮೆಯ ಐಎಎಸ್ ಅಧಿಕಾರಿಗಳನ್ನು ಕಳಿಸಿದ ಕಾಂಗ್ರೆಸ್ ಸರಕಾರದ ನಡೆ ತಪ್ಪು. ನುಡಿದಂತೆ ನಡೆಯುವುದು ಎಂದರೆ ಇದೇನಾ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ಇದು ರಾಜ್ಯ ಸರಕಾರಿ ಕಾರ್ಯಕ್ರಮ ಅಲ್ಲ, ಹೊಸ ಸರಕಾರದ ಪ್ರಮಾಣ ಸ್ವೀಕಾರವೂ ಅಲ್ಲ. ಕೇವಲ ರಾಜಕೀಯ ಸಭೆಯಷ್ಟೇ. ಇಂಥ ಸಭೆಗೆ ಬಂದ ರಾಜಕೀಯ ನಾಯಕರಿಗೆ ಆತಿಥ್ಯ ನೀಡಲು ಜವಾಬ್ದಾರಿಯುತ ಅಧಿಕಾರಿಗಳನ್ನು ಕಳಿಸಿದ್ದು ಆರೂವರೆ ಕೋಟಿ ಕನ್ನಡಿಗರಿಗೆ ಎಸಗಿದ ಘೋರ ಅಪಚಾರ ಹಾಗೂ ರಾಜ್ಯದ ಪಾಲಿಗೆ ಮಹಾ ದುರಂತ ಎಂದು ಹೇಳಿದ್ದಾರೆ. ಯಾವುದೇ ಒಂದು ರಾಜ್ಯದ ಅಭಿವೃದ್ಧಿ, ಆಡಳಿತ, ಮುನ್ನಡೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಐಎಎಸ್ ಅಧಿಕಾರಿಗಳು ಕೇವಲ ಅಧಿಕಾರಿಗಳಷ್ಟೇ ಅಲ್ಲ; ಆಯಾ ರಾಜ್ಯಗಳ ಕ್ಷಮತೆ, ದಕ್ಷತೆಯ ಪ್ರತೀಕ. ಅಂಥವರನ್ನು ಇನ್ನೊಬ್ಬರ ಅಜ್ಞಾಪಾಲಕರನ್ನಾಗಿ ಮಾಡಿ, ಬಾಗಿಲು ಕಾಯುವ ಕೆಲಸ ಹಚ್ಚಿದ್ದು ಆಡಳಿತ ಪಕ್ಷದ ಅಹಂಕಾರದ ಪರಮಾವಧಿ ಎಂದು ಕುಮಾರ ಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಇದು ನಿಶ್ಚಿತವಾಗಿಯೂ ಐಎಎಸ್ ಸೇವಾ ನೀತಿ ಸಂಹಿತೆಯ ಉಲ್ಲಂಘನೆ. ಇದು ತಮ್ಮ ಸ್ವಾಭಿಮಾನ, ಗೌರವಕ್ಕೆ ಧಕ್ಕೆ ತರುವಂತದ್ದು ಎಂದು ಗೊತ್ತಿದ್ದರೂ ಅಧಿಕಾರಿಗಳು ಈ ಕೆಲಸಕ್ಕೆ ಒಪ್ಪಿದ್ದು ನನಗೆ ಅತೀವ ಅಚ್ಚರಿ, ಆಘಾತ ಉಂಟು ಮಾಡಿದೆ. ಇಂಥ ವಿವಾದಾಸ್ಪದ ಆದೇಶ ಹೊರಡಿಸಿದ ಮುಖ್ಯ ಕಾರ್ಯದರ್ಶಿಗಳು ಜನತೆಗೆ ಉತ್ತರ ಕೊಡಲೇಬೇಕಿದೆ ಎಂದು ಅವರು ಒತ್ತಾಯ ಮಾಡಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿರುವ ಕಾಂಗ್ರೆಸ್ ಪಕ್ಷ, ರಾಜ್ಯದಲ್ಲಿ 'ಐಎಎಸ್ ಜೀತ ಪದ್ಧತಿ'ಯನ್ನು ಜಾರಿಗೆ ತರುವ ಮೂಲಕ ಹೊಸ ನಮೂನೆಯ 'ರಾಜಕೀಯ, ಆಡಳಿತ ವಸಾಹತುಶಾಹಿ'ಯನ್ನು ದೇಶಕ್ಕೆ ಪರಿಚಯ ಮಾಡಿದೆ. ಹೌದು; ಕಾಂಗ್ರೆಸ್ ಯಾವಾಗಲೂ ಕುಖ್ಯಾತಿಗಳಿಗೇ ಕುಖ್ಯಾತಿ. ಅಂಥ ಅಪಾಯಕಾರಿ ಹಸ್ತಾಸಿಯೇ ಕೈ ಪಕ್ಷದ ಆಸ್ತಿ ಎಂದು ಕಾಂಗ್ರೆಸ್ ಪಕ್ಷವನ್ನು ತೀವ್ರವಾಗಿ ಕುಟುಕಿದ್ದಾರೆ. 135 ಸೀಟು ಕೊಟ್ಟ ತಪ್ಪಿಗೆ ಕನ್ನಡಿಗರಿಗೆ ವಿಪರೀತ ದರ್ಪ ತೋರಿದೆ ಕಾಂಗ್ರೆಸ್. ಸತ್ಯಯುಗದಲ್ಲಿ ಹಿರಣ್ಯಕಶಿಪು ಅಷ್ಟದಿಕ್ಪಾಲಕರನ್ನು ಸೆರೆಹಿಡಿದು ಮೆಟ್ಟಿಲು ಮಾಡಿಕೊಂಡ ಪಾಪಕ್ಕೆ ಸರ್ವನಾಶವಾದ. ಕಾಂಗ್ರೆಸ್ ಕೂಡ 30 ಐಎಎಸ್ ಅಧಿಕಾರಿಗಳನ್ನು ರಾಜಕಾರಣಿಗಳ ದ್ವಾರಪಾಲಕರನ್ನಾಗಿ ಮಾಡುವ ಮೂಲಕ ತನ್ನ ನಾಶಕ್ಕೆ ತಾನೇ ನಾಂದಿ ಹಾಡಿದೆ ಎಂದು ಅವರು ಹೇಳಿದ್ದಾರೆ.

## ಬಲಿಜ ಪದ ದುರ್ಬಳಕೆ ಆರೋಪ: ರಾಜ್ಯ ಸಮಗ್ರ ಬಲಿಜ ವೇದಿಕೆ ಆಕ್ಷೇಪ

ಮೈಸೂರು,ಜು.18(ಎಂಕೆ)–ಕ್ರೈಸ್ತ ಸಮುದಾಯದ ಕೆಲ ಸಂಘಟಕರು 'ಕರ್ನಾಟಕ ಕ್ರೈಸ್ತ ಬಲಿಜ ಸಮಿತಿ' ಎಂಬ ಸಂಘ ಸ್ಥಾಪಿಸಿಕೊಳ್ಳುವ ಮೂಲಕ 'ಬಲಿಜ' ಪದವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಕರ್ನಾಟಕ ರಾಜ್ಯ ಸಮಗ್ರ ಬಲಿಜ ವೇದಿಕೆ ಆಕ್ಷೇಪ ವ್ಯಕ್ತಪಡಿಸಿದೆ. ಜು.16 ರಂದು ಬೆಂಗಳೂರಿನ ದೊಡ್ಡಬಸವನಪುರದಲ್ಲಿ 'ಕರ್ನಾಟಕ ಕ್ರೈಸ್ತ ಬಲಿಜ ಸಮಿತಿ'ಯ 2ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ನಡೆಸಲಾಗಿದೆ. ಆದರೆ ಕ್ರೈಸ್ತ ಸಂಘಟನೆಗಳ ಜೊತೆ ಬಲಿಜ, ಬಣಜಿಗ ಸಂಘವನ್ನು ಬೆರೆಸುವುದು ಸರಿಯಲ್ಲ. ಕ್ರೈಸ್ತ ಸಂಘಟನೆಗಳು ಅದೇ ಹೆಸರಿನಲ್ಲಿರಬೇಕೇ ಹೊರತು ಹಿಂದೂ ಧರ್ಮಕ್ಕೆ ಸೇರಿದ ಬಲಿಜ ಸಮುದಾಯದ ಹೆಸರನ್ನು ಬಳಸಬಾರದು ಎಂದು ರಾಜ್ಯ ಸಮಗ್ರ ಬಲಿಜ ವೇದಿಕೆ ಗೌರವಾಧ್ಯಕ್ಷ ಹಾಗೂ ಮಹಾರಾಜ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎಸ್.ಕೃಷ್ಣಪ್ಪ ಆಕ್ಷೇಪ ವ್ಯಕ್ತಪಡಿಸಿದ್ದು, ಕೂಡಲೇ ಸಮಿತಿ ಹೆಸರು ಬದಲಾವಣೆ ಮಾಡಿಕೊಳ್ಳಬೇಕು. ಇಲ್ಲವಾದರೆ ಕಾನೂನು ಹೋರಾಟ ನಡೆಸುವುದಾಗಿ ಪತ್ರಿಕಾ ಪ್ರಕಟಣೆ ಮೂಲಕ ಎಚ್ಚರಿಸಿದ್ದಾರೆ.

### ಮೋದಿ ಉಪನಾಮ ಪ್ರಕರಣ

## ರಾಹುಲ್ ಅರ್ಜಿ ವಿಚಾರಣೆಗೆ ಸುಪ್ರೀಂ ಒಪ್ಪಿಗೆ






**ನವದೆಹಲಿ:** ಎಲ್ಲಾ ಕಳ್ಳರಿಗೂ ಮೋದಿ ಸರ್‌ನೇಮ್ ಇದೆ ಎಂಬ ವಿವಾದಾತ್ಮಕ ಹೇಳಿಕೆಗೆ ಸಂಬಂಧಿಸಿದಂತೆ 2 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಂಸದ ರಾಹುಲ್ ಗಾಂಧಿ ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಒಪ್ಪಿಗೆ ನೀಡಿದೆ.

ಸೂರತ್ ನ್ಯಾಯಾಲಯವು ತಮಗೆ ವಿಧಿಸಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ರಾಹುಲ್ ಗಾಂಧಿ ಅರ್ಜಿ ಸಲ್ಲಿಸಿದ್ದರು. ಇದನ್ನು ತುರ್ತು ವಿಚಾರಣೆಗೆ ಎತ್ತಿಕೊಳ್ಳುವಂತೆ ಮನವಿ ಮಾಡಲಾಗಿತ್ತು. ಮಂಗಳವಾರ ಸಿಜೆಐ ಡಿವೈ ಚಂದ್ರಚೂಡ್ ಅವರ ಎದುರು ಮಾನಹಾನಿ ಪ್ರಕರಣದ ಶಿಕ್ಷೆ ವಿರುದ್ಧದ ಮೇಲ್ಮನವಿ ಅರ್ಜಿ ಪರಿಶೀಲನೆಗೆ ಬಂದಿತ್ತು. ಈ ಅರ್ಜಿ ಕುರಿತ ವಿಚಾರಣೆಯನ್ನು ಸಿಜೆಐ ಚಂದ್ರಚೂಡ್ ಅವರು ಅದನ್ನು ಜು.21ಕ್ಕೆ ನಿಗದಿಪಡಿಸಿದರು.

ಸೂರತ್ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಗಳನ್ನು ಸೂರತ್ ಮ್ಯಾಜಿಸ್ಟ್ರೇಟ್ ಕೋರ್ಟ್ ಹಾಗೂ ಗುಜರಾತ್ ಹೈಕೋರ್ಟ್ ವಜಾಗೊಳಿಸಿದ್ದವು. ಇದರಿಂದ ರಾಹುಲ್ ಗಾಂಧಿ ಶಿಕ್ಷೆಗೆ ತಡೆ ಸಿಕ್ಕಿರಲಿಲ್ಲ. ಹೀಗಾಗಿ ಶಿಕ್ಷೆ ಕಾರಣದಿಂದ ಅವರು ಕಳೆದುಕೊಂಡಿರುವ ಸಂಸತ್ ಸದಸ್ಯ ಸ್ಥಾನವನ್ನು ಮರಳಿ ಪಡೆಯುವುದು ಸಾಧ್ಯವಾಗಿಲ್ಲ. ಇದೀಗ ಅವರ ಅರ್ಜಿ ವಿಚಾರಣೆಗೆ ಸುಪ್ರೀಂಕೋರ್ಟ್ ಒಪ್ಪಿಗೆ ಸೂಚಿಸಿರುವುದರಿಂದ ಎಲ್ಲರ ಗಮನ ಜು.21ರ ವಿಚಾರಣೆ ಮೇಲೆ ನೆಟ್ಟಿದೆ.

## ಕೈಕೊಟ್ಟ ಮಳೆರಾಯ: ಬರಗಾಲ ಘೋಷಣೆಯೊಂದಿಗೆ ಪ್ರತಿ ಕ್ಷೇತ್ರಕ್ಕೆ ಕೋಟಿ ಅನುದಾನ ಘೋಷಣೆಗೆ ಆಗ್ರಹ



ಬೆಂಗಳೂರು, ಜು.18(ಕೆಎಂಶಿ)– ರಾಜ್ಯದಲ್ಲಿ ಮಳೆ ಅಭಾವ ಉಂಟಾಗಿ ರೈತರು ಬಿತ್ತಿದ ಬೀಜ ಮೊಳಕೆಯೊಡೆದಿಲ್ಲ. ಬರಗಾಲ ಘೋಷಣೆ ಮಾಡಿ, ಪ್ರತಿ ಕ್ಷೇತ್ರಕ್ಕೂ ಒಂದು ಕೋಟಿ ರೂ. ಅನುದಾನ ನೀಡಬೇಕು ಎಂದು ರಾಜ್ಯ ಸರ್ಕಾರವನ್ನು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ವಿಧಾನಸಭೆಯಲ್ಲಿ ನಿಲುವಳಿ ಸೂಚನೆ ಮೇಲೆ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಸೇರಿ ಹಲವೆಡೆ ಮಳೆಯ ಅಭಾವ ಉಂಟಾಗಿದೆ. ನಿಗದಿತ ಸಮಯಕ್ಕೂ ಮಳೆ ಬಂದಿಲ್ಲ. ಮಳೆ ಬಾರದ ಕಾರಣ ರೈತರು ಬಿತ್ತನೆ ಬೀಜಗಳನ್ನು ಹಾಕಿಲ್ಲ. ಜುಲೈ ಅಂತ್ಯದಲ್ಲಿ ಸ್ವಲ್ಪ ಮಳೆಯಾಗಿದೆ. ಆದರೂ ಎಲ್ಲ ಕಡೆಯೂ ಮಳೆಯಾಗಿಲ್ಲ. ಬಹುಷ್ಟು ಜನರು ಮೊದಲ ಸಾರಿ ಬಿತ್ತನೆ ಮಾಡಿದ್ದಾರೆ. ನಂತರ 2ನೇ ಬಾರಿಗೂ ಬಿತ್ತನೆ ಮಾಡಿದ್ದಾರೆ. ಮೊಳಕೆ ಬಂದಿಲ್ಲ. ಇದುವರೆಗೂ 7 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಗಬೇಕಿತ್ತು. ಆದರೆ ಮಳೆ ಇಲ್ಲದೇ ಬರೀ 1 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆ ಮಾಡಲಾಗಿದೆ. ಸರ್ಕಾರ ಇದನ್ನು ಬರಗಾಲ ಎಂದು ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಕುಡಿಯುವ ನೀರಿಗಾಗಿ ಸರ್ಕಾರ ಸಿಇಒಗಳಿಗೆ ಕೊಟ್ಟ ಹಣ ಸಾಲುವುದಿಲ್ಲ. ಪ್ರತಿ ಕ್ಷೇತ್ರಗಳಿಗೂ ಒಂದೊಂದು ಕೋಟಿ ಅನುದಾನ ಕೊಡಬೇಕು ಎಂದರು. ಹಿಂದಿನ ವರ್ಷ ರೈತರ ಸಾವು ಇಷ್ಟಾಯಿತು, ಅಷ್ಟಾಯ್ತು ಅನ್ನುವುದು ಸರಿಯಲ್ಲ. ಅಂಕಿ–ಅಂಶಗಳ ಮೂಲಕ ರೈತರ ಆತ್ಮಹತ್ಯೆ ಬಗ್ಗೆ ಮಾತನಾಡುವುದು ಸರೀನಾ. ನಿರ್ಲಕ್ಷ್ಯತೆಯಿಂದ, ಬೇಜವಾಬ್ದಾರಿಯಿಂದ ಹೇಳಿಕೆ ಸರಿಯಲ್ಲ. ಇದರ ಬಗ್ಗೆ ಸದನದಲ್ಲಿ ಚರ್ಚೆಗೆ ಅವಕಾಶ ಕೊಡುವಂತೆ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

## ಚುನಾವಣಾ ಪ್ರಚಾರಕ್ಕೆ ಆನ್‌ಲೈನ್ ಮೂಲಕ ಏರ್ ಟೈಮ್ ವೋಚರ್‌ಗಳನ್ನು ನೀಡಲಿರುವ ಚುನಾವಣಾ ಆಯೋಗ

**ನವದೆಹಲಿ:** ಸಾರ್ವಜನಿಕ ಪ್ರಸಾರ ಸಂಸ್ಥೆಗಳಾದ ಆಲ್ ಇಂಡಿಯಾ ರೇಡಿಯೋ ಹಾಗೂ ದೂರದರ್ಶನದ ಮೂಲಕ ಪ್ರಚಾರ ನಡೆಸುವುದಕ್ಕೆ ರಾಜಕೀಯ ಪಕ್ಷಗಳಿಗೆ ಚುನಾವಣಾ ಆಯೋಗ ಇನ್ನು ಮುಂದೆ ಏರ್ ಟೈಮ್ ವೋಚರ್‌ಗಳನ್ನು ನೀಡಲಿದೆ. ಮುಂದಿನ ದಿನಗಳಲ್ಲಿ ಸಾರ್ವಜನಿಕ ಪ್ರಸಾರ ಸಂಸ್ಥೆಗಳಲ್ಲಿ ರಾಜಕೀಯ ಪಕ್ಷಗಳ ಪ್ರಚಾರಕ್ಕೆ ಸ್ಲಾಟ್‌ಗಳನ್ನು ಆನ್‌ಲೈನ್ ಮೂಲಕ ನಿಗದಿಪಡಿಸಲಾಗುತ್ತದೆ ಇದರಿಂದ ಕಾರ್ಯಕ್ಷಮತೆ ಹೆಚ್ಚಾಗಲಿದೆ ಎಂದು ಆಯೋಗ ಹೇಳಿದೆ. ರಾಜಕೀಯ ಪಕ್ಷಗಳು ಸರ್ಕಾರಿ ಸ್ವಾಮ್ಯದ ವಿದ್ಯುನ್ಮಾನ ಮಾಧ್ಯಮದ ಬಳಕೆಗೆ ಇರುವ ಈಗಿನ ಯೋಜನೆಗೆ ಆಯೋಗ ತಿದ್ದುಪಡಿ ತಂದಿದೆ. ಐಟಿ ವೇದಿಕೆಯ ಮೂಲಕ ಡಿಜಿಟಲ್ ಏರ್ ಟೈಮ್ ವೋಚರ್‌ಗಳನ್ನು ನೀಡುವ ಮೂಲಕ ತಿದ್ದುಪಡಿ ತರಲಾಗಿದೆ. ಈ ತಿದ್ದುಪಡಿ ಪರಿಣಾಮವಾಗಿ ಇನ್ನು ಮುಂದಿನ ದಿನಗಳಲ್ಲಿ ರಾಜಕೀಯ ಪಕ್ಷಗಳು ತಮ್ಮ ಏರ್ ಟೈಮ್ ವೋಚರ್‌ಗಳನ್ನು ಪಡೆಯಲು ಪ್ರತಿನಿಧಿಗಳನ್ನು ಆಯೋಗದ ಕಚೇರಿಗೆ ಕಳಿಸಬೇಕಿತ್ತು ಆದರೆ ಇನ್ನು ಮುಂದೆ ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಲಿದೆ.

## ಸುಲೋಚನಾ ನಿಧನ



ಮೈಸೂರು,ಜು.18–ಮೈಸೂರಿನ ಚಾಮುಂಡಿಪುರಂ ನಿವಾಸಿ ಸುಲೋಚನಾ(80) ಅವರು ಮಂಗಳವಾರ ನಿಧನರಾದರು. ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ರಘುನಂದನ್ ಸೇರಿ ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



### ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬಸವರಾಜು ರವರು
(ಲೇ॥ಬುರಾಟ ರಂಗಯ್ಯ ಉ॥ ರಂಗಪ್ಪನವರ ಮಗ)
2ನೇ, ಮುಖ್ಯರಸ್ತೆ, ಜಯನಗರ, ಮೈಸೂರು.

ಇವರು ದಿನಾಂಕ 09.07.2023 ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 19.07.2023 ಬುಧವಾರ ಬೆಳಗ್ಗೆ 11 ಗಂಟೆಗೆ ಶ್ರೀ ಮರುಳೇಶ್ವರ ಶಾಂತಿಧಾಮ, ಕಾವೇರಿ ಶಾಲೆ ಎದುರು, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಶ್ರೀಮತಿ ಸಣ್ಣಮ್ಮ ಮತ್ತು ಮಕ್ಕಳು, ಮೃತರ ಸಹೋದರರು ಹಾಗೂ ಕುಟುಂಬವರ್ಗದವರು
ಭೋಜನ: ಮಧ್ಯಾಹ್ನ 12.30ಕ್ಕೆ

### ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಎಸ್.ಮಾದಯ್ಯ ಶ್ರೀಮತಿ ಜಿ.ಮರಿಸಿದ್ದಮ್ಮರವರು

ಇವರು ದಿ: 23–06–2023 ರಂದು ಶ್ರೀ ಎಸ್.ಮಾದಯ್ಯ 103 ಚಾಮುಂಡಿಬೆಟ್ಟ ಮೈಸೂರು ರವರು ಹಾಗೂ ದಿನಾಂಕ: 10–7–2023ರಂದು ಶ್ರೀ ಎಸ್.ಮಾದಯ್ಯರವರ ಧರ್ಮಪತ್ನಿಯವರಾದ ಶ್ರೀಮತಿ ಜಿ.ಮರಿಸಿದ್ದಮ್ಮರವರು ದೈವಾಧೀನರಾಗಿದ್ದು ಉತ್ತರಕ್ರಿಯಾದಿ ಕಾರ್ಯವನ್ನು ದಿ: 20–07–2023ರಂದು ಸಂಜೆ 7.00ಕ್ಕೆ ಕಾರ್ಯವನ್ನು ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದ್ದು ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ.

ದುಃಖತಪ್ತರು: ನಾಗೇಂದ್ರ ಮತ್ತು ಅಣ್ಣರಮ್ಮಂದಿರು ಹಾಗೂ ಸೊಸೆಯಂದಿರು ಹಾಗೂ ಸಹೋದರಿಯರು ಹಾಗೂ ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

### ಮೂರನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ **ಮೂರು** ವರ್ಷವಾಯಿತು ಸದಾ ನಿಮ್ಮ ನೆನಪಿನಲ್ಲಿರುವ ಜಯಲಕ್ಷ್ಮಿ.ಎಂ.(ಧರ್ಮಪತ್ನಿ) ಶಿಕ್ಷಣ ಇಲಾಖೆ, ಹರ್ಷ.ಎನ್ & ದರ್ಶನ್.ಎನ್ (ಮಕ್ಕಳು). ಶಿವಣ್ಣ.ಹೆಚ್.ಎಂ (ಫಾರ್ಮಸ್ ಟ್ರಸ್ಟ್) ಡಾ॥ ರವಿಕುಮಾರ್.ಎಂ (ಅಸಿಸ್ಟೆಂಟ್ ಪ್ರೊಫೆಸರ್) ಅನಿಲ್ ಕುಮಾರ್.ಎಂ (ರೈಲ್ವೇ ಇಲಾಖೆ) ಮತ್ತು ಕುಟುಂಬದವರು

ನರಸಿಂಹಮೂರ್ತಿ.ಹೆಚ್
ಜನನ: 04.07.1972 ಮರಣ: 19.07.2020

### ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ **ಜಯಮ್ಮ**

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿದೆ. ದುಃಖತಪ್ತರು: ಪತಿ ನಂಜುಂಡೇಗೌಡ ವಿ.ಎಸ್.ಎಸ್.ಎನ್. ಅಧ್ಯಕ್ಷರು ಗರ್ಗೇಶ್ವರಿ, ಮಕ್ಕಳಾದ ಗೋಪಾಲರಾಜು, ಪುಟ್ಟಸ್ವಾಮಿ, ಮಹದೇವ ಮತ್ತು ಸೊಸೆಯಂದಿರಾದ ಶ್ರೀಮತಿ ರತ್ನಮ್ಮ ಗೋಪಾಲರಾಜು ಮಾಜಿ ಜಿ.ಪಂ.ಸದಸ್ಯರು, ಶಾರದ, ಲಕ್ಷ್ಮಿ ಮತ್ತು ಮೊಮ್ಮಕ್ಕಳು ಗರ್ಗೇಶ್ವರಿ ಗ್ರಾಮ, ಟಿ.ನರಸೀಪುರ ತಾಲ್ಲೂಕು



### ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಎನ್. ಮಹಾದೇವಸ್ವಾಮಿ
ನಿವೃತ್ತ ಶಿಕ್ಷಕರು, ಹಾನವಾಡಿ

ಇವರು ದಿ: 08.07.2023 ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ:19.07.2023 ಬುಧವಾರ ಬೆಳಗ್ಗೆ 9 ರಿಂದ ಮಧ್ಯಾಹ್ನ 12–00 ಗಂಟೆ ಯೊಳಗೆ ಮೃತರ ಸ್ವಗೃಹ ಹಾನವಾಡಿ ಗ್ರಾಮದಲ್ಲಿ ಏರ್ಪಡಿ ಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ಶಾಂತಾಮಣಿ ಕೆ. ಮತ್ತು ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು ಹಾಗೂ ಹಾನವಾಡಿ ಗ್ರಾಮಸ್ಥರು.



### ಮೈಸೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನೀಸ&ಒಚ (ಪೂರ್ವ) ವಿಭಾಗ, ವಾಣಿನೀಸ ಆವರಣ, ಯಾದವಗಿರಿ, ಮೈಸೂರು.

ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ (ಪೂರ್ವ)/ಟಿಎನ್–2/235/2023–24 ದಿನಾಂಕ: 18–07–2023

**ಟೆಂಡರ್ ಪ್ರಕಟಣೆ**

**ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ**

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಹಾಗೂ 15ನೇ ಹಣಕಾಸು ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ವಿವರ | ಕಾಮಗಾರಿಗಳು | ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) | ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ (ಸಂಜೆ 5.30 ಗಂಟೆ ನಂತರ) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ (ಸಂಜೆ 5.25 ಗಂಟೆ ಒಳಗೆ) | ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಂಜೆ 5.30 ಗಂಟೆ ನಂತರ) |
|---|---|---|---|---|---|---|
| 1. | Kw-1 | 1 ಸಂಖ್ಯೆ | 12.00 | 19.07.2023 | 26.07.2023 | 28.07.2023 |
| 2. | Service Tender Kc-2 | 7 ಸಂಖ್ಯೆ | 163.15 | 21.07.2023 | 05.08.2023 | 07.08.2023 |
| 3. | Kw-1, Kw-2, Kw-3 & Kw-4 | 5 ಸಂಖ್ಯೆ | 384.10 | 21.07.2023 | 05.08.2023 | 07.08.2023 |

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ
ಮೈಸೂರು ಮಹಾನಗರ ಪಾಲಿಕೆ, ಮೈಸೂರು

### ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ

ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

**ಟೆಂಡರ್ ಪ್ರಕಟಣೆ – (ಇ–ಟೆಂಡರ್ ಮುಖಾಂತರ ಮಾತ್ರ)**

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಆದ **https://kppp.karnataka.gov.in** ಅಪ್‌ಲೋಡ್ ಮಾಡಲಾಗುತ್ತದೆ.

| ಕ್ರ.ಸಂ | ಟೆಂಡರ್ ಪ್ರಕಟಣೆ ಮತ್ತು ದಿನಾಂಕ | ಸೇವೆಯ ವಿವರ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|
| 01 | KMF/2023-24/IND0127 | ಒಕ್ಕೂಟಕ್ಕೆ ಅಗತ್ಯವಿರುವ ಆಗ್ರೋ ಬೇಸ್ಡ್ ಪ್ರೊಡಕ್ಟ್ ಅನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ. | 11.08.2023 ಸಂಜೆ 5:00 ಗಂಟೆಯವರೆಗೆ |
| 02 | KMF/2023-24/IND0128 | ಒಕ್ಕೂಟಕ್ಕೆ ಅಗತ್ಯವಿರುವ 10KL ಸೋಲಾರ್ ... [illegible] | 21.07.2023 ಸಂಜೆ 5:00 ಗಂಟೆಯವರೆಗೆ |
| 03 | KMF/2023-24/IND0157 | ಎಸ್.ಎಸ್ ವಾಟರ್ ಜಗ್ (01 ಸಂಖ್ಯೆ) ಹಾಗೂ ಎಸ್.ಎಸ್ ... ಗ್ಲಾಸ್ (06 ಸಂಖ್ಯೆ) ... [illegible] | 24.07.2023 ಸಂಜೆ 5:00 ಗಂಟೆಯವರೆಗೆ |
| 04 | KMF/2023-24/IND0160 | [illegible] ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ. | 17.08.2023 ಸಂಜೆ 5:00 ಗಂಟೆಯವರೆಗೆ |
| 05 | KMF/2023-24/IND0161 | [illegible] ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಬಗ್ಗೆ. | 17.08.2023 ಸಂಜೆ 5:00 ಗಂಟೆಯವರೆಗೆ |

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.

### तम्बाकू बोर्ड / TOBACCO BOARD

(भारत सरकार, वाणिज्य एवं उद्योग मंत्रालय, वाणिज्य विभाग)
(GOVT. OF INDIA, MIN. OF COMMERCE)
नीलामी निदेशालय / DIRECTORATE OF AUCTIONS
1/9 III Cross, CSI Compound, 4th Floor,
Unity Building Annexe, Mission Road, बेंगलूरु / BENGALURU- 560 027
अंप्रस से प्रमाणित संस्थान / An ISO Certified Organisation)
Phone: 080-22236599/22233304 Fax: 080-22225075
email: bangaloreoffice@tobaccoboard.co.in

Ref.No.TB/DOA/Pre-Auc-KK/Pub/GAD/2023-24 Date: 18.07.2023

**SHORT TERM RE-TENDER NOTIFICATION**

Sealed Tenders are invited from interested tenderers to provide Car on hire to the Regional Manager's Office, Tobacco Board, Mysore in Karnataka for 2023-24 auctions

| | |
|---|---|
| Name of the work | Hiring of vehicle for Regional Manager's Office, Mysore in Karnataka |
| Last date and time for closing the tender | 27/07/2023 by 4:00 PM |
| Date and Time of Opening the tender | 27/07/2023 at 4:30 PM |
| EMD amount in Rs. | 20,000.00 |
| Cost of Tender Form | Rs. 500+GST @18% |

The bid documents for the above contract is available online at Tobacco Board website i.e, https://tobaccoboard.com/tenders.php. The tender documents can also be obtained at the Office of the Regional Manager, Tobacco Board, Mysuru in Karnataka by paying the requisite cost of the tender form as mentioned above.

All the tenders have to be dropped in the Tender Box kept **at the Office of the Regional Manager, Tobacco Board, Mysuru Only.** Any other mode **will not be accepted.**

Sd/- Regional Manager,
DOA, Bengaluru

### ಪುರಸಭಾ ಕಾರ್ಯಾಲಯ, ಬನ್ನೂರು

ಮೈಸೂರು ಮಳವಳ್ಳಿ ರಸ್ತೆ, ಬನ್ನೂರು – 571101. ತಿ.ನರಸೀಪುರ ತಾ॥ ಮೈಸೂರು ಜಿಲ್ಲೆ.
ಫೋನ್:08227–276058, 08227–276111,
ಇಮೇಲ್: itstaff_ulb_bannur@yahoo.com ವೆಬ್‌ಸೈಟ್: www.bannurtown.mrc.gov.in

ಸಂ.:ಪುಸಬ:ತಾಂತ್ರಿಕ ಶಾ:ಎಸ್.ಆರ್–01/2023–24 ದಿನಾಂಕ:17.07.2023

**–: ಟೆಂಡರ್ ಪ್ರಕಟಣೆ :–**

ಬನ್ನೂರು ಪುರಸಭಾ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ಎಸ್.ಎಫ್.ಸಿ ಕುಡಿಯುವ ನೀರು ಅನುದಾನ ಯೋಜನೆಯಡಿಗಳಲ್ಲಿ ಈ ಕೆಳಕಂಡ ಕಾಮಗಾರಿಯನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ 4ನೇ ದರ್ಜೆಯ ಹಾಗೂ ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ K.W-1 ನಿಯಮಗಳ ಅನ್ವಯ ಹಾಗೂ 1999 ಹಾಗೂ 2000ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಕಾಮಗಾರಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ **https://kppp.karnataka.gov.in** ನಿಂದ ಟೆಂಡರ್ ಷರತ್ತು ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ವಿವರ ಷರತ್ತು ಹಾಗೂ ನಿಯಮಗಳಿಗೆ ತಾಂತ್ರಿಕ ಶಾಖೆಯನ್ನು ಸಂಪರ್ಕಿಸತಕ್ಕದ್ದು.

1. ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 26.07.2023 ಸಂಜೆ 5.30 ಗಂಟೆಯವರೆಗೆ. 2.** ಟೆಂಡರ್ ತೆರೆಯುವ ದಿನಾಂಕ: **28.07.2023 ಸಂಜೆ 5.30** ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನಾಂಕದಂದು ತೆರೆಯಲಾಗುವುದು.

| ಕ್ರ ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ ರೂ.ಗಳಲ್ಲಿ | ಗುತ್ತಿಗೆದಾರರ ದರ್ಜೆ | ಕಾಲಾವಧಿ |
|---|---|---|---|---|---|
| 1. | DMA/2023-24/OW/WORK_INDENT11153 | 3.00 | 7,500 | 4ನೇ ದರ್ಜೆ ಹಾಗೂ ಮೇಲ್ಪಟ್ಟು | 3 ತಿಂಗಳು |

**ಸೂಚನೆ:–** 1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಮತ್ತು ಇತರೆ ಬದಲಾವಣೆಗಳಿದ್ದಲ್ಲಿ ಹಾಗೂ ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/–
(ಆರ್ ಹೇಮಂತರಾಜು)
ಮುಖ್ಯಾಧಿಕಾರಿ, ಪುರಸಭೆ, ಬನ್ನೂರು

DIPR/MYS/KAVITA/127/2023-24